
ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಸದಾ ಮನೆಯಲ್ಲಿಯೇ ಇರುವ ಹಿರಿಯರಿಗೂ ಸರಳ ವ್ಯಾಯಾಮಗಳ ಅಗತ್ಯವಿದೆ.



ಆಳ-ಅಗಲ
ಎಚ್‌ಎಸ್‌ಆರ್‌ಪಿ: ಹತ್ತಾರು ತೊಡಕು

ಮಗನ ಕಣಕ್ಕಿಳಿಸಲು ಖಂಡ್ರೆ ಶತ ಪ್ರಯತ್ನ **6**

ಒಕ್ಕಲಿಗರ ಸಂಘದ ಜಮೀನು ಕೈತಪ್ಪುವ ಭೀತಿ **7**

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
71,072 ▼	21,616 ▼	₹64,300 (ಬೆಂಗಳೂರು) ▼	₹72,800 (ಬೆಂಗಳೂರು) ▲	83.00 ▲

ತೆರಿಗೆ ಹಂಚಿಕೆ ಪಾಲು, ಬರ ಪರಿಹಾರ ನೀಡಿಕೆಯಲ್ಲಿ ತಾರತಮ್ಯ: ಗೆಹಲೋತ್

ಕೇಂದ್ರದ ನಡೆ: ರಾಜ್ಯಪಾಲ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನ್ಯಾಯ, ಧರ್ಮದ ರೀತಿಯಲ್ಲಿ ರಾಜ್ಯ ಸರ್ಕಾರಕ್ಕೆ ಸಿಗಬೇಕಾದ ತೆರಿಗೆ ಪಾಲು ಸಿಗುತ್ತಿಲ್ಲ; ಅನೇಕ ಜ್ಞಾಪನ ಪತ್ರಗಳನ್ನು ಸಲ್ಲಿಸಿದರೂ ಬರ ಪರಿಹಾರ ಸಿಕ್ಕಿಲ್ಲ' ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

ಕೇಂದ್ರ ಸರ್ಕಾರವು ಕರ್ನಾಟಕದ ವಿರುದ್ಧ ತಾರತಮ್ಯ ಮಾಡುತ್ತಿದೆ ಎಂದು ಆಪಾದಿಸಿದ್ದ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ತಮ್ಮ ಸಚಿವರು, ಶಾಸಕರ ದಂಡಿನೊಂದಿಗೆ ಇತ್ತೀಚೆಗೆ ದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಿ, ದೇಶದ ಗಮನ ಸೆಳೆದಿತ್ತು. ಆ ಬೆನ್ನಲ್ಲೇ, ರಾಜ್ಯಪಾಲರ ಭಾಷಣದಲ್ಲೂ ರಾಜ್ಯದ ವಿಷಯದಲ್ಲಿ ಕೇಂದ್ರದ ಧೋರಣೆಯನ್ನು ಪ್ರಸ್ತಾವಿಸಲಾಗಿದೆ.

'ಎಲ್ಲ ಜನಪರ ಯೋಜನೆಗಳನ್ನು ಜಾರಿ ಮಾಡಲು ಸರ್ಕಾರ ಸಿದ್ಧವಿದೆ. ಆದರೆ, ವಿವಿಧ ಮೂಲಗಳಿಂದ ಸಿಗಬೇಕಾದಷ್ಟು ಸಂಪನ್ಮೂಲಗಳು ಸಿಗುತ್ತಿಲ್ಲ. ದೇಶದಲ್ಲಿಯೇ ಅತಿ ಹೆಚ್ಚು ತೆರಿಗೆ ಸಂಗ್ರಹಿಸಿ ಕೊಡುವ ರಾಜ್ಯಗಳಲ್ಲಿ ಕರ್ನಾಟಕವು ಎರಡನೇ ಸ್ಥಾನದಲ್ಲಿದೆ. ಆದರೆ, ತೆರಿಗೆ ಪಾಲು ಪಡೆಯುವ ವಿಚಾರದಲ್ಲಿ ಹತ್ತನೇ ಸ್ಥಾನದಲ್ಲಿದೆ' ಎಂದರು.

7ನೇ ಪುಟ ನೋಡಿ



ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಸಭಾಪತಿ ಬಸವರಾಜ ಹೊರಟ್ಟಿ, ಸಭಾಧ್ಯಕ್ಷ ಯು.ಟಿ. ಖಾದರ್ ಸ್ವಾಗತಿಸಿದರು. ಕಾನೂನು ಸಚಿವ ಎಚ್‌.ಕೆ.ಪಾಟೀಲ, ಮುಖ್ಯಕಾರ್ಯದರ್ಶಿ ರಜನೀಶ್ ಗೋಯಲ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಖ್ಯಸಚೇತಕ ಅಶೋಕ ಪಟ್ಟಣ ಹಾಜರಿದ್ದರು

'ಮನುವಾದ ವಿರುದ್ಧ ಚಳವಳಿಯೇ ಸ್ಫೂರ್ತಿ'

'ಮನುವಾದದ ವಿರುದ್ಧ ಚಳವಳಿ ರೂಪಿಸಿ ಸಮಾನತೆಯ ಕನಸನ್ನು ಬಿತ್ತಿದ ಬಸವಣ್ಣನವರು, ಅಲ್ಲಮ ಪ್ರಭುಗಳು ಮುಂತಾದವರನ್ನು ಮತ್ತೆ ಮತ್ತೆ ನಮ್ಮ ನಿಜ ಜೀವನದಲ್ಲಿ ಸ್ಫೂರ್ತಿದಾಯಕರನ್ನಾಗಿ ಮಾಡಿಕೊಳ್ಳಲೇಬೇಕಾಗಿದೆ' ಎಂದು ಗೆಹಲೋತ್ ಹೇಳಿದರು. ದುಡಿಮೆ ಮತ್ತು ಸಂಪತ್ತಿನ ಸಮಾನ ಹಂಚಿಕೆಯ ತತ್ವವನ್ನು ಪ್ರತಿಪಾದಿಸಿದ ಹಾಗೂ ಅನುಭವ ಮಂಟಪದ ಮೂಲಕ ಸಂಸದೀಯ ವ್ಯವಸ್ಥೆಯ ಮಾದರಿಯನ್ನು ಜಗತ್ತಿಗೆ ಪರಿಚಯಿಸಿದ ವಚನ ಚಳವಳಿಯ ನೇತಾರ ಬಸವಣ್ಣನವರನ್ನು ನಾಡಿನ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿರುವುದು ಹೆಮ್ಮೆಯ ಸಂಗತಿ ಎಂದರು.

> **ಸುಸ್ಥಿರ ಅಭಿವೃದ್ಧಿ, ಸಾಮಾಜಿಕ ಸಾಮರಸ್ಯವನ್ನು ಒಳಗೊಂಡ 'ಕರ್ನಾಟಕ ಮಾದರಿ'ಯ ಮೂಲಕ ಇಡೀ ದೇಶದಲ್ಲಿ ಕರ್ನಾಟಕವನ್ನು ವಿಶಿಷ್ಟವಾಗಿ ರೂಪಿಸುವುದು ಸರ್ಕಾರದ ಗುರಿ**
> **ಥಾವರಚಂದ್ ಗೆಹಲೋತ್,** ರಾಜ್ಯಪಾಲ

7ನೇ ಪುಟ ನೋಡಿ

ಭಾಷಣದ ಮುಖ್ಯಾಂಶಗಳು

- ವಿವಿಧ ಇಲಾಖೆಗಳಲ್ಲಿ ಸರ್ಕಾರಿ ಹುದ್ದೆಗಳ ನೇಮಕಾತಿ ಆಗುತ್ತಿದೆ. ಈಗಾಗಲೇ 16 ಸಾವಿರಕ್ಕೂ ಅಧಿಕ ಯುವಜನರು ತರಬೇತಿ ಅವಧಿಯಲ್ಲಿದ್ದಾರೆ. ಅಲ್ಲದೇ, 14 ಸಾವಿರಕ್ಕೂ ಅಧಿಕ ಹುದ್ದೆಗಳಿಗೆ ನೇಮಕಾತಿ ವಿವಿಧ ಹಂತಗಳಲ್ಲಿ ನಡೆಯುತ್ತಿದೆ.
- ಇಂದಿರಾ ಕ್ಯಾಂಟೀನ್-2 ಯೋಜನೆಯಡಿ 2ನೇ ಹಂತದಲ್ಲಿ ಹೊಸ ಪಟ್ಟಣಗಳಲ್ಲಿ ಹಾಗೂ ಕ್ಯಾಂಟೀನ್ ನಿರ್ಮಾಣವಾಗದೇ ಇರುವ ಸ್ಥಳೀಯ ಸಂಸ್ಥೆಗಳಲ್ಲಿ ಹೊಸ ಮೆನುವಿನೊಂದಿಗೆ 188 ಹೊಸ ಕ್ಯಾಂಟೀನ್‌ಗಳನ್ನು ಆರಂಭಿಸಲಾಗುತ್ತಿದೆ.
- 2023-24ನೇ ಬಜೆಟ್‌ನಲ್ಲಿ ಜಲಸಂಪನ್ಮೂಲ ಇಲಾಖೆ ಒಟ್ಟು ₹16,735.49 ಕೋಟಿ ಅನುದಾನ ಒದಗಿಸಲಾಗಿದೆ. ಡಿಸೆಂಬರ್ ಕೊನೆಗೆ ₹10,357.91 ಕೋಟಿ ಆರ್ಥಿಕ ಪ್ರಗತಿ ಸಾಧಿಸಲಾಗಿದೆ. 31,117.98 ಎಕರೆ ಪ್ರದೇಶಕ್ಕೆ ನೀರಾವರಿ ಕಲ್ಪಿಸಲಾಗಿದೆ.
- ಅನ್ನಭಾಗ್ಯ ಯೋಜನೆಯಡಿ 5 ಕೆ.ಜಿ ಆಹಾರ ಧಾನ್ಯದ ಬದಲಾಗಿ ಪ್ರತಿ ಕೆ.ಜಿ.ಗೆ ₹34ರಂತೆ ಕುಟುಂಬದ ಸದಸ್ಯರ ಬ್ಯಾಂಕ್ ಖಾತೆಗೆ ನೇರ ನಗದಿನ ಮೂಲಕ ಜನವರಿ ಅಂತ್ಯಕ್ಕೆ ₹4,595 ಕೋಟಿ ವರ್ಗಾಯಿಸಲಾಗಿದೆ.
- ಎಸ್‌ಸಿಎಸ್‌ಪಿ- ಟಿಎಸ್‌ಪಿ ಕಾರ್ಯಕ್ರಮಗಳಿಗೆ 2023-24ನೇ ಸಾಲಿನಲ್ಲಿ ₹34,580.38 ಕೋಟಿ ಅನುದಾನ ಒದಗಿಸಿ ಸಮರ್ಪಕ ಯೋಜನೆಗಳ ಮೂಲಕ ಅನುಷ್ಠಾನ ಮಾಡಲಾಗುತ್ತಿದೆ.

> **ಹಿಂದಿನ ಬಿಜೆಪಿ ಸರ್ಕಾರ ಜಾರಿಗೆ ತಂದ ಯೋಜನೆಗಳನ್ನು ತನ್ನದೇ ಯೋಜನೆಯಾಗಿ ಬಿಂಬಿಸಿಕೊಂಡಿದೆ. ಕೇವಲ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿದೆ**
> **ಆರ್. ಅಶೋಕ**
> ವಿರೋಧ ಪಕ್ಷದ ನಾಯಕ

> **ದಿನಕ್ಕೆ ನೂರು ಸುಳ್ಳು ಹೇಳಿಕೊಂಡು ಓಡಾಡುವ ಮುಖ್ಯಮಂತ್ರಿ, ಸಚಿವರು ರಾಜ್ಯಪಾಲರಿಂದಲೂ ಸುಳ್ಳು ಭಾಷಣ ಮಾಡಿಸಿದ್ದಾರೆ. ಭಾಷಣದಲ್ಲಿ ಉಪ್ಪು, ಹುಳಿ, ಖಾರ ಏನೂ ಇಲ್ಲ**
> **ಎಚ್‌.ಡಿ. ಕುಮಾರಸ್ವಾಮಿ**
> ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಪ್ರಜಾವಾಣಿ ಜಾಲತಾಣಕ್ಕೆ 'ಅತ್ಯುತ್ತಮ ಸುದ್ದಿ ವೆಬ್‌ಸೈಟ್' ರಜತ ಪ್ರಶಸ್ತಿ

2023ರ ಪ್ರತಿಷ್ಠಿತ 'ದಕ್ಷಿಣ ಏಷ್ಯಾ ಡಿಜಿಟಲ್ ಮೀಡಿಯಾ' ಪ್ರಶಸ್ತಿಗಳು ಘೋಷಣೆಯಾಗಿದ್ದು, ಕನ್ನಡದ ಅತ್ಯಂತ ವಿಶ್ವಾಸಾರ್ಹ ಮಾಧ್ಯಮ ಪ್ರಜಾವಾಣಿಯು **(www. prajavani. net)** 'ಅತ್ಯುತ್ತಮ ಸುದ್ದಿ ಜಾಲತಾಣ' ವಿಭಾಗದಲ್ಲಿ ರಜತ ಪುರಸ್ಕಾರಕ್ಕೆ ಭಾಜನವಾಗಿದೆ.



ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುದ್ದಿ ಪ್ರಕಾಶಕರ ಜಾಗತಿಕ ಒಕ್ಕೂಟ (WAN-IFRA) ನೀಡುವ ದಕ್ಷಿಣ ಏಷ್ಯಾ ಡಿಜಿಟಲ್ ಮೀಡಿಯಾ ಪ್ರಶಸ್ತಿಗಳ 7ನೇ ಆವೃತ್ತಿಯಲ್ಲಿ ಪ್ರಜಾವಾಣಿ ಜಾಲತಾಣವು ಆಂಗ್ಲ ಸುದ್ದಿ ತಾಣ 'ದಿ ಹಿಂದೂ' ಜೊತೆಗೆ ದ್ವಿತೀಯ ಪ್ರಶಸ್ತಿಯನ್ನು ಹಂಚಿಕೊಂಡಿದೆ.

ಈ ವರ್ಷದ ಪ್ರತಿಷ್ಠಿತ ಪ್ರಶಸ್ತಿಗೆ ಭಾಜನವಾದ ಕನ್ನಡದ ಏಕೈಕ ಸುದ್ದಿ ಜಾಲತಾಣ ಎಂಬ ಹೆಗ್ಗಳಿಕೆ ಪ್ರಜಾವಾಣಿಯದು. ದಿ ಪ್ರಿಂಟರ್ಸ್ ಮೈಸೂರು ಪ್ರೈವೆಟ್ ಲಿ. ಸಂಸ್ಥೆಯ ಭಾಗವಾಗಿರುವ ಪ್ರಜಾವಾಣಿ ಜಾಲತಾಣವು ಇತ್ತೀಚೆಗಷ್ಟೇ ವಿನೂತನ ವಿನ್ಯಾಸದೊಂದಿಗೆ, ಅತ್ಯಾಧುನಿಕ ತಂತ್ರಜ್ಞಾನಗಳಿರುವ ಹೊಸ ಸಿಎಂಎಸ್ (ಸುದ್ದಿ-ಮಾಹಿತಿ ನಿರ್ವಹಣಾ ವ್ಯವಸ್ಥೆ) ಅಳವಡಿಸಿಕೊಂಡಿದೆ.

9ನೇ ಪುಟ ನೋಡಿ

'ದೆಹಲಿ ಚಲೋ': ರೈತರಿಗೆ ಅಡ್ಡಿ

ನವದೆಹಲಿ (ಪಿಟಿಐ): ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಖಾತರಿ ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸುಮಾರು 200 ರೈತ ಸಂಘಟನೆಗಳು ಮಂಗಳವಾರ (ಫೆ.13) 'ದೆಹಲಿ ಚಲೋ' ಹಮ್ಮಿಕೊಂಡಿವೆ. ಆದರೆ, ಅನ್ನದಾತರ ಪ್ರತಿಭಟನೆ ತಡೆಯಲು ಸರ್ಕಾರಗಳು ಶತ ಪ್ರಯತ್ನ ಮಾಡಿವೆ. **9**

ಮರಣದಂಡನೆ ಭಾರತೀಯರ ಬಿಡುಗಡೆ

ನವದೆಹಲಿ (ಪಿಟಿಐ): ಕತಾರ್‌ನಲ್ಲಿ ಮರಣದಂಡನೆ ವಿಧಿಸಿದ್ದ ಭಾರತೀಯ ನೌಕಾಪಡೆಯ ಎಂಟು ಮಂದಿ ಮಾಜಿ ಸಿಬ್ಬಂದಿಯನ್ನು ಬಿಡುಗಡೆ ಮಾಡಲಾಗಿದೆ. ಅವರಿಗೆ 2023ರ ಅಕ್ಟೋಬರ್ ತಿಂಗಳಲ್ಲಿ ಮರಣದಂಡನೆ ವಿಧಿಸಲಾಗಿತ್ತು. ನಂತರ ಇದನ್ನು ಜೈಲು ಶಿಕ್ಷೆಯನ್ನಾಗಿ ಪರಿವರ್ತಿಸಲಾಗಿತ್ತು. ಇದಾದ 46 ದಿನಗಳ ಬಳಿಕ ಇವರೆಲ್ಲ ಬಿಡುಗಡೆಯಾಗಿದ್ದಾರೆ. **12**

ಕೇಂದ್ರದ ಟೀಕೆ ಕೈಬಿಟ್ಟ ರಾಜ್ಯಪಾಲ

ಚೆನ್ನೈ (ಪಿಟಿಐ): ತಮಿಳುನಾಡು ವಿಧಾನಸಭೆಯನ್ನು ಉದ್ದೇಶಿಸಿ ಭಾಷಣ ಮಾಡುವಾಗ ರಾಜ್ಯಪಾಲ ಆರ್.ಎನ್. ರವಿ ಅವರು ಸರ್ಕಾರ ಸಿದ್ಧಪಡಿಸಿಕೊಟ್ಟ ಭಾಷಣವನ್ನು ಪೂರ್ತಿಯಾಗಿ ಓದಲು ನಿರಾಕರಿಸಿದರು. ಸರ್ಕಾರ ಸಿದ್ಧಪಡಿಸಿ ಭಾಷಣದಲ್ಲಿ ಕೇಂದ್ರ ಸರ್ಕಾರದ ಬಗ್ಗೆ ಕಟುವಾದ ಟೀಕೆಗಳು ಇದ್ದವು. **12**

ಒಳ ಪುಟಗಳು



ಚಿನಕುರಳಿ

ಪ್ರಕಾಶ್ ಶೆಟ್ಟಿ





ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ
ಅಧಿಕಾರ ಸ್ವೀಕಾರ ಮಾಡುತ್ತಿರುವ, ಜನಪ್ರಿಯ ಶಾಸಕರು, ನಮ್ಮೆಲ್ಲರ ನೆಚ್ಚಿನ ನಾಯಕರಾದ
ಶ್ರೀ ಹೆಚ್ ಸಿ ಬಾಲಕೃಷ್ಣ
ಅವರಿಗೆ
ಹೃತ್ಪೂರ್ವಕ ಅಭಿನಂದನೆಗಳು
ದಿನಾಂಕ: 13.02.2024 ಮಂಗಳವಾರ
ಸ್ಥಳ:
ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ ಕಛೇರಿ,
ಒರಿಯನ್ ಮಾಲ್ ಮುಂಭಾಗ, ರಾಜಾಜಿನಗರ
ಸಮಯ: ಮಧ್ಯಾಹ್ನ 12.05 ಗಂಟೆಗೆ
ಶುಭ ಕೋರುವವರು
ಶ್ರೀ ಆರ್. ಕೃಷ್ಣಪ್ಪ, ಐಯ್ಯಂಡಹಳ್ಳಿ

2006–07ರ ಯೋಜನೆಗೆ ಮತ್ತೆ ಜೀವ ನೀಡಲು ಬಿಎಂಟಿಸಿ ಚಿಂತನೆ

ಮಹಿಳೆಯರಿಗೆ ಗುಲಾಬಿ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಪ್ರಯಾಣಿಕರಿಗಾಗಿಯೇ ಮೀಸಲಾಗಿರುವ ಗುಲಾಬಿ (ಪಿಂಕ್) ಬಸ್ ಅನ್ನು ನಗರದಲ್ಲಿ ಮತ್ತೆ ಪರಿಚಯಿಸಲು ಸಾರಿಗೆ ಇಲಾಖೆ ಚಿಂತನೆ ನಡೆಸಿದೆ.

2023ರ ಜೂನ್ 11ರಂದು ಶಕ್ತಿ ಯೋಜನೆ ಜಾರಿಯಾದ ನಂತರ, ನಿಗಮಗಳ ಬಸ್‌ಗಳಲ್ಲಿ ಪ್ರಯಾಣಿಸುವ ಮಹಿಳೆಯರ ಸಂಖ್ಯೆ ಅಧಿಕಗೊಂಡಿದೆ. ಯೋಜನೆ ಜಾರಿಯಾದಾಗಿನಿಂದ ಫೆಬ್ರುವರಿ 11ರವರೆಗೆ ನಾಲ್ಕು ನಿಗಮಗಳಲ್ಲಿ 151.35 ಕೋಟಿ ಬಾರಿ ಮಹಿಳೆಯರು ಸಂಚರಿಸಿದ್ದಾರೆ. ಅದರಲ್ಲಿ ಬಿಎಂಟಿಸಿ ಬಸ್‌ಗಳಲ್ಲಿ ಸಂಚರಿಸಿದವರ ಪ್ರಮಾಣವೇ 48.39 ಕೋಟಿ ಆಗಿದೆ. ಈ ಕಾರಣದಿಂದ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ಬಸ್ ಪರಿಚಯಿಸುವ ಇರಾದೆಯನ್ನು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಇಟ್ಟುಕೊಂಡಿದ್ದಾರೆ.

‘ಕೆಎಸ್‌ಆರ್‌ಟಿಸಿ ಅಶ್ವಮೇಧ ಬಸ್‌ಗಳಿಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಗುಲಾಬಿ ಬಸ್ ಒದಗಿಸುವ ವಿಚಾರವನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಸ್ತಾಪಿಸಿದರು. ಇದೊಂದು ಉತ್ತಮ ಚಿಂತನೆಯಾಗಿದ್ದು, ಶೀಘ್ರದಲ್ಲೇ ಪಿಂಕ್ ಬಸ್‌ಗಳನ್ನು ರಸ್ತೆಗಿಳಿಸಲು ಯೋಚಿಸಿದ್ದೇವೆ. ಆದರೆ, ಎಷ್ಟು ಗುಲಾಬಿ ಬಸ್‌ಗಳನ್ನು ರಸ್ತೆಗೆ ಇಳಿಸಬೇಕು? ಯಾವ ಮಾರ್ಗಗಳನ್ನು ನಿಗದಿ ಮಾಡಬೇಕು ಎಂಬುದೆಲ್ಲ ಮುಂದೆ ನಿರ್ಧಾರವಾಗಬೇಕು’ ಎಂದು ರಾಮಲಿಂಗಾರೆಡ್ಡಿ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಹಿಂದೆಯೂ ಪ್ರಯತ್ನ: 2006-07ರಲ್ಲಿ ಮಹಿಳೆಯರಿಗಾಗಿಯೇ ಬಿಎಂಟಿಸಿಯಿಂದ ಗುಲಾಬಿ ಬಸ್ ಆರಂಭಿಸಲಾಗಿತ್ತು. ಆದರೆ, ಮಹಿಳೆಯರಿಂದ ಉತ್ತಮ ಸ್ಪಂದನೆ ದೊರೆಯದೇ ಇದ್ದಿದ್ದರಿಂದ ಯೋಜನೆ ಸ್ಥಗಿತಗೊಂಡಿತ್ತು.

2017ರಲ್ಲಿ ಮತ್ತೊಮ್ಮೆ ಗುಲಾಬಿ ಬಸ್ ಚರ್ಚೆ ಮುನ್ನೆಲೆಗೆ ಬಂದಿತ್ತು. ಅದು ಮುಂದುವರಿದು 2019ರಲ್ಲಿ ‘ನಿರ್ಭಯಾ’ ಯೋಜನೆಯಡಿ 47 ಗುಲಾಬಿ ಬಸ್ ಖರೀದಿಸಲು ನಿರ್ಧರಿಸಲಾಗಿತ್ತು. ಕೋವಿಡ್ ಮತ್ತಿತರ ಕಾರಣದಿಂದ ಖರೀದಿ ಪ್ರಕ್ರಿಯೆ ನಡೆದಿರಲಿಲ್ಲ. ಈಗ ಮತ್ತೆ ಗುಲಾಬಿ ಬಸ್ ಚರ್ಚೆ ಮುನ್ನೆಲೆಗೆ ಬಂದಿದೆ.



ವರ್ಷದ ಹಿಂದೆ ಬೆಳಗಾವಿಯಲ್ಲಿ ಪಿಂಕ್ ಬಸ್‌ಗಳಿಗೆ ಚಾಲನೆ ನೀಡಲಾಗಿತ್ತು (ಸಾಂದರ್ಭಿಕ ಚಿತ್ರ)

ರಜೆ ಸಮಯದಲ್ಲಿ ಹೆಚ್ಚುವರಿ ಬಸ್

ಶಕ್ತಿ ಯೋಜನೆ ಜಾರಿಯಾದ ಮೇಲೆ ಧಾರ್ಮಿಕ ಕೇಂದ್ರಗಳಿಗೆ ಮತ್ತು ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಮಹಿಳೆಯರ ಪ್ರಮಾಣ ಹೆಚ್ಚಳವಾಗಿದೆ. ಏಪ್ರಿಲ್–ಮೇ ನಲ್ಲಿ ಶಾಲಾ–ಕಾಲೇಜುಗಳಿಗೆ ಬೇಸಿಗೆ ರಜೆ ಇರುವುದರಿಂದ ಪ್ರವಾಸಕ್ಕೆ ತೆರಳುವವರ ಸಂಖ್ಯೆ ಇನ್ನಷ್ಟು ಹೆಚ್ಚಳವಾಗಲಿದೆ. ಈ ಸಮಯದಲ್ಲಿ ಬಸ್‌ಗಳ ಕೊರತೆಯಾಗದಂತೆ ನೋಡಿಕೊಳ್ಳಲಾಗುವುದು. ಬೇಡಿಕೆಗೆ ಅನುಗುಣವಾಗಿ ನಾಲ್ಕು ನಿಗಮಗಳಿಂದ ಹೆಚ್ಚುವರಿ ಬಸ್‌ಗಳನ್ನು ರಸ್ತೆಗೆ ಇಳಿಸಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾಹಿತಿ ನೀಡಿದರು.



ಯಲಹಂಕದಲ್ಲಿ ಸೋಮವಾರ ಆಯೋಜಿಸಿದ್ದ ರೋಜ್‌ಗಾರ್ ಮೇಳದಲ್ಲಿ ಸರ್ಕಾರಿ ಹುದ್ದೆಗಳಿಗೆ ನೇಮಕವಾಗಿರುವ 192 ಅಭ್ಯರ್ಥಿಗಳಿಗೆ ಆದೇಶ ಪತ್ರಗಳನ್ನು ವಿತರಿಸಲಾಯಿತು. ಕೇಂದ್ರ ಸಚಿವ ಪ್ರಲ್ಹಾದ್ ಜೋಷಿ, ಬಿಎಸ್‌ಎಫ್(ಎಸ್‌ಟಿಸಿ) ಕೇಂದ್ರದ ಐಜಿ ಜಾರ್ಜ್ ಮಂಜೂರನ್, ಬೆಂಗಳೂರು ಬಿಎಸ್‌ಎಫ್(ಎಸ್‌ಟಿ.ಸಿ) ಕೇಂದ್ರದ ಐಜಿ ಈಪನ್ ಪಿ.ವಿ. ಭಾಗವಹಿಸಿದ್ದರು

ತಪ್ಪು ಮಾಹಿತಿ ನೀಡುತ್ತಿದ್ದ ಚಾಲಕ: ಎಆರ್‌ಟಿಒ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ಸಚಿವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿ ಬಂಧನಕ್ಕೆ ಒಳಗಾಗಿರುವ ಚಾಲಕ ಮುನೇಗೌಡ ಅವರು ಪ್ರಧಾನಿ, ರಾಷ್ಟ್ರಪತಿಯಿಂದ ಹಿಡಿದು ಎಲ್ಲರಿಗೂ ತಪ್ಪು ಮಾಹಿತಿಯ ಅರ್ಜಿ ಬರೆದು ದಾರಿತಪ್ಪಿಸುತ್ತಿದ್ದರು ಎಂದು ದೇವನಹಳ್ಳಿಯ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಸ್ಪಷ್ಟನೆ ನೀಡಿದ್ದಾರೆ.

ಜನಸ್ಪಂದನಾ ಕಾರ್ಯಕ್ರಮದಲ್ಲಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದ ಆರೋಪದಡಿ ಮುನೇಗೌಡ (50) ಅವರನ್ನು ಪೊಲೀಸರು ಬಂಧಿಸಿದ್ದರು.

‘ಎಲ್ಲ ಪ್ರಕ್ರಿಯೆಗಳನ್ನು ಪೂರೈಸಿದ್ದರೂ ಅಧಿಕಾರಿಗಳು ಡಿಎಲ್ ನೀಡಿಲ್ಲ ಎಂದು ತಾಳ್ಮೆ ಕಳೆದುಕೊಂಡು ಮಾತನಾಡಿದೆ’ ಎಂದು ಪೊಲೀಸರಿಗೆ ಮುನೇಗೌಡ ಹೇಳಿಕೆ ನೀಡಿದ್ದರು.

‘ಸೇಂಟ್ ಕ್ಸೇವಿಯರ್’ ವಿರುದ್ಧ ದೂರು

ಬೆಂಗಳೂರು: ಸಂಜೀವ ನಗರದ ಸೇಂಟ್ ಕ್ಸೇವಿಯರ್ ಎಜುಕೇಷನಲ್ ಮತ್ತು ಚಾರಿಟೆಬಲ್ ಟ್ರಸ್ಟ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಕೋರಿ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಸಚಿವರು ಹಲಸೂರು ಗೇಟ್ ಠಾಣೆಗೆ ದೂರು ಸಲ್ಲಿಸಿದ್ದಾರೆ.

2022–23ನೇ ಶೈಕ್ಷಣಿಕ ಸಾಲಿನಲ್ಲಿ ಹೊಸ ಕಾಲೇಜು ಆರಂಭಕ್ಕೆ ಅನುಮತಿ ಕೋರಿ ಅರ್ಜಿಯ ಜತೆಗೆ ಸಂಸ್ಥೆ ಸಲ್ಲಿಸಿದ್ದ ಕಾಲೇಜಿನ ಕಟ್ಟಡದ ದಾಖಲೆಗಳು ನಕಲಿ ಎಂದು ಸಾಬೀತಾಗಿದೆ. ಕಟ್ಟಡವನ್ನು ಸಂಸ್ಥೆಯ ಹೆಸರಿಗೆ ನೋಂದಣಿ ಮಾಡಿಸದೇ ನಕಲಿ ‘ಲೀಸ್ ಡೀಡ್’ ಸಲ್ಲಿಸುವ ಮೂಲಕ ಉನ್ನತ ಶಿಕ್ಷಣ ಇಲಾಖೆ ಹಾಗೂ ವಿಶ್ವವಿದ್ಯಾಲಯವನ್ನು ವಂಚಿಸಲಾಗಿದೆ. ಇದು ಕ್ರಿಮಿನಲ್ ಸ್ವರೂಪದ ಅಪರಾಧ. ಹಾಗಾಗಿ, ಸಂಸ್ಥೆಯ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ನಡೆಸಬೇಕು ಎಂದು ಮನವಿ ಮಾಡಿದ್ದಾರೆ.

ಬಾಲಬ್ರೂಯಿ ಇನ್ನು ‘ಕಾನ್‌ಸ್ಟಿಟ್ಯೂಷನ್ ಕ್ಲಬ್’

ಬೆಂಗಳೂರು: ‘ರಾಜ್ಯದಲ್ಲೂ ‘ಕಾನ್‌ಸ್ಟಿಟ್ಯೂಷನ್ ಕ್ಲಬ್’ (ಶಾಸಕರ ಮತ್ತು ಮಾಜಿ ಶಾಸಕರ ಮನರಂಜನಾ ಕ್ಲಬ್) ನಿರ್ಮಿಸುವಂತೆ ಬಹಳ ದಿನಗಳಿಂದ ಸಚಿವರು, ಶಾಸಕರು, ಮಾಜಿ ಶಾಸಕರಿಂದ ಬೇಡಿಕೆ ಇತ್ತು. ಹೀಗಾಗಿ, ಸರ್ಕಾರದ ವಶದಲ್ಲಿದ್ದ ಬಾಲಬ್ರೂಯಿ ಕಟ್ಟಡವನ್ನು ವಿಧಾನ ಮಂಡಲ ಸಂಸ್ಥೆಗೆ ವರ್ಗಾಯಿಸಿ ಕ್ಲಬ್ ಮಾಡಲಾಗುತ್ತಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ವಿಧಾನ ಮಂಡಲ ಸಂಸ್ಥೆಯ ಉದ್ಘಾಟನೆ ಹಾಗೂ ಬಾಲಬ್ರೂಯಿ ಕಟ್ಟಡವನ್ನು ಪಾರಂಪರಿಕ ವಿನ್ಯಾಸಕ್ಕೆ ಒಳಪಟ್ಟು ನವೀಕರಿಸುವ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಸೋಮವಾರ ಅವರು ಮಾತನಾಡಿದರು.

‘ಸಂಜೆ ವೇಳೆಯಲ್ಲಿ ಸಮಯ ಕಳೆಯಲು, ಚರ್ಚೆ ನಡೆಸಲು, ಪತ್ರಿಕೆ ಓದಲು ಶಾಸಕರಿಗೆ ಪ್ರತ್ಯೇಕ ಜಾಗ ಇರಲಿಲ್ಲ. ಬಾಲಬ್ರೂಯಿ ಇದಕ್ಕೆ ಸೂಕ್ತ ಜಾಗ ಅನಿಸಿದೆ. ಮುಖ್ಯಮಂತ್ರಿ ಆಗಿರುವ ಕಾರಣಕ್ಕೆ ನನ್ನನ್ನು ವಿಧಾನ ಮಂಡಲ ಸಂಸ್ಥೆಗೆ ಗೌರವ ಅಧ್ಯಕ್ಷರನ್ನಾಗಿ ಮಾಡಿದ್ದಾರೆ’ ಎಂದರು.

ವಸ್ತ್ರಸಂಹಿತೆ ಸರಿಯಲ್ಲ: ‘ನಾನು, ಉಗ್ರಪ್ಪ, ಬಿ.ಆರ್. ಪಾಟೀಲ ಹೀಗೆ ಕೆಲವರು ಕ್ಲಬ್ ಒಂದಕ್ಕೆ ಒಮ್ಮೆ ಹೋಗಿದ್ದೆವು. ನಾನು ಪಂಚೆ ಧರಿಸಿದ್ದೆ. ಅಲ್ಲಿ ವಸ್ತ್ರ ಸಂಹಿತೆ ಇದ್ದುದರಿಂದ ಒಳಗೆ ಬಿಡಲಿಲ್ಲ. ಕೇರಳ, ತಮಿಳುನಾಡಿನಲ್ಲಿ ಪಂಚೆ ಧರಿಸುವುದು ಸಾಮಾನ್ಯ. ನಮ್ಮಲ್ಲಿ ಕಡಿಮೆ. ಬ್ರಿಟಿಷ್‌ನವರು ವಸ್ತ್ರಸಂಹಿತೆ ಅನುಸರಿಸುತ್ತಿದ್ದರು. ಅದು ಸರಿಯಲ್ಲ. ಈ ಕ್ಲಬ್‌ನ್ನು ಪಂಚೆ ಧರಿಸಿಕೊಂಡೇ ಉದ್ಘಾಟಿಸಿದ್ದೇನೆ’ ಎಂದರು.

‘ರಾತ್ರಿ ವೇಳೆ ಊಟ ಮಾಡಿದರೆ ಕ್ಲಬ್ ಚೆನ್ನಾಗಿ ನಡೆಯುತ್ತದೆ. ಹೀಗೆ ಬೇರೆಲ್ಲೊ ಹೋಗಿ ಊಟ ಮಾಡಬೇಡಿ. ಊಟ ರುಚಿಕರವಾಗಿರಲಿ’ ಎಂದು ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್ ಕಡೆಗೆ ನೋಡಿ ಹೇಳಿದ ಮುಖ್ಯಮಂತ್ರಿ, ‘ಊಟ ಚೆನ್ನಾಗಿ ಮಾಡಿಸಿ’ ಎಂದೂ ಸಲಹೆ ನೀಡಿದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಇಂಧನ ಸಚಿವ ಕೆ.ಜೆ. ಜಾರ್ಜ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಗೋವಿಂದರಾಜ್, ಶಾಸಕ ಅರವಿಂದ ಬೆಲ್ಲದ್ ಇದ್ದರು.

ಅಪಘಾತ : ಲೆಕ್ಕಾಧಿಕಾರಿ ಸಾವು

ಬೆಂಗಳೂರು: ಯಶವಂತಪುರ ಮೆಟ್ರೊ ನಿಲ್ದಾಣ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸೋಮವಾರ ಬೆಳಿಗ್ಗೆ ಕೆಎಸ್‌ಆರ್‌ಟಿಸಿ ಬಸ್ ಹಾಗೂ ದ್ವಿಚಕ್ರ ವಾಹನ ನಡುವೆ ಅಪಘಾತ ಸಂಭವಿಸಿದ್ದು, ರಾಜೇಂದ್ರ (54) ಅವರು ಮೃತಪಟ್ಟಿದ್ದಾರೆ.

‘ನಾಗಸಂದ್ರ ನಿವಾಸಿ ರಾಜೇಂದ್ರ, ನೆಲಮಂಗಲ ಬಳಿಯ ಕಂಪನಿಯೊಂದರ ಲೆಕ್ಕಾಧಿಕಾರಿ. ಕೆಲಸ ನಿಮಿತ್ತ ಮೇಖ್ರಿ ವೃತ್ತದಲ್ಲಿರುವ ಜಿಎಸ್‌ಟಿ ಕಚೇರಿಗೆ ದ್ವಿಚಕ್ರ ವಾಹನದಲ್ಲಿ ಹೊರಟಿದ್ದ ಸಂದರ್ಭದಲ್ಲಿ ಈ ಅವಘಡ ಸಂಭವಿಸಿದೆ’ ಎಂದು ಯಶವಂತಪುರ ಸಂಚಾರ ಪೊಲೀಸರು ಹೇಳಿದರು.

‘ನಾಗಸಂದ್ರದ ಮನೆಯಿಂದ ಮೇಖ್ರಿ ವೃತ್ತದ ಕಡೆಗೆ ರಾಜೇಂದ್ರ ಹೊರಟಿದ್ದರು. ತುರುವೇಕೆರೆಯಿಂದ ಬೆಂಗಳೂರಿಗೆ ಕೆಎಸ್‌ಆರ್‌ಟಿಸಿ ಬಸ್ ಬರುತ್ತಿತ್ತು. ಯಶವಂತಪುರ ಮೆಟ್ರೊ ನಿಲ್ದಾಣ ಬಳಿ ದ್ವಿಚಕ್ರ ವಾಹನಕ್ಕೆ ಬಸ್ ಡಿಕ್ಕಿ ಹೊಡೆದಿತ್ತು.’

‘ದ್ವಿಚಕ್ರ ವಾಹನ ಸಮೇತ ಬಿದ್ದಿದ್ದ ರಾಜೇಂದ್ರ ಅವರನ್ನು 30 ಮೀಟರ್‌ವರೆಗೂ ಬಸ್ ಎಳೆದೊಯ್ದಿತ್ತು. ಇದರಿಂದಾಗಿ ರಾಜೇಂದ್ರ ಅವರ ತಲೆ, ಹೊಟ್ಟೆ, ಎದೆಗೆ ತೀವ್ರ ಪೆಟ್ಟಾಗಿತ್ತು. ಅವರು ಸ್ಥಳದಲ್ಲೇ ಮೃತಪಟ್ಟರು. ‘ಕೆಎಸ್‌ಆರ್‌ಟಿಸಿ ಚಾಲಕನ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಚಾಲಕ ಕುಮಾರಸ್ವಾಮಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಮಕ್ಕಳ ಕೈಗೆ ವಾಹನ ನೀಡಿದ ಪೋಷಕರಿಗೆ ₹1.5 ಲಕ್ಷ ದಂಡ

ಬೆಂಗಳೂರು: ಅಪ್ರಾಪ್ತ ಮಕ್ಕಳ ಕೈಗೆ ವಾಹನ ಕೊಟ್ಟು ಅಪಘಾತ ಉಂಟಾಗಲು ಕಾರಣವಾಗಿದ್ದ 6 ಪೋಷಕರು, ತಮ್ಮ ತಪ್ಪು ಒಪ್ಪಿಕೊಂಡು ನ್ಯಾಯಾಲಯಕ್ಕೆ ₹ 1.50 ಲಕ್ಷ ದಂಡ ಕಟ್ಟಿದ್ದಾರೆ.

‘ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ವ್ಯಾಪ್ತಿಯಲ್ಲಿ 2022–23ನೇ ಸಾಲಿನಲ್ಲಿ ದಾಖಲಾಗಿದ್ದ 6 ಅಪಘಾತ ಪ್ರಕರಣಗಳಲ್ಲಿ ತಪ್ಪಿತಸ್ಥರಾಗಿದ್ದ ಪೋಷಕರಿಗೆ ನ್ಯಾಯಾಲಯ ದಂಡ ವಿಧಿಸಿದೆ’ ಎಂದು ಸಂಚಾರ ವಿಭಾಗದ (ಪಶ್ಚಿಮ) ಡಿಸಿಪಿ ಅನಿತಾ ಹದ್ದಣ್ಣನವರ ತಿಳಿಸಿದ್ದಾರೆ.

‘ಪೋಷಕರ ವಾಹನ ಚಲಾಯಿಸಿದ್ದ ಬಾಲಕರು, ಅಪಘಾತವನ್ನುಂಟು ಮಾಡಿದ್ದರು. ಮಕ್ಕಳ ಜೊತೆಯಲ್ಲಿ ಪೋಷಕರನ್ನೂ ಆರೋಪಿಗಳನ್ನಾಗಿ ಮಾಡಲಾಗಿತ್ತು’ ಎಂದು ಹೇಳಿದ್ದಾರೆ.

ಮಾಂಗಲ್ಯ ಕಳವು: ದೂರು ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ತಪಾಸಣೆಗೆಂದು ಆಸ್ಪತ್ರೆಗೆ ಹೋಗಿದ್ದ ಸಂದರ್ಭದಲ್ಲಿ ಮಹಿಳೆಯೊಬ್ಬರ ಚಿನ್ನದ ಮಾಂಗಲ್ಯ ಸರ ಕಳ್ಳತನವಾಗಿದ್ದು, ಈ ಸಂಬಂಧ ಗೋವಿಂದರಾಜನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಪಟ್ಟೇಗಾರಪಾಳ್ಯದ ನಿವಾಸಿಯಾಗಿರುವ 36 ವರ್ಷದ ಮಹಿಳೆ ಕಳ್ಳತನ ಸಂಬಂಧ ದೂರು ನೀಡಿದ್ದಾರೆ. ಮೂಡಲಪಾಳ್ಯದಲ್ಲಿರುವ ಆಸ್ಪತ್ರೆಯೊಂದರ ಶುಶ್ರೂಷಕಿಯರು ಸೇರಿ ಮೂವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಫೆ. 8ರಂದು ಮಹಿಳೆಗೆ ಎದೆ ನೋವು ಕಾಣಿಸಿಕೊಂಡಿತ್ತು. ತಪಾಸಣೆಗೆಂದು ಪತಿ ಜೊತೆ ಆಸ್ಪತ್ರೆಗೆ ಹೋಗಿದ್ದರು. ತಪಾಸಣೆ ಮಾಡಿದ್ದ ವೈದ್ಯೆ, ಇಸಿಜಿ ಮಾಡಿಸಲು ಹೇಳಿದ್ದರು. ಆಸ್ಪತ್ರೆಯಲ್ಲಿದ್ದ ಆರೋಪಿಗಳು, ಮಹಿಳೆಯನ್ನು ಇಸಿಜಿ ಕೊಠಡಿಗೆ ಕರೆದೊಯ್ದಿದ್ದರು. ಪತಿ ಹೊರಗಡೆ ಇದ್ದರು.’

‘ಮಹಿಳೆಯ ಬಳಿ ₹ 2.50 ಲಕ್ಷ ಮೌಲ್ಯದ ಚಿನ್ನದ ಮಾಂಗಲ್ಯ ಸರವಿತ್ತು. ಇಸಿಜಿ ಮಾಡುವುದಕ್ಕೂ ಮುನ್ನ ಅದನ್ನು ತೆಗೆಯುವಂತೆ ಆರೋಪಿಗಳು ಹೇಳಿದ್ದರು. ಸರ ತೆಗೆದಿದ್ದ ಮಹಿಳೆ, ಪತಿಗೆ ನೀಡಲು ಮುಂದಾಗಿದ್ದರು. ಆದರೆ, ಪತಿಯನ್ನು ಕೊಠಡಿಯೊಳಗೆ ಕರೆಸಲು ಆರೋಪಿಗಳು ನಿರಾಕರಿಸಿದ್ದರು. ಚಿನ್ನದ ಸರವನ್ನು ತಲೆದಿಂಬಿನ ಕೆಳಗೆ ಇರಿಸುವಂತೆ ಆರೋಪಿಗಳು ಹೇಳಿದ್ದರು. ಅದರಂತೆ ಮಹಿಳೆ, ದಿಂಬಿನ ಕೆಳಗೆ ಸರ ಇರಿಸಿದ್ದರು.’

‘ಇಸಿಜಿ ಮುಗಿಯುತ್ತಿದ್ದಂತೆ ಆರೋಪಿಗಳು, ತರಾತುರಿಯಲ್ಲಿ ಮಹಿಳೆಯನ್ನು ಕೊಠಡಿಯಿಂದ ಹೊರಗೆ ಕಳುಹಿಸಿದ್ದರು. ದಿಂಬಿನ ಕೆಳಗೆ ಸರ ಇರಿಸಿದ್ದನ್ನು ಮರೆತಿದ್ದ ಮಹಿಳೆ, ಮನೆಗೆ ಹೋಗಿದ್ದರು. ಸ್ನಾನ ಮಾಡುವ ಸಂದರ್ಭದಲ್ಲಿ ಮಾಂಗಲ್ಯ ಸರ ಇಲ್ಲದಿರುವುದು ಗೊತ್ತಾಗಿತ್ತು. ಆಸ್ಪತ್ರೆಗೆ ಹೋಗಿ ವಿಚಾರಿಸಿದಾಗ, ತಮಗೆ ಏನು ಗೊತ್ತಿಲ್ಲವೆಂದು ಹೇಳಿದ್ದರು. ನಂತರ, ಮಹಿಳೆ ಠಾಣೆಗೆ ದೂರು ನೀಡಿದ್ದಾರೆ’ ಎಂದು ಪೊಲೀಸರು ತಿಳಿಸಿದರು.





ಪ್ರತಿಭಟನೆಯಲ್ಲಿ ಸೇರಿದ್ದ ಸಿಪಿಐ ಕಾರ್ಯಕರ್ತರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು(ಎಡಚಿತ್ರ) ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ರೈತರು ಬೇಡಿಕೆ ಈಡೇರಿಕೆಗಾಗಿ ಒತ್ತಾಯಿಸಿ ಘೋಷಣೆ ಕೂಗಿದರು – ಪ್ರಜಾವಾಣಿ ಚಿತ್ರ

ರೈತರ ಸಾಲ ಮನ್ನಾ ಮಾಡಲು ಒತ್ತಾಯ • ತೆರಿಗೆ ಹಂಚಿಕೆಯಲ್ಲಿ ತಾರತಮ್ಯಕ್ಕೆ ಆಕ್ರೋಶ

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ವಿವಿಧ ಸಂಘಟನೆಗಳ ಪದಾಧಿಕಾರಿಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ, ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಐ) ಹಾಗೂ ಸಾರಿಗೆ ಚಾಲಕರ ಸಂಘಟನೆಗಳ ಒಕ್ಕೂಟದಿಂದ ಪ್ರತಿಭಟನೆ ನಡೆಯಿತು.

ರೈತರ ಎಲ್ಲ ಸಾಲ ಮನ್ನಾ ಮಾಡಿ: 'ರಾಷ್ಟ್ರೀಕೃತ, ಸಹಕಾರಿ ಹಾಗೂ ಖಾಸಗಿ ಬ್ಯಾಂಕ್‌ಗಳಲ್ಲಿ ಇರುವ ರೈತರ ಎಲ್ಲ ಪ್ರಕಾರದ ಸಾಲಗಳನ್ನು ಮನ್ನಾ ಮಾಡಬೇಕು. ಬಡ್ಡಿರಹಿತ ಸಾಲವನ್ನೂ ವಿತರಿಸಬೇಕು' ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಪದಾಧಿಕಾರಿಗಳು ಆಗ್ರಹಿಸಿದರು.

'ರೈತ ವಿರೋಧಿ ಅಂಶಗಳಿರುವ ಕೃಷಿ ಕಾಯ್ದೆಗಳನ್ನು ರಾಜ್ಯ ಸರ್ಕಾರ ಹಿಂಪಡೆಯಬೇಕು. ಬೆಳೆ ವಿಮೆ ಪರಿಹಾರ ಬಿಡುಗಡೆ ಮಾಡಬೇಕು. ಬೆಂಬಲ ಬೆಲೆಯನ್ನು ಕಾನೂನಾತ್ಮಕವಾಗಿ ಜಾರಿಗೆ ತರಬೇಕು. ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಯಲ್ಲಿ ಜಲಾಶಯದಿಂದ ಮುಳುಗಡೆಯಾದ ಜಮೀನುಗಳ ರೈತರಿಗೆ ಭೂ ಪರಿಹಾರ ನೀಡಬೇಕು' ಎಂದು ಒತ್ತಾಯಿಸಿದರು.

ಸೆಕ್ಷನ್ ರದ್ದತಿಗೆ ಚಾಲಕರ ಒತ್ತಾಯ: 'ಹಿಟ್ ಆ್ಯಂಡ್ ರನ್ ಪ್ರಕರಣಗಳಿಗೆ ಸಂಬಂಧಪಟ್ಟಂತೆ ತಿದ್ದುಪಡಿ ತಂದಿರುವ ಭಾರತೀಯ ದಂಡ ಸಂಹಿತೆಯ (ಐಪಿಸಿ) ಸೆಕ್ಷನ್ ಅಂಶಗಳನ್ನು ರದ್ದುಪಡಿಸಬೇಕು' ಎಂದು ಆಗ್ರಹಿಸಿ ಸಾರಿಗೆ ಚಾಲಕರ ಸಂಘಟನೆಗಳ ಒಕ್ಕೂಟದ ಪದಾಧಿಕಾರಿ ಗಳು ಪ್ರತಿಭಟನೆ ನಡೆಸಿದರು.



ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಸಾರಿಗೆ ಚಾಲಕರ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳು – ಪ್ರಜಾವಾಣಿ ಚಿತ್ರ

'ತಿದ್ದುಪಡಿ ಸೆಕ್ಷನ್ ಪ್ರಕಾರ 10 ವರ್ಷ ಜೈಲು ಹಾಗೂ ₹7 ಲಕ್ಷ ದಂಡ ವಿಧಿಸಲು ಅವಕಾಶವಿದೆ. ಇದು ಚಾಲಕರ ಮರಣ ಶಾಸನವಾಗಿದೆ. ಹೀಗಾಗಿ, ಈ ಸೆಕ್ಷನ್ ಅಂಶಗಳನ್ನು ರದ್ದುಪಡಿಸಬೇಕು. ಎಚ್‌ಎಸ್‌ಆರ್‌ಪಿ ನೋಂದಣಿ ಸಂಖ್ಯೆ ಫಲಕ ಅಳವಡಿಕೆ ಕೊನೆ ದಿನವನ್ನು 6 ತಿಂಗಳು ವಿಸ್ತರಣೆ ಮಾಡಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

'ಓಲಾ, ಉಬರ್ ಮಾದರಿಯಲ್ಲಿ ಕ್ಯಾಬ್ ನಿರ್ವಹಣೆಗೆಂದು ರಾಜ್ಯ ಸರ್ಕಾರವೇ ಸಹಕಾರಿ ಸಂಸ್ಥೆ ಸ್ಥಾಪಿಸಿ, ಅದರ ಮೂಲಕ ಆ್ಯಪ್ ಅಭಿವೃದ್ಧಿಪಡಿಸಬೇಕು. ರ್‍ಯಾಪಿಡೊ ಬೈಕ್ ಟ್ಯಾಕ್ಸಿ ನಿಷೇಧಿಸಬೇಕು. ನಗರದಲ್ಲಿ ಬೆಳಿಗ್ಗೆ 8 ಗಂಟೆಯಿಂದ ಮಧ್ಯಾಹ್ನ 12 ಹಾಗೂ ಮಧ್ಯಾಹ್ನ 3 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ಸರಕು ಸಾಗಣೆ ವಾಹನಗಳ ಸಂಚಾರ ನಿರ್ಬಂಧಿಸಲಾಗಿದ್ದು, ಈ ಆದೇಶವನ್ನು ಹಿಂಪಡೆಯಬೇಕು' ಎಂದು ಅವರು ಒತ್ತಾಯಿಸಿದರು.

ಕೇಂದ್ರದ ವಿರುದ್ಧ ಆಕ್ರೋಶ: 'ತೆರಿಗೆ ಹಂಚಿಕೆ ಹಾಗೂ ಅನುದಾನ ನೀಡುವಲ್ಲಿ ಕೇಂದ್ರ ಸರ್ಕಾರ ರಾಜ್ಯಕ್ಕೆ ಅನ್ಯಾಯ ಮಾಡಿದೆ' ಎಂದು ಆರೋಪಿಸಿ ಭಾರತ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

'ಜಿಎಸ್‌ಟಿ, ತೆರಿಗೆ ಹಣ, ಬರ ಪರಿಹಾರ ಸೇರಿದಂತೆ ವಿವಿಧ ಅನುದಾನ ಹಂಚಿಕೆಯಲ್ಲಿ ಕೇಂದ್ರ ಸರ್ಕಾರ ಅನ್ಯಾಯ ಮಾಡಿದೆ. ತಾರತಮ್ಯ ನೀತಿ ಅನುಸರಿಸಿದೆ. ಅನುದಾನ ವಿಷಯದಲ್ಲಿ ರಾಜ್ಯದ ಸಂಸದರು ಮೌನವಾಗಿರುವುದು ಖಂಡನೀಯ' ಎಂದು ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು.

'ತೆರಿಗೆ ಹಣವನ್ನು ನ್ಯಾಯ ಸಮ್ಮತವಾಗಿ ರಾಜ್ಯಗಳಿಗೆ ಹಂಚಿಕೆ ಮಾಡಿ ಅಗತ್ಯವಾದ ಅನುದಾನವನ್ನು ಕಾಲ ಕಾಲಕ್ಕೆ ಬಿಡುಗಡೆ ಮಾಡುವುದು ಕೇಂದ್ರ ಸರ್ಕಾರದ ಜವಾಬ್ದಾರಿ. ನಾಲ್ಕು ವರ್ಷಗಳಿಂದ ರಾಜ್ಯಕ್ಕೆ ಲಭಿಸಬೇಕಾದ ₹45,000 ಕೋಟಿ ಅನುದಾನ ಹಂಚಿಕೆಯಲ್ಲಿ ಅನ್ಯಾಯ ಆಗಿರುವುದಾಗಿ ಮುಖ್ಯಮಂತ್ರಿ ಅಂಕಿ–ಅಂಶ ಬಿಡುಗಡೆ ಮಾಡಿದ್ದಾರೆ' ಎಂದು ಹೇಳಿದರು.

ಟಿಎಪಿಸಿಎಂಎಸ್ ಕಾರ್ಯದರ್ಶಿ, ಆಹಾರ ನಿರೀಕ್ಷಕನ ಸೆರೆ

ಪ್ರಜಾವಾಣಿ ವಾರ್ತೆ



ಉಮೇಶ್



ಶ್ರೀಧರ್

ಬೆಂಗಳೂರು: ನ್ಯಾಯಬೆಲೆ ಅಂಗಡಿ ಪರವಾನಗಿಯ ವರ್ಗಾವಣೆ ಆದೇಶ ನೀಡಲು ₹ 2.5 ಲಕ್ಷ ಲಂಚ ಪಡೆದ ಆರೋಪದ ಮೇಲೆ ನಗರದ ಬನಶಂಕರಿಯ ತಾಲ್ಲೂಕು ಕೃಷಿ ಉತ್ಪನ್ನ ಸಹಕಾರ ಮಾರಾಟ ಸೊಸೈಟಿಯ (ಟಿಎಪಿಸಿಎಂಎಸ್) ಕಾರ್ಯದರ್ಶಿ ಉಮೇಶ್ ಹಾಗೂ ಉತ್ತರಹಳ್ಳಿ ಮತ್ತು ಕೆಂಗೇರಿ ಹೋಬಳಿ ಆಹಾರ ನಿರೀಕ್ಷಕ ಶ್ರೀಧರ್ ಅವರನ್ನು ಲೋಕಾಯುಕ್ತ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಅಬ್ದುಲ್ ಮನ್ನಾನ್ ಹೆಸರಿನಲ್ಲಿ ನ್ಯಾಯಬೆಲೆ ಅಂಗಡಿ ಇದೆ. ಅವರು ಹೃದ್ರೋಗಿಯಾಗಿರುವ ಕಾರಣದಿಂದ ಮಗ ರಫೀಕ್ ಹೆಸರಿಗೆ ನ್ಯಾಯಬೆಲೆ ಅಂಗಡಿಯ ಪರವಾನಗಿಯನ್ನು ವರ್ಗಾವಣೆ ಮಾಡುವಂತೆ ಅರ್ಜಿ ಸಲ್ಲಿಸಿದ್ದರು. ನ್ಯಾಯಾಲಯ ಕೂಡ ಅವರ ಬೇಡಿಕೆಯನ್ನು ಮಾನ್ಯ ಮಾಡಿತ್ತು. ನ್ಯಾಯಾಲಯದ ಆದೇಶದಂತೆ ಪರವಾನಗಿ ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದರು ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಪರವಾನಗಿ ವರ್ಗಾವಣೆಗೆ ₹ 2.5 ಲಕ್ಷ ಲಂಚ ಕೊಡುವಂತೆ ಉಮೇಶ್ ಮತ್ತು ಶ್ರೀಧರ್ ಬೇಡಿಕೆ ಇಟ್ಟಿದ್ದರು. ಮೊದಲ ಕಂತಿನಲ್ಲಿ ₹ 1 ಲಕ್ಷ ಪಡೆದಿದ್ದರು. ಬಾಕಿ ಮೊತ್ತವನ್ನು ಉಮೇಶ್ ಬಳಿ ತಲುಪಿಸುವಂತೆ ಶ್ರೀಧರ್ ಸೂಚಿಸಿದ್ದರು. ಈ ಕುರಿತು ಅಬ್ದುಲ್ ಮನಾನ್ ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ಘಟಕಕ್ಕೆ ದೂರು ನೀಡಿದ್ದರು.

ರಫೀಕ್ ಅವರು ಬನಶಂಕರಿ ಟಿಎಪಿಸಿಎಂಎಸ್ ಕಚೇರಿಗೆ ಸೋಮವಾರ ಸಂಜೆ ತೆರಳಿ, ಶ್ರೀಧರ್ ಸೂಚನೆಯಂತೆ ಉಮೇಶ್ ಅವರಿಗೆ ₹ 1.5 ಲಕ್ಷ ತಲುಪಿಸಿದರು. ತಕ್ಷಣ ದಾಳಿಮಾಡಿದ ಲೋಕಾಯುಕ್ತ ಪೊಲೀಸರು, ಇಬ್ಬರನ್ನೂ ಬಂಧಿಸಿದರು ಎಂದು ತನಿಖಾ ಸಂಸ್ಥೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ಘಟಕದ ಎಸ್‌ಪಿ–1 ಶ್ರೀನಾಥ್ ಜೋಶಿ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಇನ್‌ಸ್ಪೆಕ್ಟರ್‌ಗಳಾದ ಮಂಜು ಬಿ.ಪಿ., ಆನಂದ್ ಎಚ್.ಎಂ., ಕೇಶವ್ ಮತ್ತು ಸಿಬ್ಬಂದಿ ಪಾಲ್ಗೊಂಡಿದ್ದರು. ಡಿವೈಎಸ್‌ಪಿಗಳಾದ ಪ್ರದೀಪ್ ಮತ್ತು ಬಸವರಾಜ್ ಮಗ್ದುಂ ಕಾರ್ಯಾಚರಣೆಯ ಮೇಲುಸ್ತುವಾರಿ ವಹಿಸಿದ್ದರು.

ಹೆಡ್ ಕಾನ್‌ಸ್ಟೆಬಲ್ ಬೆರಳು ಕಚ್ಚಿದ್ದ ವಾಹನ ಸವಾರ ಬಂಧನ


ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಹನ ತಪಾಸಣೆ ಮಾಡುತ್ತಿದ್ದ ಕಾನ್‌ಸ್ಟೆಬಲ್‌ವೊಬ್ಬರ ಕೈ ಬೆರಳು ಕಚ್ಚಿ ಗಾಯಗೊಳಿಸಿದ್ದ ಆರೋಪದಡಿ ದ್ವಿಚಕ್ರ ವಾಹನ ಸವಾರ ಸೈಯದ್ ಶಫಿಯನ್ನು (28) ವಿಲ್ಸನ್ ಗಾರ್ಡನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಬಿಟಿಎಂ 1ನೇ ಹಂತದ 6ನೇ ಮುಖ್ಯರಸ್ತೆ ನಿವಾಸಿ ಸೈಯದ್ ಶಫಿ, ಎಂಬಿಎ ಪದವೀಧರ. ಗುಜರಿ ವ್ಯಾಪಾರ ಮಾಡುತ್ತಿದ್ದ. ಈತನ ಕೃತ್ಯದ ವಿರುದ್ಧ ಹೆಡ್ ಕಾನ್‌ಸ್ಟೆಬಲ್ ಸಿದ್ರಾಮೇಶ್ವರ್ ಕೌಜಲಗಿ ಅವರು ದೂರು ನೀಡಿದ್ದಾರೆ. ವಿಡಿಯೊ ಹಾಗೂ ಇತರೆ ಪುರಾವೆಗಳನ್ನು ಆಧರಿಸಿ ಆರೋಪಿಯನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸರು ಹೇಳಿದರು.

'ಹೆಡ್ ಕಾನ್‌ಸ್ಟೆಬಲ್‌ಗಳಾದ ಸಿದ್ರಾಮೇಶ್ವರ್ ಕೌಜಲಗಿ ಹಾಗೂ ಲೋಕೇಶ್, ಮರಿಗೌಡ ರಸ್ತೆಯ 10ನೇ ಅಡ್ಡರಸ್ತೆ ಜಂಕ್ಷನ್ ಬಳಿ ಕರ್ತವ್ಯ ನಿರ್ವಹಿಸುತ್ತಿದ್ದರು. ಆರೋಪಿ ಸೈಯದ್ ಶಫಿ, ಹೆಲ್ಮೆಟ್ ಧರಿಸದೇ ತನ್ನ ದ್ವಿಚಕ್ರ ವಾಹನದಲ್ಲಿ (ಕೆಎ 05 ಎಲ್‌ಎನ್ 7938) ಹೊರಟಿದ್ದ. ಅದನ್ನು ನೋಡಿದ್ದ ಸಿದ್ರಾಮೇಶ್ವರ್, ಮೊಬೈಲ್‌ನಲ್ಲಿ ವಾಹನದ ಫೋಟೊ ಕ್ಲಿಕ್ಕಿಸಲು ಮುಂದಾಗಿದ್ದರು.'

'ಸಿದ್ರಾಮೇಶ್ವರ್ ಮೇಲೆಯೇ ಹರಿಹಾಯ್ದಿದ್ದ ಆರೋಪಿ ಸೈಯದ್, 'ಫೋಟೊ ಏಕೆ ತೆಗೆಯುತ್ತಿದ್ದಿಯಾ? ನನ್ನ ವಾಹನದ ನೋಂದಣಿ ಸಂಖ್ಯೆ ಫಲಕ ಬಿಚ್ಚಿ ಕೊಡುತ್ತೇನೆ. ಬೇಕಾದಷ್ಟು ಪ್ರಕರಣ ದಾಖಲಿಸು' ಎಂದಿದ್ದ. ನಂತರ, ಸ್ಥಳದಿಂದ ಹೊರಟು ಹೋಗಲು ಯತ್ನಿಸಿದ್ದ. ಸಿದ್ರಾಮೇಶ್ವರ್ ಅವರು ವಾಹನದ ಕೀ ಕಸಿದುಕೊಂಡಿದ್ದರು. ಕೀ ಕಿತ್ತುಕೊಳ್ಳಲು ಮುಂದಾಗಿದ್ದ ಆರೋಪಿ, ಸಿದ್ರಾಮೇಶ್ವರ್ ಅವರ ಕೈ ಬೆರಳು ಕಚ್ಚಿದ್ದ' ಎಂದು ಪೊಲೀಸರು ತಿಳಿಸಿದರು.



ಹೆಡ್ ಕಾನ್‌ಸ್ಟೆಬಲ್ ಸಿದ್ರಾಮೇಶ್ವರ್ ಕೌಜಲಗಿ ಅವರ ಕೈ ಬೆರಳು ಕಚ್ಚಿದ್ದ ಆರೋಪಿ ಸೈಯದ್ ಶಫಿ

'ಸಿದ್ರಾಮೇಶ್ವರ್ ಹಾಗೂ ಲೋಕೇಶ್ ಇಬ್ಬರೂ ಸೇರಿ ಆರೋಪಿಯನ್ನು ಹಿಡಿದುಕೊಂಡಿದ್ದರು. ಸ್ಥಳೀಯರು ಸಹ ಜಮಾಯಿಸಿದ್ದರು. ಇದೇ ಸಂದರ್ಭದಲ್ಲಿ ಆರೋಪಿ, ಪೊಲೀಸರಿಗೆ ಜೀವ ಬೆದರಿಕೆಯೊಡ್ಡಿದ್ದ. ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಸ್ಥಳಕ್ಕೆ ಹೋಗಿ ಆರೋಪಿಯನ್ನು ವಶಕ್ಕೆ ಪಡೆದರು. ಆರೋಪಿ ಕೃತ್ಯವನ್ನು ಸ್ಥಳೀಯರು ಮೊಬೈಲ್‌ನಲ್ಲಿ ಚಿತ್ರೀಕರಿಸಿದ್ದಾರೆ' ಎಂದು ಹೇಳಿದರು.

ಅರ್ಜಿ ಸಲ್ಲಿಸದಿದ್ದರೂ ಸಾಲ: ಕಿರುಕುಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಲಕ್ಕೆ ಅರ್ಜಿ ಸಲ್ಲಿಸದಿದ್ದರೂ ಮಹಿಳೆಯೊಬ್ಬರ ಬ್ಯಾಂಕ್ ಖಾತೆಗೆ ಹಣ ವರ್ಗಾಯಿಸಿರುವ ಆ್ಯಪ್ ಕಂಪನಿಯೊಂದರ ಪ್ರತಿನಿಧಿಗಳು, ಸಾಲ ವಸೂಲಿ ಹೆಸರಿನಲ್ಲಿ ಕಿರುಕುಳ ನೀಡುತ್ತಿರುವ ಬಗ್ಗೆ ಕೇಂದ್ರ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ವಿಲ್ಸನ್ ಗಾರ್ಡನ್ ನಿವಾಸಿಯಾಗಿರುವ 36 ವರ್ಷದ ಮಹಿಳೆಯೊಬ್ಬರು ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಕಂಪನಿಯೊಂದರ ಉದ್ಯೋಗಿಯಾದ ಮಹಿಳೆ, ಮೊಬೈಲ್ ಅಪ್ಲಿಕೇಷನ್‌ವೊಂದರಿಂದ ಸಾಲದ ಆ್ಯಪ್‌ವೊಂದನ್ನು ಡೌನ್‌ಲೋಡ್ ಮಾಡಿ ಮೊಬೈಲ್‌ನಲ್ಲಿ ಇನ್‌ಸ್ಟಾಲ್ ಮಾಡಿಕೊಂಡಿದ್ದರು. ಆದರೆ, ಆ್ಯಪ್ ಬಳಕೆ ಮಾಡುತ್ತಿರಲಿಲ್ಲ. ಯಾವುದೇ ಸಾಲಕ್ಕೂ ಅರ್ಜಿ ಸಲ್ಲಿಸಿರಲಿಲ್ಲ. ಕೆಲ ದಿನಗಳ ನಂತರ ದೂರುದಾರ ಮಹಿಳೆಯ ಬ್ಯಾಂಕ್ ಖಾತೆಗೆ ಆರೋಪಿಗಳು ಮೂರು ಬಾರಿ ತಲಾ ₹ 2,400 ಜಮೆ ಮಾಡಿದ್ದರು. ಕೆಲ ದಿನಗಳ ಬಳಿಕ ವಿವಿಧ ಮೊಬೈಲ್ ಸಂಖ್ಯೆಗಳಿಂದ ಕರೆ ಮಾಡುತ್ತಿರುವ ಆರೋಪಿಗಳು, ಸಾಲದ ಹಣ ವಾಪಸು ಕಟ್ಟುವಂತೆ ಒತ್ತಾಯಿಸುತ್ತಿದ್ದಾರೆ. ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದಾರೆ' ಎಂದರು.

ಅಶ್ಲೀಲ ಫೋಟೊ ಬೆದರಿಕೆ: 'ದೂರುದಾರ ಮಹಿಳೆ ಹಾಗೂ ಅವರ ಮಗಳ ಫೋಟೊವನ್ನು ಅಶ್ಲೀಲವಾಗಿ ಮಾರ್ಫಿಂಗ್ ಮಾಡಿರುವ ಆರೋಪಿಗಳು, ಅದನ್ನು ತೋರಿಸಿ ಬೆದರಿಕೆಯೊಡುತ್ತಿದ್ದಾರೆ' ಎಂದು ಪೊಲೀಸರು ತಿಳಿಸಿದರು.

'ಆ್ಯಪ್ ಇನ್‌ಸ್ಟಾಲ್ ಮಾಡುವ ಸಂದರ್ಭದಲ್ಲಿಯೇ ಆರೋಪಿಗಳು, ದೂರುದಾರ ಮೊಬೈಲ್ ದತ್ತಾಂಶವನ್ನು ಕದ್ದಿದ್ದಾರೆ. ಇದೇ ದತ್ತಾಂಶ ಬಳಸಿಕೊಂಡು ಮಹಿಳೆಯನ್ನು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ. ಹೊರ ರಾಜ್ಯದ ಆರೋಪಿಗಳು ಕೃತ್ಯ ಎಸಗಿರುವ ಮಾಹಿತಿಯೂ ಇದೆ. ಬ್ಯಾಂಕ್ ಖಾತೆ ಸಂಖ್ಯೆ ಹಾಗೂ ಮೊಬೈಲ್ ಸಂಖ್ಯೆ ಆಧರಿಸಿ ಆರೋಪಿಗಳನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಹೇಳಿದರು.

ಪೊಲೀಸ್ ಶಸ್ತ್ರಾಗಾರಕ್ಕೆ ನುಗ್ಗಿ ಗಲಾಟೆ: ಹಲ್ಲೆ, ಬೆದರಿಕೆ

ಬೆಂಗಳೂರು: ನಗರ ಸಶಸ್ತ್ರ ಮೀಸಲು ಪಡೆಯ (ಸಿಎಆರ್ ಪಶ್ಚಿಮ) ಶಸ್ತ್ರಾಗಾರಕ್ಕೆ ನುಗ್ಗಿದ್ದ ಸುಮಾರು 70 ಮಂದಿ ಕರ್ತವ್ಯ ನಿರತ ಪೊಲೀಸರ ಮೇಲೆ ಹಲ್ಲೆ ಮಾಡಿ ಬೆದರಿಕೆಯೊಡ್ಡಿದ್ದು, ಈ ಬಗ್ಗೆ ಜ್ಞಾನಭಾರತಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸಿಎಆರ್ ಕಾನ್‌ಸ್ಟೆಬಲ್ ರುದ್ರೇಶ್ ನಾಯ್ಕ್ ಅವರು ದೂರು ನೀಡಿದ್ದಾರೆ. ಸುಮಾರು 70 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಉಲ್ಲಾಳ ಬಳಿ ಸಿಎಆರ್ ಘಟಕವಿದೆ. ಈ ಜಾಗ ಹಾಗೂ ಸುತ್ತಮುತ್ತಲಿನ ಜಾಗದ ಸಂಬಂಧ ವ್ಯಾಜ್ಯ ಇರುವ ಮಾಹಿತಿ ಇದೆ. ಜಾಗ ನಮ್ಮದೆಂದು ವಾದಿಸಿದ್ದ ಆರೋಪಿಗಳು, ಶಸ್ತ್ರಗಾರಕ್ಕೆ ನುಗ್ಗಿದ್ದರು. ಜಾಗ ಖಾಲಿ ಮಾಡುವಂತೆ ಪೊಲೀಸರಿಗೆ ಬೆದರಿಸಿದ್ದರು. ಸಮವಸ್ತ್ರ ಹಿಡಿದು ಎಳೆದಾಡಿದ್ದರು.'

'ಜಾಗ ತೆರವು ಮಾಡುವ ಉದ್ದೇಶದಿಂದ ಸ್ಥಳಕ್ಕೆ ಬಂದಿದ್ದ ಆರೋಪಿಗಳು, ಜೆಸಿಬಿ ಯಂತ್ರ, ಕ್ಯಾಂಟರ್, ಲಾರಿ ಹಾಗೂ ನೀರಿನ ಟ್ಯಾಂಕರ್ ಸಹ ತಂದಿದ್ದರೆಂಬ ಮಾಹಿತಿ ಇದೆ.

ಶೇ 10ರಷ್ಟು ಮೀಸಲಾತಿಗೆ ಆಗ್ರಹ

ಬೆಂಗಳೂರು: 'ಎಂಬಿಬಿಎಸ್, ದಂತ ವೈದ್ಯಕೀಯ ಹಾಗೂ ತಾಂತ್ರಿಕ ಕೋರ್ಸ್‌ಗಳ 2023–24ನೇ ಸಾಲಿನ ಪರಿಷ್ಕೃತ ಸೀಟ್ ಮೆಟ್ರಿಕ್ ಪಟ್ಟಿಯಲ್ಲಿ ಮಾಜಿ ಸೈನಿಕರ ಮಕ್ಕಳಿಗೆ ಸರಿಯಾಗಿ ಸೀಟ್ ಹಂಚಿಕೆಯಾಗಿಲ್ಲ' ಎಂದು ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ ಆರೋಪಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಎನ್.ಕೆ. ಶಿವಣ್ಣ, 'ಕರ್ನಾಟಕ ಪರೀಕ್ಷಾ ಪ್ರಾಧಿಕಾರವು 2023–24 ನೇ ಸಾಲಿನ ವೈದ್ಯಕೀಯ ಶಿಕ್ಷಣಕ್ಕೆ 3,365 ಸೀಟ್‌ಗಳಿದ್ದು, ಅದರಲ್ಲಿ ಮಾಜಿ ಸೈನಿಕರ ಮಕ್ಕಳಿಗೆ ಕೇವಲ 6 ಸೀಟ್‌ಗಳನ್ನು ಹಂಚಿಕೆ ಮಾಡಲಾಗಿದೆ. ದಂತ ವೈದ್ಯಕೀಯ ಶಿಕ್ಷಣಕ್ಕೆ 1,738 ಸೀಟ್‌ಗಳಿದ್ದು, ಅದರಲ್ಲೂ 6 ಸೀಟ್‌ಗಳನ್ನು ಹಂಚಿಕೆಯಾಗಿದ್ದು, ತಾಂತ್ರಿಕ ಶಿಕ್ಷಣದ ವಿವಿಧ ಕೋರ್ಸ್‌ಗಳಿಗೆ 64 ಸೀಟುಗಳು ಹಂಚಿಕೆ ಮಾಡಿ ಅನ್ಯಾಯ ಮಾಡಲಾಗಿದೆ' ಎಂದರು.

ಮಾಜಿ ಸೈನಿಕರ ಮಕ್ಕಳಿಗೂ ವೈದ್ಯಕೀಯ ಹಾಗೂ ತಾಂತ್ರಿಕ ಕೋರ್ಸ್‌ಗಳ ಸೀಟ್ ಹಂಚಿಕೆಯಲ್ಲೂ ಶೇ 10ರಷ್ಟು ಮೀಸಲಾತಿ ನೀಡಬೇಕು' ಎಂದು ಆಗ್ರಹಿಸಿದರು.

ಜಿಲ್ಲಾಧಿಕಾರಿ ಹೊರಡಿಸಿದ್ದ ಆದೇಶ ಪ್ರಶ್ನಿಸಿದ್ದ ಅರ್ಜಿ ವಜಾ

ಕೊಳೆಗೇರಿ ವಸತಿ ನಿರ್ಮಾಣಕ್ಕೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಗಡಿ ರಸ್ತೆಯಲ್ಲಿರುವ ಭಿಕ್ಷುಕರ ಪರಿಹಾರ ಕೇಂದ್ರಕ್ಕೆ ಸೇರಿದ ಜಾಗದಲ್ಲಿ ಕೆಲ ಭಾಗವನ್ನು ಕೊಳೆಗೇರಿ ನಿವಾಸಿಗಳ ವಸತಿ ನಿರ್ಮಾಣಕ್ಕೆ ನಿಗದಿಪಡಿಸಿ ಜಿಲ್ಲಾಧಿಕಾರಿ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ 'ಕೇಂದ್ರ ಪರಿಹಾರ ಸಮಿತಿ' ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ, 'ಭಿಕ್ಷುಕರ ಪರಿಹಾರ ಕೇಂದ್ರಕ್ಕೆ ಸೇರಿದ ಜಾಗದಲ್ಲಿ ಹೆಚ್ಚಿನ ಭೂಮಿಯನ್ನು ಪಡೆದಿದ್ದರೆ ಪರಿಸ್ಥಿತಿ ಬೇರೆಯೇ ಆಗಿರುತ್ತಿತ್ತು. ಆದರೆ, ಈ ಪ್ರಕರಣದಲ್ಲಿ ಅಂತಹ ಪರಿಸ್ಥಿತಿ ಇಲ್ಲವಾದ್ದರಿಂದ ಅರ್ಜಿ ಊರ್ಜಿತವಾಗದು' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

'ರಾಜ್ಯ ಸರ್ಕಾರದ ಒಂದು ಅಂಗವು ಮತ್ತೊಂದು ಅಂಗಸಂಸ್ಥೆ ವಿರುದ್ಧ ಕಾನೂನು ಹೋರಾಟ ನಡೆಸುತ್ತಿದೆ. ಈ ಪ್ರಕರಣದಲ್ಲಿ ಕೊಳೆಗೇರಿ ನಿವಾಸಿಗಳು ಹಲವು ವರ್ಷಗಳಿಂದ ವಸತಿ ಸೌಕರ್ಯವಿಲ್ಲದೆ ಬಳಲುವಂತಾಗಿರುವುದು ಕಂಡು ಬಂದಿದೆ. ಹಾಗಾಗಿ, ರಾಜ್ಯ ಸರ್ಕಾರವೇ ಈ ವಿಚಾರದಲ್ಲಿ ಮಧ್ಯಪ್ರವೇಶ ಮಾಡಿ ವ್ಯಾಜ್ಯವನ್ನು ಬಗೆಹರಿಸಲು ಮುಂದಾಗಬೇಕು' ಎಂದು ನ್ಯಾಯಪೀಠ ಸಲಹೆ ಮಾಡಿದೆ.

ಪ್ರಕರಣವೇನು?: ಮೈಸೂರು ಮಹಾರಾಜರ ಆಡಳಿತಾವಧಿಯಲ್ಲಿ 1941ರಲ್ಲಿ ಯಶವಂತಪುರ ಹೋಬಳಿಗೆ ಸೇರಿದ ಪ್ರದೇಶದಲ್ಲಿನ 311 ಎಕರೆ ಜಮೀನನ್ನು ಭಿಕ್ಷುಕರ ಪುನರ್ ವಸತಿಗಾಗಿ ಮಂಜೂರು ಮಾಡಲಾಗಿತ್ತು. ಈ ಪೈಕಿ 63 ಎಕರೆ ಜಾಗವನ್ನು ಭಿಕ್ಷುಕರ ಪುನರ್ ವಸತಿಗೆ ಮೀಸಲಿಟ್ಟು, ಉಳಿದ ಜಾಗವನ್ನು ಸುಮನಹಳ್ಳಿ ಕ್ಷಯ ರೋಗಿಗಳ ಪುನರ್ ವಸತಿ ಕೇಂದ್ರಕ್ಕೆ ಗುತ್ತಿಗೆ ಆಧಾರದಲ್ಲಿ ನೀಡಲಾಗಿತ್ತು. ಈ ಜಾಗದಲ್ಲಿ 27 ಎಕರೆಯನ್ನು ಕೊಳೆಗೇರಿ ನಿವಾಸಿಗಳಿಗೆ ಪುನರ್ ವಸತಿ ಮತ್ತಿತರ ಉದ್ದೇಶಗಳಿಗೆ ಬಳಸಿಕೊಳ್ಳಲು ರಾಜ್ಯ ಸರ್ಕಾರ ಜಿಲ್ಲಾಧಿಕಾರಿಗೆ ಅಧಿಕಾರ ನೀಡಿತ್ತು.

ಕೇರಳ ಸಿ.ಎಂ ಪಿಣರಾಯ್ ಪುತ್ರಿ ಅರ್ಜಿ ಆದೇಶ ಕಾಯ್ದಿರಿಸಿದ ಹೈಕೋರ್ಟ್

ಬೆಂಗಳೂರು: ಸಾಫ್ಟ್‌ವೇರ್ ಸೇವೆ ಒದಗಿಸಿದ ನೆಪದಲ್ಲಿ ಬಹುಕೋಟಿ ತೆರಿಗೆ ವಂಚನೆ ಆರೋಪ ಎದುರಿಸುತ್ತಿರುವ ಎಕ್ಸಾಲಾಜಿಕ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ನಿರ್ದೇಶಕಿಯೂ ಆದ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಪುತ್ರಿ ಟಿ.ವೀಣಾ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಹೈಕೋರ್ಟ್ ತನ್ನ ಆದೇಶವನ್ನು ಕಾಯ್ದಿರಿಸಿದೆ.

ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿರುವ ಎಸ್ಎಫ್ಐಒ (ಸೀರಿಯಸ್ ಫ್ರಾಡ್ ಇನ್ವೆಸ್ಟಿಗೇಷನ್ ಆಫೀಸ್), ಕಂಪನಿ ವಿರುದ್ಧ ತನಿಖೆಗೆ ಆದೇಶಿಸಿರುವುದನ್ನು ಪ್ರಶ್ನಿಸಿ ಟಿ.ವೀಣಾ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಾದ ಆಲಿಸಿದ ನ್ಯಾಯಪೀಠ, ಅರ್ಜಿದಾರರ ವಿರುದ್ಧ ಬಲವಂತದ ಕ್ರಮ ಕೈಗೊಳ್ಳದಂತೆ ಕೇಂದ್ರ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಅರವಿಂದ ಕಾಮತ್ ಮತ್ತು ಡೆಪ್ಯೂಟಿ ಸಾಲಿಸಿಟರ್ ಜನರಲ್ ಎಚ್.ಶಾಂತಿಭೂಷಣ್ ಅವರಿಗೆ ಮೌಖಿಕವಾಗಿ ಸೂಚಿಸಿತು.

ಎಕ್ಸಾಲಾಜಿಕ್ ಸಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ನಗರದ ಎಚ್ಎಸ್ಆರ್ ಲೇ ಔಟ್ ಸೆಕ್ಟರ್–7ರ 9ನೇ ಮುಖ್ಯರಸ್ತೆಯಲ್ಲಿ ಕಚೇರಿ ಹೊಂದಿದೆ. ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಟಿ.ವೀಣಾ ಇದರ ನಿರ್ದೇಶಕಿ ಮತ್ತು ಪಾಲುದಾರೆ ಆಗಿದ್ದಾರೆ. ಕೇರಳದ ಕೆಲವು ಕಂಪನಿಗಳಿಗೆ ಸಾಫ್ಟ್‌ವೇರ್ ಸೇವೆ ಒದಗಿಸಿ ಬಹುಕೋಟಿ ಮೊತ್ತದ ವರ್ಗಾವಣೆ ಮಾಡಿರುವ ಮತ್ತು ತೆರಿಗೆ ವಂಚನೆ ಆರೋಪವನ್ನು ಎಕ್ಸಾಲಜಿ ಕಂಪನಿ ಎದುರಿಸುತ್ತಿದೆ. ಆರೋಪದಡಿ ಖಚಿತ ಮಾಹಿತಿ ಆಧರಿಸಿ ಎಸ್ಎಫ್ಐಒ ಕಂಪನಿ ಕಾಯ್ದೆ–2013ರ ಕಲಂ 210ರ ಪ್ರಕಾರ ಪ್ರಾಥಮಿಕ ತನಿಖೆ ನಡೆಸಿತ್ತು. ಈ ಪ್ರಾಥಮಿಕ ತನಿಖಾ ಸಮಿತಿ ನೀಡಿದ್ದ ವರದಿ ಆಧರಿಸಿ ಹೆಚ್ಚಿನ ತನಿಖೆಗೆ ಆದೇಶಿಸಲಾಗಿದೆ.

ಕಾವೇರಿ: 2.5 ಟಿಎಂಸಿ ಹರಿಸಲು ಶಿಫಾರಸು

ಪ್ರಜಾವಾಣಿ ವಾರ್ತೆ

ನವದೆಹಲಿ: ಸುಪ್ರೀಂ ಕೋರ್ಟ್ ಮಾರ್ಪಡಿಸಿದ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಶಿಫಾರಸಿನ ಪ್ರಕಾರ, ಅಂತರರಾಜ್ಯ ಸಂಪರ್ಕ ಬಿಂದು ಬಿಳಿಗುಂಡ್ಲುನಲ್ಲಿ ಕರ್ನಾಟಕವು ನಿಗದಿತ ಪ್ರಮಾಣದ ಕಾವೇರಿ ನೀರು ಹರಿವನ್ನು ಖಚಿತಪಡಿಸಿಕೊಳ್ಳಬೇಕು ಎಂದು ಕಾವೇರಿ ನೀರು ನಿಯಂತ್ರಣ ಸಮಿತಿ ಸೋಮವಾರ ಶಿಫಾರಸು ಮಾಡಿದೆ.

ಸೋಮವಾರ ನಡೆದ ಸಮಿತಿಯ 93ನೇ ಸಭೆಯಲ್ಲಿ ಕರ್ನಾಟಕ ಹಾಗೂ ತಮಿಳುನಾಡಿ ಜಲಸಂಪನ್ಮೂಲ ಇಲಾಖೆಗಳ ಅಧಿಕಾರಿಗಳು ಭಾಗಿಯಾದರು. ಕರ್ನಾಟಕವು ಫೆಬ್ರುವರಿ ಹಾಗೂ ಮಾರ್ಚ್ ತಿಂಗಳಲ್ಲಿ ತಲಾ 2.50 ಟಿಎಂಸಿ ನೀರನ್ನು ಸಸ್ಯವರ್ಗ, ಪ್ರಾಣಿಸಂಕುಲ ಮತ್ತು ಪರಿಸರ ಸಂರಕ್ಷಣೆಗಾಗಿ ಖಚಿತಪಡಿಸಿಕೊಳ್ಳಬೇಕು ಎಂದು ಶಿಫಾರಸು ಮಾಡಲಾಯಿತು.

ಜೂನ್‌ನಿಂದ ಈ ವರ್ಷದ ಫೆಬ್ರುವರಿ 9ರವರೆಗೆ ರಾಜ್ಯದ ನಾಲ್ಕು ಜಲಾಶಯಗಳಿಗೆ ಒಟ್ಟು ಒಳಹರಿವಿನ ಕೊರತೆ ಶೇ 54.43. ಜಲಾಶಯಗಳಿಂದ ನೀರು ಬಿಡುಗಡೆ ಸಾಧ್ಯವಿಲ್ಲ ಎಂದು ರಾಜ್ಯದ ಅಧಿಕಾರಿಗಳು ಸ್ಪಷ್ಟಪಡಿಸಿದರು. 7.61 ಬ್ಯಾಕ್‌ಲಾಗ್ ನೀರನ್ನು ಕರ್ನಾಟಕ ಬಿಡುಗಡೆ ಮಾಡಬೇಕು ಹಾಗೂ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ, ಮಾರ್ಚ್ ಅಂತ್ಯದ ವರೆಗೆ ನೀರು ಬಿಡುಗಡೆ ಮಾಡಬೇಕು ಎಂದು ತಮಿಳುನಾಡಿನ ಅಧಿಕಾರಿಗಳು ಒತ್ತಾಯಿಸಿದರು.

ಸಂಕ್ಷಿಪ್ತ ಸುದ್ದಿ

ಬೆಳ್ಳಿ ಬಟ್ಟಲು: ಪುಟ್ಟಣ್ಣ ವಿರುದ್ಧ ದೂರು

ಬೆಂಗಳೂರು: ಶಿಕ್ಷಕರ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪುಟ್ಟಣ್ಣ ಅವರು ಶಾಲಾ ಶಿಕ್ಷಕರಿಗೆ ಬೆಳ್ಳಿ ಬಟ್ಟಲು ನೀಡುವ ಮೂಲಕ ಆಮಿಷ ಒಡ್ಡುತ್ತಿದ್ದಾರೆ ಎಂದು ಆರೋಪಿಸಿ ಜೆಡಿಎಸ್ ವಕ್ತಾರ ಪ್ರದೀಪ್ ಕುಮಾರ್ ಸೋಮವಾರ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದಾರೆ.

ಪುಟ್ಟಣ್ಣ ಅವರ ಕಾರ್ಯಕರ್ತರು ಹೊಸಕೋಟೆ, ವಿಜಯನಗರ, ಚನ್ನಪಟ್ಟಣ, ಕನಕಪುರ, ಗೋವಿಂದರಾಜ ನಗರ ಕ್ಷೇತ್ರಗಳಲ್ಲಿ ಬೆಳ್ಳಿಯ ಬಟ್ಟಲುಗಳನ್ನು ಹಂಚಿದ್ದಾರೆ. ಇದು ಚುನಾವಣೆಯ ಮಾದರಿ ನೀತಿ ಸಂಹಿತೆಯ ಉಲ್ಲಂಘನೆ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಬೆಳ್ಳಿ ಬಟ್ಟಲು ಇರುವ ಬಾಕ್ಸ್, ಕವರ್ ಮೇಲೆ ಪುಟ್ಟಣ್ಣ ಅವರ ಹೆಸರು ಇಂಗ್ಲಿಷ್ ಹಾಗೂ ಕನ್ನಡದಲ್ಲಿ ನಮೂದಿಸಿದ್ದಾರೆ. ಅವುಗಳನ್ನು ಮಹಿಳಾ ಕಾರ್ಯಕರ್ತೆಯೊಬ್ಬರು ಶಿಕ್ಷಕರಿಗೆ ವಿತರಿಸುತ್ತಿರುವ ಚಿತ್ರಗಳನ್ನೂ ಜೆಡಿಎಸ್ ಪಕ್ಷ ಮಾಧ್ಯಮಗಳಿಗೆ ಬಿಡುಗಡೆ ಮಾಡಿದೆ.

ಕರ್ನಾಟಕದಲ್ಲಿ ಹೂಡಿಕೆಗೆ ವೇಲ್ಸ್ ಒಲವು

ಬೆಂಗಳೂರು: ಸೆಮಿಕಂಡಕ್ಟರ್, ವೈಮಾಂತರಿಕ್ಷ, ಆಟೊಮೊಟಿವ್, ಆಹಾರ ಮತ್ತು ಪಾನೀಯ, ಮೆಡ್–ಟೆಕ್, ಫಿನ್–ಟೆಕ್ ಹಾಗೂ ಮರುಬಳಕೆ ಇಂಧನ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಲು ವೇಲ್ಸ್ ಕರ್ನಾಟಕದತ್ತ ಚಿತ್ತ ಹರಿಸಿದೆ ಎಂದು ಬ್ರಿಟನ್ ಕಾರ್ಯದರ್ಶಿ (ವೇಲ್ಸ್) ಡೇವಿಡ್ ಡೇವಿಸ್ ಹೇಳಿದರು.

ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರನ್ನು ಭೇಟಿ ಮಾಡಿ, ಮಾತುಕತೆ ನಡೆಸಿದ ನಂತರ ಅವರು ಮಾತನಾಡಿದರು.

ತಂತ್ರಜ್ಞಾನ ಕ್ಷೇತ್ರಗಳಲ್ಲಿ ವೇಲ್ಸ್ ಪರಿಣತಿ ಹೊಂದಿದೆ. ಕರ್ನಾಟಕದ ಜತೆಗೆ ಕೈಗಾರಿಕಾ ಸಹಭಾಗಿತ್ವದ ಹೊಂದಲು, ಹೆಚ್ಚಿನ ಹೂಡಿಕೆ ಮಾಡಲು ಸಿದ್ಧವಿದ್ದೇವೆ. ಈ ಕುರಿತು ಮೊದಲ ಸುತ್ತಿನ ಮಾತುಕತೆ ನಡೆಸಲಾಗಿದೆ. ಸಕಾರಾತ್ಮಕ ಸ್ಪಂದನೆ ದೊರೆತಿದೆ ಎಂದರು.

ಸಚಿವ ಎಂ.ಬಿ.ಪಾಟೀಲ ಮಾತನಾಡಿ, ಬೆಂಗಳೂರಿನ ಸಮೀಪ ಎರಡು ಸಾವಿರ ಎಕರೆಯಲ್ಲಿ ಜಾಗತಿಕ ದರ್ಜೆಯ ಜ್ಞಾನ, ಆರೋಗ್ಯ, ನಾವೀನ್ಯತೆ ಮತ್ತು ಸಂಶೋಧನಾ ನಗರ (ಕೆಎಚ್‌ಐಆರ್ ಸಿಟಿ) ನಿರ್ಮಾಣವಾಗುತ್ತಿದೆ. ವೇಲ್ಸ್‌ನ ಹಲವು ಕಂಪನಿಗಳು ಹೂಡಿಕೆ ಮಾಡುತ್ತಿವೆ. ರಾಜ್ಯದಲ್ಲಿ ಏರೋಸ್ಪೇಸ್, ರಕ್ಷಣೆ ಮತ್ತು ಮಷೀನ್ ಟೂಲ್ಸ್ ಕ್ಷೇತ್ರಗಳಲ್ಲೂ ಹೂಡಿಕೆಗೆ ಅವಕಾಶ ಕಲ್ಪಿಸಲಾಗುತ್ತಿದೆ. 'ಶುದ್ಧ ಇಂಧನ ನೀತಿ' ಜಾರಿಗೆ ತರಲಾಗುತ್ತಿದೆ ಎಂದು ವಿವರಿಸಿದರು.

ಬ್ರಿಟನ್‌ನಲ್ಲಿನ ವೈದ್ಯಕೀಯ ಸಿಬ್ಬಂದಿ ಕೊರತೆ ನೀಗಿಸಲು ಕರ್ನಾಟಕ ಸಹಕರಿಸಲಿದೆ ಎಂದರು.

ಬಿಬಿಎಂಪಿ: ಮುಂದಿನ 30 ದಿನಗಳಲ್ಲಿ ₹900 ಕೋಟಿ ಗುರಿ

ಹೆಚ್ಚುವರಿ ತೆರಿಗೆ ಸಂಗ್ರಹಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಎಂಟೂ ವಲಯಗಳಲ್ಲಿ ಹೆಚ್ಚುವರಿಯಾಗಿ ₹157 ಕೋಟಿ ಆಸ್ತಿ ತೆರಿಗೆಯನ್ನು ಒಂದು ವಾರದಲ್ಲಿ ಸಂಗ್ರಹಿಸಬೇಕು ಎಂದು ವಲಯ ಆಯುಕ್ತರಿಗೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದ್ದಾರೆ.

ಮುಖ್ಯ ಆಯುಕ್ತರ ಸೂಚನೆಯಂತೆ ಫೆ.19ರೊಳಗೆ ಕನಿಷ್ಠ ಗುರಿಯನ್ನು ನಿಗದಿ ಮಾಡಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಅವರು ವಲಯ ಆಯುಕ್ತರಿಗೆ 'ಕೈಬರಹ'ದ ಆದೇಶವನ್ನು ಫೆ.12ರಂದು ಹೊರಡಿಸಿದ್ದಾರೆ.

'ಎಲ್ಲ ರೀತಿಯಲ್ಲಿಯೂ ತೆರಿಗೆ ಸಂಗ್ರಹಿಸುವತ್ತ ತಮ್ಮ ಗಮನ ಕೇಂದ್ರೀಕೃತವಾಗಿರಬೇಕು. ನಕ್ಷೆ ಅನುಮೋದನೆಗೊಂಡಿರುವ ಹಾಗೂ ಖಾತಾ ನೀಡಲಾಗಿರುವ ಎಲ್ಲ ಆಸ್ತಿಗಳನ್ನೂ ತೆರಿಗೆ ವ್ಯಾಪ್ತಿಗೆ ತರಬೇಕು. ತೆರಿಗೆ ಪುನರ್‌ವಿಮರ್ಶೆ ಮಾಡಿದ ಎಲ್ಲ ಪ್ರಕರಣಗಳಲ್ಲೂ ಜಪ್ತಿ, ಚರಾಸ್ತಿಗಳನ್ನು ವಶಪಡಿಸಿಕೊಳ್ಳುವ ಮೂಲಕ ತೆರಿಗೆ ಪಾವತಿ ಮಾಡಿಸಿಕೊಳ್ಳಬೇಕು. ಬಾಕಿ ಉಳಿಸಿಕೊಂಡಿರುವವರ ಮೇಲೆ ಕ್ರಮ ಕೈಗೊಳ್ಳಬೇಕು' ಎಂದು ಆದೇಶದಲ್ಲಿ ತಿಳಿಸಲಾಗಿದೆ.

'2023–24ನೇ ಸಾಲಿನಲ್ಲಿ ₹4,500 ಕೋಟಿ ತೆರಿಗೆ ಸಂಗ್ರಹದ ಗುರಿ ಹೊಂದಲಾಗಿದೆ. ಈಗಾಗಲೇ ₹3,600 ಕೋಟಿ ಸಂಗ್ರಹಿಸಲಾಗಿದೆ. ಫೆಬ್ರುವರಿ ಅಂತ್ಯಕ್ಕೆ ₹500 ಕೋಟಿ ಸಂಗ್ರಹವಾಗಲಿದೆ. ಲೋಕಸಭೆ ಚುನಾವಣೆ ಸಮೀಪವಾಗುತ್ತಿರುವ ನಿಟ್ಟಿನಲ್ಲಿ ಮುಂದಿನ 30 ದಿನಗಳಲ್ಲಿ ₹900 ಕೋಟಿ ಸಂಗ್ರಹಿಸಬೇಕಿದೆ. ಹೀಗಾಗಿ ಪ್ರತಿ ವಾರವೂ ಹೆಚ್ಚುವರಿಯಾಗಿ ₹150 ಕೋಟಿಯಷ್ಟು ಹೆಚ್ಚುವರಿಯಾಗಿ ತೆರಿಗೆ ಸಂಗ್ರಹಿಸಲು ಸೂಚಿಸಲಾಗಿದೆ' ಎಂದು ಮುನೀಶ್ ಮೌದ್ಗಿಲ್ ಅವರು ಮಾಹಿತಿ ನೀಡಿದರು.

ಮಾನವೀಯತೆ ತೋರಿ: 'ಚುನಾವಣೆ ಕೆಲಸ, ತೆರಿಗೆ ಪುನರ್ ನಿಗದಿ ಸೇರಿದಂತೆ ನಿತ್ಯದ ನಿಗದಿತ ಕೆಲಸಗಳನ್ನೂ ನಿರ್ವಹಿಸುತ್ತಿರುವುದರಿಂದ ಹೆಚ್ಚುವರಿ ತೆರಿಗೆ ಸಂಗ್ರಹ ಮತ್ತಷ್ಟು ಹೊರೆಯಾಗಲಿದೆ. ಈಗಾಗಲೇ ನಾವೆಲ್ಲ ನಿತ್ಯ ಸುಮಾರು 14 ಗಂಟೆ ಕೆಲಸ ಮಾಡುತ್ತಿದ್ದೇವೆ. ನಮ್ಮ ಮೇಲೂ ಮಾನವೀಯತೆ ತೋರಬೇಕು' ಎಂದು ಕಂದಾಯ ವಿಭಾಗದ ಸಿಬ್ಬಂದಿ ಅಳಲು ತೋಡಿಕೊಂಡರು.



ಆಸ್ತಿ ಮಾಲೀಕರಿಗೆ ಬಿಬಿಎಂಪಿಯಿಂದ ಕಿರುಕುಳ: ಬಿಜೆಪಿ ಆರೋಪ

ಬೆಂಗಳೂರು: 'ಬಿಬಿಎಂಪಿಯಲ್ಲಿ ಭ್ರಷ್ಟಾಚಾರ ಮಿತಿಮೀರಿದ್ದು, ಕಂದಾಯ ವಿಭಾಗವು ಅತಿ ಹೆಚ್ಚಿನ ದಂಡ, ಬಡ್ಡಿ ವಿಧಿಸಿ ಆಸ್ತಿ ಮಾಲೀಕರಿಗೆ ಕಿರುಕುಳ ನೀಡುತ್ತಿದೆ' ಎಂದು ಬಿಜೆಪಿಯ ಬೆಂಗಳೂರು ಮಹಾನಗರ ಘಟಕ ಆರೋಪಿಸಿದೆ.

'ಬಾಕಿ ಇರುವ ತೆರಿಗೆ ಮೇಲಿನ ದಂಡ ವಿಧಿಸುವ ಆದೇಶವನ್ನು ಹಿಂದಕ್ಕೆ ಪಡೆಯದೇ ಹೋದರೆ, ನಗರದಾದ್ಯಂತ ಹೋರಾಟ ನಡೆಸಲಾಗುವುದು' ಎಂದು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ನೀಡಿರುವ ಮನವಿ ಪತ್ರದಲ್ಲಿ ಎಚ್ಚರಿಸಲಾಗಿದೆ.

ಬಿಬಿಎಂಪಿ ವ್ಯಾಪ್ತಿಯ ವಿಧಾನಸಭೆ ಕ್ಷೇತ್ರದ ಬಿಜೆಪಿ ಶಾಸಕರು ಹಾಗೂ ನಗರದ ಮುಖಂಡರು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರನ್ನು ಸೋಮವಾರ ಭೇಟಿ ಮಾಡಿ ಮನವಿ ಸಲ್ಲಿಸಿದರು.

'ಒಂಬತ್ತು ತಿಂಗಳಿಂದ ನಗರದಲ್ಲಿ ಯಾವುದೇ ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡಿಲ್ಲ. ಆದರೆ, ಅನೇಕ ವರ್ಷಗಳಿಂದ ಜಾರಿಯಲ್ಲಿರುವ ಸ್ವಯಂ ಆಸ್ತಿ ಘೋಷಣೆಯಲ್ಲಿನ ನ್ಯೂನತೆಯ ಹೆಸರಿನಲ್ಲಿ ಕಟ್ಟಡ ಮಾಲೀಕರಿಗೆ ನೋಟಿಸ್ ನೀಡಿ, ಅಕ್ರಮವಾಗಿ ವಸೂಲಿ ಮಾಡಲಾಗುತ್ತಿದೆ. 'ಡಿಕೆ ಟ್ಯಾಕ್ಸ್'ನಿಂದ ಈಗಾಗಲೇ ಬಳಲಿರುವ ನಾಗರಿಕರಿಗೆ ಆಸ್ತಿ ತೆರಿಗೆ ಸುಲಿಗೆ ಹೊರೆಯಾಗಿದೆ' ಎಂದು ದೂರಿದರು.

'ವಾಣಿಜ್ಯ ಕಟ್ಟಡ ಹಾಗೂ ಮನೆಗಳಿಗೆ ಲಕ್ಷಾಂತರ ರೂಪಾಯಿ ದಂಡ ಮತ್ತು ಬಡ್ಡಿ ವಿಧಿಸಿ ಅದನ್ನು ಪಾವತಿಸಲು ತಡ ಮಾಡುವವರ ಬ್ಯಾಂಕ್ ಖಾತೆ ಸ್ಥಗಿತಗೊಳಿಸಿ, ಮಳಿಗೆಗಳಿಗೆ ಬೀಗ ಹಾಕಿ ಕಿರುಕುಳ ನೀಡುತ್ತಿರುವುದನ್ನು ತಕ್ಷಣವೇ ನಿಲ್ಲಿಸಬೇಕು. ಸ್ವಯಂ ಆಸ್ತಿ ಘೋಷಣೆಯ ವಲಯ ವಿಂಗಡಣೆಯಲ್ಲಿರುವ ನ್ಯೂನತೆಯನ್ನು ಸರಿಪಡಿಸಿ, ನಾಗರಿಕ ಸ್ನೇಹಿ ಪದ್ಧತಿ ಜಾರಿಗೊಳಿಸಬೇಕು' ಎಂದರು.

'ಬಾಕಿ ತೆರಿಗೆ ಪಾವತಿಸಲು ನೀಡಲಾಗುತ್ತಿರುವ 30 ದಿನಗಳ ಗಡುವನ್ನು 90 ದಿನಗಳಿಗೆ ವಿಸ್ತರಿಸಬೇಕು' ಎಂದು ಒತ್ತಾಯಿಸಿದರು.

ಬಿಜೆಪಿ ಸಂಸದ ಪಿ.ಸಿ.ಮೋಹನ್, ಶಾಸಕರಾದ ರವಿ ಸುಬ್ರಹ್ಮಣ್ಯ, ಎಸ್. ಆರ್. ವಿಶ್ವನಾಥ್, ಎಸ್. ಮುನಿರಾಜು, ಮುನಿರತ್ನ, ಸಿ.ಕೆ. ರಾಮಮೂರ್ತಿ, ಎಂ. ಕೃಷ್ಣಪ್ಪ, ಎಸ್. ಸುರೇಶ್ ಕುಮಾರ್, ಬೆಂಗಳೂರು ಉತ್ತರ, ಕೇಂದ್ರ, ದಕ್ಷಿಣ ಜಿಲ್ಲಾ ಘಟಕಗಳ ಪದಾಧಿಕಾರಿಗಳು ಹಾಜರಿದ್ದರು.



ಬಿಬಿಎಂಪಿ ವ್ಯಾಪ್ತಿಯ ವಿಧಾನಸಭೆ ಕ್ಷೇತ್ರದ ಬಿಜೆಪಿ ಶಾಸಕರು ಹಾಗೂ ನಗರದ ಮುಖಂಡರು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರನ್ನು ಸೋಮವಾರ ಭೇಟಿಯಾಗಿ ಮನವಿ ಸಲ್ಲಿಸಿದರು

ಸಂಚಾರ ದಟ್ಟಣೆ ಕಡಿಮೆ ಮಾಡಲು ಸುರಂಗ ರಸ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಸಂಚಾರ ದಟ್ಟಣೆ ಕಡಿಮೆಗೊಳಿಸಲು, ಸುರಂಗ ರಸ್ತೆ ನಿರ್ಮಿಸಲು ಉದ್ದೇಶಿಸಲಾಗಿದೆ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ತಿಳಿಸಿದರು.

ವಿಧಾನಮಂಡಲದ ಉಭಯ ಸದನಗಳ ಸದಸ್ಯರನ್ನು ಉದ್ದೇಶಿಸಿ ಮಾತನಾಡಿ ಅವರು ಈ ವಿಷಯ ತಿಳಿಸಿದರು.

ಸುರಂಗ ನಿರ್ಮಾಣದ ಕುರಿತು ಕಾರ್ಯಸಾಧ್ಯತಾ ವರದಿಯನ್ನು ಸಿದ್ಧಪಡಿಸಲಾಗುತ್ತಿದೆ ಎಂದು ವಿವರಿಸಿದರು.

ಬಿಬಿಎಂಪಿ ವ್ಯಾಪ್ತಿಗೆ ಸೇರ್ಪಡೆಯಾದ 110 ಹಳ್ಳಿಗಳ ಪ್ರದೇಶಗಳಿಗೆ 775 ಎಂಎಲ್‌ಡಿ ಹೆಚ್ಚುವರಿ ಕುಡಿಯುವ ನೀರನ್ನು ಪೂರೈಸುವ ಯೋಜನೆಯಾದ ಕಾವೇರಿ ನೀರು ಸರಬರಾಜು 5 ನೇ ಹಂತ ಯೋಜನೆಯನ್ನು ಮುಂಬರುವ ಮಾರ್ಚ್ ಕಾರ್ಯಾರಂಭಗೊಳಿಸಲು ಉದ್ದೇಶಿಸಲಾಗಿದೆ ಎಂದರು.

ಬಿಎಸ್‌ಆರ್‌ಪಿ: ಬೆಂಗಳೂರು ಉಪನಗರ ರೈಲ್ವೆ ಯೋಜನೆಯಡಿ (ಬಿಎಸ್‌ಆರ್‌ಪಿ) ಬೈಯಪ್ಪನಹಳ್ಳಿ–ಚಿಕ್ಕಬಾಣಾವರ ಕಾರಿಡಾರ್ ಪ್ರಗತಿಯಲ್ಲಿದೆ. ಹೀಲಲಿಗೆ– ರಾಜಾನುಕುಂಟೆ ಕಾರಿಡಾರ್‌ನ ಸಿವಿಲ್ ಕಾಮಗಾರಿ ಟೆಂಡರ್ ಅನ್ನು ಅಂತಿಮಗೊಳಿಸಲಾಗಿದ್ದು, ಶೀಘ್ರದಲ್ಲೇ ಕಾಮಗಾರಿ ಆರಂಭಿಸಲಾಗುವುದು ಎಂದು ಗೆಹಲೋತ್ ಹೇಳಿದರು.

ಬೆಂಗಳೂರು ಮೆಟ್ರೊ ಹಂತ–2ರಲ್ಲಿ ರಾಗಿಗುಡ್ಡದಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್‌ವರೆಗೆ 3.3 ಕಿ.ಮೀ ಉದ್ದದ 16 ನಿಲ್ದಾಣಗಳನ್ನು ಡಬಲ್ ಡೆಕ್ಕರ್ ಮಾದರಿಯಲ್ಲಿ ನಿರ್ಮಿಸುತ್ತಿದ್ದು, ಶೇ 98 ರಷ್ಟು ಕೆಲಸ ಮುಗಿದಿದೆ. ಜುಲೈ ಒಳಗೆ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು ಎಂದು ಹೇಳಿದರು.

'ರಾಮನಗರದವರು ಬೆಂಗಳೂರಿನ ಭಾಗ'

ರಾಮನಗರ: 'ರಾಮನಗರದವರು ಬೆಂಗಳೂರಿನವರು. ನಾವು ಬೆಂಗಳೂರಿನ ಭಾಗ. ಈ ವಿಚಾರವಾಗಿ ಚುನಾವಣೆ ನಂತರ ಚರ್ಚೆ ಮಾಡಿ ರೂಪುರೇಷೆ ನೀಡುತ್ತೇನೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಎಸ್‌ಆರ್‌ಟಿಸಿ ರಾಮನಗರ ಜಿಲ್ಲೆಗೆ ಹೊಸದಾಗಿ ನೀಡಿರುವ 25 ಅಶ್ವಮೇಧ ಕ್ಲಾಸಿಕ್ ಬಸ್‌ಗಳಿಗೆ ಸೋಮವಾರ ಚಾಲನೆ ನೀಡಿ ಮಾತನಾಡಿದ ಅವರು, 'ಬಿಡದಿ ಪ್ರಾಧಿಕಾರವನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರವಾಗಿ ಪರಿವರ್ತಿಸಿದ್ದೇವೆ. ಬಿಡದಿವರೆಗೆ ಮೆಟ್ರೊ ವಿಸ್ತರಿಸಲು ಡಿಪಿಆರ್ ಸಿದ್ಧಪಡಿಸಲಾಗುತ್ತಿದೆ' ಎಂದರು.

ಸರ್ಕಾರ, ಬಿಬಿಎಂಪಿಗೆ ಹೈಕೋರ್ಟ್ ನೋಟಿಸ್

ಬೆಂಗಳೂರು: 'ಮಲ್ಲೇಶ್ವರ ಸಂಪಿಗೆ ರಸ್ತೆಯಲ್ಲಿನ ಆಭರಣ ಮಳಿಗೆಗಳು ಪ್ರಕಾಶಮಾನ ಎಲ್‌ಇಡಿ ದೀಪಗಳ ಡಿಜಿಟಲ್ ನಾಮಫಲಕ ಹಾಗೂ ಜಾಹೀರಾತು ಫಲಕಗಳನ್ನು ಅಳವಡಿಸಿ ಸಾರ್ವಜನಿಕರು ಮತ್ತು ವಾಹನ ಸವಾರರಿಗೆ ತೊಂದರೆ ಉಂಟು ಮಾಡುತ್ತಿವೆ' ಎಂದು ಆಕ್ಷೇಪಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಹೈಕೋರ್ಟ್ ವಕೀಲೆ ದೀಕ್ಷಾ ಎನ್. ಅಮೃತೇಶ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಅಧ್ಯಕ್ಷ, ಬಿಬಿಎಂಪಿ ಮುಖ್ಯ ಆಯುಕ್ತ, ಬೆಂಗಳೂರು ನಗರ ಪೊಲೀಸ್ ಆಯುಕ್ತ ಹಾಗೂ ಮಲ್ಲೇಶ್ವರ ಸಂಚಾರ ಉತ್ತರ ವಿಭಾಗದ ಸಹಾಯಕ ಪೊಲೀಸ್ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿದೆ. ಅರ್ಜಿದಾರರ ಪರ ವಕೀಲ ಎನ್.ಪಿ.ಅಮೃತೇಶ್ ವಾದ ಮಂಡಿಸಿದರು.

ಅರ್ಜಿಯಲ್ಲಿ ಏನಿದೆ?: ಸಂಪಿಗೆ ರಸ್ತೆಯಲ್ಲಿರುವ ಎವಿಆರ್ ಸ್ವರ್ಣ ಮಹಲ್, ಓಆರ್‌ಆರ್‌ಎ, ತನಿಷ್ಕ್ ಹಾಗೂ ಇತರ ಚಿನ್ನಾಭರಣ ಮಳಿಗೆಗಳು ಹೆಚ್ಚಿನ ಹೊಳಪಿನ ಎಲ್‌ಇಡಿ ಹಾಗೂ ಜಾಹೀರಾತು ಫಲಕಗಳನ್ನು ಅಳವಡಿಸಿವೆ. ಇವುಗಳನ್ನು ನೆಲಮಟ್ಟದಿಂದ ಬಹಳಷ್ಟು ಎತ್ತರಕ್ಕೆ ಮುಖ್ಯರಸ್ತೆಗೆ ಮುಖ ಮಾಡಿ ಇರಿಸಲಾಗಿದೆ. ಇವು ಸುರಕ್ಷತಾ ಮಿತಿಗಿಂತ ಹೆಚ್ಚಿನ ಬೆಳಕನ್ನು ಹೊರಸೂಸುತ್ತಿವೆ. ಇದರಿಂದ ರಾತ್ರಿ ಸಮಯದಲ್ಲಿ ಸಾರ್ವಜನಿಕರಿಗೆ, ಅದರಲ್ಲೂ ಸಂಚಾರ ದಟ್ಟಣೆಯಲ್ಲಿ ಸಿಲುಕಿದ ವಾಹನ ಸವಾರರಿಗೆ ಮತ್ತು ಚಾಲಕರಿಗೆ ಅಪಾಯ ಎದುರಾಗುತ್ತಿದೆ' ಎಂದು ಅರ್ಜಿಯಲ್ಲಿ ದೂರಲಾಗಿದೆ.

'ಅಧ್ಯಯನಗಳ ಪ್ರಕಾರ ಎಲ್‌ಇಡಿ ಜಾಹೀರಾತು ಫಲಕಗಳಿಂದ ಹೊರಹೊಮ್ಮುವ ಪ್ರಕಾಶಮಾನ ಬೆಳಕು, ಜನರ ದೈಹಿಕ, ಮಾನಸಿಕ ಆರೋಗ್ಯ ಮತ್ತು ಪ್ರಾಣಿಗಳ ಮೇಲೂ ದುಷ್ಪರಿಣಾಮ ಬೀರುತ್ತದೆ. ಬಿಬಿಎಂಪಿ ಜಾಹೀರಾತು ಅಧಿನಿಯಮ-2021ರ ಅಡಿಯಲ್ಲಿ ಎಲ್‌ಇಡಿ ಜಾಹೀರಾತು ಫಲಕಗಳ ಪ್ರದರ್ಶನಕ್ಕೆ ನಿರ್ದಿಷ್ಟ ಮಾರ್ಗಸೂಚಿ ರೂಪಿಸಲಾಗಿದೆ. ಆದರೆ, ಈ ಮಾರ್ಗಸೂಚಿಗೆ ವಿರುದ್ಧವಾಗಿ ಅರ್ಜಿಯಲ್ಲಿನ ಪ್ರತಿವಾದಿ ಮಳಿಗೆಗಳು ಜಾಹೀರಾತು ಫಲಕಗಳನ್ನು ಅಳವಡಿಸಿವೆ' ಎಂದು ಆಕ್ಷೇಪಿಸಲಾಗಿದೆ.

'ಎಲ್‌ಇಡಿ ದೀಪಗಳ ಡಿಜಿಟಲ್ ಹೊರಾಂಗಣ ಜಾಹೀರಾತಿಗಾಗಿ ಸುರಕ್ಷತಾ ಮಾನದಂಡ ಜಾರಿಗೊಳಿಸಬೇಕಿದೆ. ಈ ಕುರಿತಂತೆ ಕ್ರಮ ಜರುಗಿಸಲು ಕೋರಿ 2023ರ ಆಗಸ್ಟ್ 21ಮತ್ತು ನವೆಂಬರ್ 4ರಂದು ಅರ್ಜಿದಾರರು ಪ್ರತಿವಾದಿಗಳಿಗೆ ಮನವಿ ಸಲ್ಲಿಸಲಾಗಿದೆ. ಆದರೆ, ಪ್ರತಿವಾದಿಗಳು ಈತನಕ ಯಾವುದೇ ಕ್ರಮ ಕೈಗೊಂಡಿಲ್ಲ. ಆದ್ದರಿಂದ, ಅರ್ಜಿದಾರರ ಮನವಿ ಪರಿಗಣಿಸಿ ಎಲ್‌ಇಡಿ ನಾಮಫಲಕ ಹಾಗೂ ಜಾಹೀರಾತು ಫಲಕಗಳನ್ನು ತೆರವುಗೊಳಿಸಲು ನಿರ್ದೇಶಿಸಬೇಕು' ಎಂದು ಕೋರಲಾಗಿದೆ.

ಭೂವಿಜ್ಞಾನಿ ವಜಾಕ್ಕೆ ಆಗ್ರಹ

ಬೆಂಗಳೂರು: ಚಿತ್ರದುರ್ಗ ಜಿಲ್ಲೆಯ ಕ್ವಾರಿ ಮತ್ತು ಸ್ಟೋನ್ ಕ್ರಷರ್ ಓನರ್ಸ್ ಅಸೋಸಿಯೇಷನ್ ಅಧ್ಯಕ್ಷ ಅಬ್ದುಲ್ ಮಜೀದ್ ಮೇಲೆ ಮಾರಾಣಾಂತಿಕ ಹಲ್ಲೆ ನಡೆಸಿದ ಭೂವಿಜ್ಞಾನಿ ಮಧುಸೂದನ್ ಅವರನ್ನು ವಜಾಗೊಳಿಸಬೇಕು ಎಂದು ಫೆಡರೇಷನ್ ಆಫ್ ಕರ್ನಾಟಕ ಕ್ವಾರಿ ಮತ್ತು ಸ್ಟೋನ್ ಕ್ರಷರ್ ಓನರ್ಸ್ ಅಸೋಸಿಯೇಷನ್ ಆಗ್ರಹಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಫೆಡರೇಷನ್ ರಾಜ್ಯ ಘಟಕದ ಅಧ್ಯಕ್ಷ ರವೀಂದ್ರ ಶೆಟ್ಟಿ, 'ಅಬ್ದುಲ್ ಮಜೀದ್ ಅವರು ನಮ್ಮ ಉದ್ಯಮದ ಹಿರಿಯ ಸದಸ್ಯರಾಗಿದ್ದು, ಅವರ ಮೇಲೆ ಚಿತ್ರದುರ್ಗ ತಾಲ್ಲೂಕಿನ ಭೂವಿಜ್ಞಾನಿ ಆಗಿರುವ ಮಧುಸೂದನ್ ಅವರು ಹಲ್ಲೆ ಮಾಡಿರುವುದು ಖಂಡನೀಯ. ಮಧುಸೂದನ್ ಅವರನ್ನು ವಜಾಗೊಳಿಸಬೇಕು. ಇಲ್ಲದಿದ್ದರೆ, ಮುಂದಿನ ದಿನಗಳಲ್ಲಿ ಪ್ರತಿಭಟನೆ ಮಾಡಲಾಗುವುದು' ಎಂದು ಎಚ್ಚರಿಕೆ ನೀಡಿದರು. ಫೆಡರೇಷನ್ ಉಪಾಧ್ಯಕ್ಷ ಕಿರಣ್ ಜೈನ್, ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ್, ಕಾರ್ಯದರ್ಶಿ ಅರುಣ್ ಕುಮಾರ್ ವಿ ಭಾಗವಹಿಸಿದ್ದರು.

ಡಿಸಿಎಂ ಹುದ್ದೆ ಅಸಾಂವಿಧಾನಿಕವಲ್ಲ: 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯವೊಂದು ಉಪಮುಖ್ಯಮಂತ್ರಿಯನ್ನು ನೇಮಕ ಮಾಡುವುದು ಸಂವಿಧಾನಬಾಹಿರ ಕ್ರಮ ಅಲ್ಲ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದ್ದು, ಡಿಸಿಎಂಗಳ ನೇಮಕವನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ಪೀಠವು, 'ಉಪಮುಖ್ಯಮಂತ್ರಿ ಎಂಬುದು ಒಂದು ಹುದ್ದೆಯ ಹೆಸರು ಮಾತ್ರ. ಅವರನ್ನು ಇತರರಿಗಿಂತ ಹಿರಿಯರು ಎಂದು ಪರಿಗಣಿಸುವರೇ ಹೊರತು, ಅಧಿಕ ವೇತನವನ್ನೇನೂ ಪಡೆಯುವುದಿಲ್ಲ' ಎಂದು ಅರ್ಜಿದಾರರ ಪರ ವಕೀಲರಿಗೆ ತಿಳಿಸಿದೆ.

'ಉಪಮುಖ್ಯಮಂತ್ರಿಯು ಒಬ್ಬ ಶಾಸಕ ಮತ್ತು ಸಚಿವ ಆಗಿರುವರು. ಅದು ಸಂವಿಧಾನಬಾಹಿರ ಹುದ್ದೆ ಅಲ್ಲ. ಅರ್ಜಿದಾರರ ವಾದದಲ್ಲಿ ಯಾವುದೇ ಹುರುಳಿಲ್ಲ. ಆದ್ದರಿಂದ ಅರ್ಜಿಯನ್ನು ತಿರಸ್ಕರಿಸಲಾಗಿದೆ' ಎಂದು ಪೀಠ ಹೇಳಿತು.

ನಗರದಲ್ಲಿ ಇಂದು

'ನಮ್ಮ ಎಂ.ಡಿ.ಎನ್' ಎಂ.ಡಿ. ನಂಜುಂಡಸ್ವಾಮಿ ಅವರ ಜನ್ಮದಿನಾಚರಣೆ: ಪ್ರಾಸ್ತಾವಿಕ ಭಾಷಣ: ರವಿವರ್ಮಾ ಕುಮಾರ್, ಉದ್ಘಾಟನೆ: ರಾಕೇಶ್ ಟಿಕಾಯತ್, 'ಬಾರಕೋಲು– ಪ್ರೊ.ಎಂ.ಡಿ. ನಂಜುಂಡಸ್ವಾಮಿ ಚಿಂತನೆ' ಪುಸ್ತಕ ಬಿಡುಗಡೆ, 'ಪ್ರೊ. ಎಂ.ಡಿ.ಎನ್. ನಾ ಕಂಡಂತೆ' ಸಂವಾದ ನಡೆಸಿಕೊಡುವವರು: ನಟರಾಜ್ ಹುಳಿಯಾರ್, ಸಿದ್ದರಾಮಯ್ಯ, ಮೇಧಾ ಪಾಟ್ಕರ್, ಹಿ.ಶಿ. ರಾಮಚಂದ್ರೇಗೌಡ, ಅಗ್ರಹಾರ ಕೃಷ್ಣಮೂರ್ತಿ, ಯುದ್ಧವೀರ್ ಸಿಂಗ್, ನೆಟ್ಟಿ ವೀಬ್, ಅನಸೂಯಮ್ಮ, ಪಚ್ಚೆ ನಂಜುಂಡಸ್ವಾಮಿ, ಸತೀಶ್ ಬಿ.ಎಸ್., ಪಾಲ್ ನಿಕೋಲ್ಸನ್, ನಲ್ಲಗೌಂಡರ್, ರಾಫೆಲ್ ಅಲೆಗ್ರಿಯಾ, ಕೆ.ಟಿ. ಗಂಗಾಧರ್, ಶಿವಸುಂದರ್, ಪ್ರೊ.ಎಂ.ಡಿ.ಎನ್ ಸ್ಮಾರಕ 'ಬಂಡವಾಳಶಾಹಿ ಕೃಷಿಯ ಜಾಲ ಮತ್ತು ಭಾರತೀಯ ರೈತರ ಸಬಲೀಕರಣ' ಕುರಿತು ಉಪನ್ಯಾಸ: ದೇವೇಂದ್ರ ಶರ್ಮಾ, ದೇಸಿ ಬೀಜ, ಪುಸ್ತಕ ಪ್ರದರ್ಶನ ಮತ್ತು ನಮ್ಮ ರೈತ ಮಾರುಕಟ್ಟೆ ಉದ್ಘಾಟನೆ, 'ಡೈರೆಕ್ಟ್ ಆ್ಯಕ್ಷನ್' ನಾಟಕ ಪ್ರದರ್ಶನ, ಆಯೋಜನೆ: ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10ರಿಂದ

'ಕೃಷ್ಣ ಅಧ್ಯಯನ' ಡಾ.ಕೃಷ್ಣ ಕೊಲ್ಹಾರಕುಲಕರ್ಣಿ ಅಭಿನಂದನ ಗ್ರಂಥ ಬಿಡುಗಡೆ: ಉದ್ಘಾಟನೆ: ಎಚ್. ಕೆ. ಪಾಟೀಲ, ಗ್ರಂಥ ಬಿಡುಗಡೆ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಗೋವಿಂದ ಕಾರಜೋಳ, ಸನ್ಮಾನ, ಅಭಿನಂದನಾ ನುಡಿ: ಎಂ.ಬಿ. ಪಾಟೀಲ, ಆಶಯ ನುಡಿ: ಸತ್ಯಧ್ಯಾನಚಾರ್ಯ ಕಟ್ಟಿ, ಕೃತಿ ಪರಿಚಯ: ಬಸವರಾಜ ಡೋಣೂರ, ಅತಿಥಿ: ಆಶಾ ಎಂ. ಪಾಟೀಲ, ಉಪಸ್ಥಿತಿ: ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಾ ಕುಲಕರ್ಣಿ, ಆಯೋಜನೆ: ಡಾ.ಕೃಷ್ಣ ಕೊಲ್ಹಾರಕುಲಕರ್ಣಿ ಅಭಿನಂದನ ಸಮಿತಿ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಸಂಜೆ 5

ಪಿ.ಕೆ. ನಾರಾಯಣ ಸಾಹಿತ್ಯ ದತ್ತಿ ಪ್ರಶಸ್ತಿ ಪ್ರದಾನ: ಈಶ್ವರ ದೈತೋಟ, ಅಧ್ಯಕ್ಷತೆ: ಮಹೇಶ ಜೋಶಿ, ಪ್ರಶಸ್ತಿ ಪುರಸ್ಕೃತರು: ಶಾ.ಮಂ. ಕೃಷ್ಣರಾಯ, ಉಪಸ್ಥಿತಿ: ವರದಾ ಶ್ರೀನಿವಾಸ್, ಆಯೋಜನೆ ಮತ್ತು ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಕಪ್ಪಣ್ಣ ಪ್ರಶಸ್ತಿ ಪ್ರದಾನ: ಹಂ.ಪ. ನಾಗರಾಜಯ್ಯ, ಪ್ರಶಸ್ತಿ ಪುರಸ್ಕೃತರು: ಜೀವನರಾಂ ಸುಳ್ಯ, ನರೇಶ್ ಡಿಂಗ್ರಿ, ಅತಿಥಿ: ಚಿರಂಜೀವಿ ಸಿಂಘ್, ಪ್ರಸ್ತಾವನೆ: ಬಿ. ಸುರೇಶ, ಅಧ್ಯಕ್ಷತೆ: ಟಿ.ಎಸ್. ನಾಗಾಭರಣ, ಉಪಸ್ಥಿತಿ: ಶ್ರೀನಿವಾಸ ಜಿ. ಕಪ್ಪಣ್ಣ, ಗಂಗಾಧರ್, ಬಿ.ಎಸ್. ವಿದ್ಯಾರಣ್ಯ, ಆಯೋಜನೆ: ಸೆಂಟರ್ ಸ್ಟೇಜ್, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಸಭಾಂಗಣ, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.30

ಮಧ್ವ ನವರಾತ್ರಿ ಉತ್ಸವ: 'ಯಮಕ ಭಾರತ' ಪ್ರವಚನ: ಖೇಡಾ ವೇದವ್ಯಾಸಾಚಾರ್ಯ, ಆಯೋಜನೆ ರಾಘವೇಂದ್ರ ಸ್ವಾಮಿ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಸುಧೀಂದ್ರನಗರ, ಸಂಜೆ 6.30

ಪ್ರವಚನ ವಾಹಿನಿ: 'ಭಗವದ್ಗೀತೆ' ಕುರಿತು ಉಪನ್ಯಾಸ: ಗೋಪಾಲ್ ಅಯ್ಯಂಗಾರ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

'ಕುಟುಂಬ ರಾಜಕಾರಣ'ಕ್ಕೆ ಕಾಂಗ್ರೆಸ್ ಮುಖಂಡರ ವಿರೋಧ; ಪಕ್ಷದ ನಿಷ್ಠಾವಂತರಿಗೆ ಮಣೆ ಹಾಕಲು ಆಗ್ರಹ

ಮಗನ ಕಣಕ್ಕಿಳಿಸಲು ಖಂಡ್ರೆ ಶತ ಪ್ರಯತ್ನ

• ಶಶಿಕಾಂತ ಎಸ್. ಶೆಂಬೆಳ್ಳಿ


ಈಶ್ವರ ಖಂಡ್ರೆ


ಸಾಗರ್ ಖಂಡ್ರೆ

ಬೀದರ್: ಅರಣ್ಯ, ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರಾದ ಈಶ್ವರ ಬಿ. ಖಂಡ್ರೆಯವರು ಬೀದರ್ ಲೋಕಸಭಾ ಕ್ಷೇತ್ರದಿಂದ ಬರುವ ಚುನಾವಣೆಯಲ್ಲಿ ತಮ್ಮ ಮಗ ಸಾಗರ್ ಖಂಡ್ರೆಯವರನ್ನು ಕಣಕ್ಕಿಳಿಸಲು ಶತಾಯ ಗತಾಯ ಪ್ರಯತ್ನ ನಡೆಸಿದ್ದಾರೆ.

26ರ ಹರೆಯದ ಸಾಗರ್ ಖಂಡ್ರೆ ಬಿ.ಎ., ಎಲ್‌ಎಲ್‌ಬಿ ಪದವೀಧರರು. ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಯಾಗಿದ್ದಾರೆ. ಕೆಲವೇ ತಿಂಗಳ ಹಿಂದೆ ಕಾಂಗ್ರೆಸ್‌ನ ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಪಕ್ಷದ ಸಂಘಟನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಈಗಷ್ಟೇ ರಾಜಕಾರಣದ ಅನುಭವ ಪಡೆಯುತ್ತಿದ್ದಾರೆ. ರಾಜಕೀಯದ ಆಳ-ಅಗಲ ಇನ್ನಷ್ಟೇ ಗೊತ್ತಾಗಬೇಕಿದೆ. ಆದರೆ, ಈಶ್ವರ ಖಂಡ್ರೆ ಅವರು ಈಗಲೇ ಮಗನನ್ನು ಚುನಾವಣೆಗೆ ನಿಲ್ಲಿಸಿ ವೇದಿಕೆ ಕಲ್ಪಿಸಲು ಮುಂದಾಗಿದ್ದಾರೆ.

ಇದಕ್ಕಾಗಿ ಇನ್ನಿಲ್ಲದ ಕಸರತ್ತು ನಡೆಸುತ್ತಿದ್ದಾರೆ. ಬೀದರ್ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ನಗರ, ಪಟ್ಟಣಗಳು ಹಾಗೂ ಪ್ರತಿಯೊಂದು ಗ್ರಾಮಗಳಲ್ಲಿ ಬೆಂಬಲಿಗರ ಮೂಲಕ ಮಗನ ದೊಡ್ಡ ದೊಡ್ಡ ಫ್ಲೆಕ್ಸ್‌ಗಳನ್ನು ಹಾಕಿಸಿದ್ದಾರೆ. ಸಾಮಾಜಿಕ ಜಾಲತಾಣಗಳು ಹಾಗೂ ತೆರೆದ ವಾಹನಗಳಲ್ಲಿ ಎಲ್‌ಇಡಿ ಪರದೆಗಳನ್ನು ಅಳವಡಿಸಿ ತಂತ್ರಜ್ಞಾನದಿಂದ ಪ್ರಚಾರ ನಡೆಸುತ್ತಿದ್ದಾರೆ. ಸಂಘ–ಸಂಸ್ಥೆಗಳ ಮೂಲಕ ಕಾರ್ಯಕ್ರಮಗಳನ್ನು ಆಯೋಜಿಸಿ ಆ ಮೂಲಕ ಮಗನ ಪರ ಪ್ರಚಾರ ಮಾಡುತ್ತಿದ್ದಾರೆ. ಮಗನಿಗೆ ಟಿಕೆಟ್ ಖಚಿತವಾಗಿರುವುದರಿಂದಲೇ ಇಷ್ಟೆಲ್ಲ ಮಾಡುತ್ತಿದ್ದಾರೆ ಎಂದು ಕ್ಷೇತ್ರದಲ್ಲಿ ಜನ ಮಾತಾಡಿಕೊಳ್ಳುತ್ತಿದ್ದಾರೆ.

> **ಬೀದರ್ ಲೋಕಸಭಾ ಕ್ಷೇತ್ರದಿಂದ ಪಕ್ಷದಿಂದ ಯಾರನ್ನು ಕಣಕ್ಕಿಳಿಸಬೇಕು ಎನ್ನುವುದು ಇದುವರೆಗೆ ಅಂತಿಮಗೊಂಡಿಲ್ಲ**
> **ಬಸವರಾಜ ಜಾಬಶೆಟ್ಟಿ,** ಕಾಂಗ್ರೆಸ್ ಜಿಲ್ಲಾಧ್ಯಕ್ಷ

ಕಾಂಗ್ರೆಸ್ ಲೆಕ್ಕಾಚಾರವೇನು?

ರಾಜ್ಯದ ಕೆಲವು ಲೋಕಸಭಾ ಕ್ಷೇತ್ರಗಳಲ್ಲಿ ಹಾಲಿ ಜಿಲ್ಲಾ ಉಸ್ತುವಾರಿ ಸಚಿವರನ್ನು ಚುನಾವಣೆಗೆ ನಿಲ್ಲಿಸಲು ಕಾಂಗ್ರೆಸ್ ಪಕ್ಷ ಯೋಜಿಸಿದೆ. ಇದರಲ್ಲಿ ಬೀದರ್ ಲೋಕಸಭಾ ಕ್ಷೇತ್ರದಿಂದ ಸಚಿವ ಈಶ್ವರ ಬಿ. ಖಂಡ್ರೆಯವರನ್ನು ಕಣಕ್ಕಿಳಿಸಲು ಯೋಚಿಸಿದೆ.

ಈಶ್ವರ ಖಂಡ್ರೆಯವರು ಲಿಂಗಾಯತ ಸಮುದಾಯಕ್ಕೆ ಸೇರಿದವರು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ. ರಾಜಕೀಯವಾಗಿ ಪ್ರಭಾವ ಹೊಂದಿದ್ದಾರೆ. ಸಂಪನ್ಮೂಲದ ದೃಷ್ಟಿಯಿಂದಲೂ ಉತ್ತಮ ಎನ್ನುವ ಉದ್ದೇಶದಿಂದ ಪಕ್ಷವು ಖಂಡ್ರೆಯವರನ್ನು ಅಭ್ಯರ್ಥಿಯಾಗಿ ಕಣಕ್ಕಿಳಿಸುವುದರ ಬಗ್ಗೆ ಗಂಭೀರವಾಗಿ ಚಿಂತನೆ ನಡೆಸಿದೆ. ಆದರೆ, 2019ರಲ್ಲಿ ನಡೆದ ಲೋಕಸಭೆ ಚುನಾವಣೆಯಲ್ಲಿ ಹಾಲಿ ಬಿಜೆಪಿಯ ಸಂಸದ ಭಗವಂತ ಖೂಬಾ ವಿರುದ್ಧ ಸ್ಪರ್ಧಿಸಿ ಈಶ್ವರ ಖಂಡ್ರೆ ಸೋಲು ಕಂಡಿದ್ದರು. ಸದ್ಯ ಖಂಡ್ರೆ ಸಂಪುಟ ದರ್ಜೆಯ ಸಚಿವರಾಗಿದ್ದು, ಒಂದುವೇಳೆ ಗೆದ್ದು ಸಂಸದರಾದರೆ ಸಚಿವ ಸ್ಥಾನ ತೊರೆಯಬೇಕಾಗುತ್ತದೆ. ಹೀಗಾಗಿ ಚುನಾವಣೆಯಲ್ಲಿ ಸ್ಪರ್ಧಿಸಲು ನಿರಾಸಕ್ತಿ ಹೊಂದಿದ್ದಾರೆ ಎಂದು ಗೊತ್ತಾಗಿದೆ. 'ನಾನಂತೂ ಬರುವ ಲೋಕಸಭೆ ಚುನಾವಣೆಗೆ ನಿಲ್ಲುವುದಿಲ್ಲ' ಎಂದು ಇತ್ತೀಚೆಗೆ ಖಂಡ್ರೆ ಸ್ಪಷ್ಟ ಮಾತುಗಳಲ್ಲಿ ಹೇಳಿದ್ದಾರೆ.

ಈಶ್ವರ ಖಂಡ್ರೆ ಲೆಕ್ಕಾಚಾರವೇನು?

ಖಂಡ್ರೆ ಪರಿವಾರ ಮೊದಲಿನಿಂದಲೂ ಬೀದರ್ ಜಿಲ್ಲೆಯಲ್ಲಿ ಪ್ರಭಾವ ಹೊಂದಿದೆ. ಹಿಂದೆ ಭೀಮಣ್ಣ ಖಂಡ್ರೆಯವರು, ಈಗ ಈಶ್ವರ ಖಂಡ್ರೆಯವರು ರಾಜಕೀಯವಾಗಿ ಪ್ರವರ್ಧಮಾನಕ್ಕೆ ಬಂದಿದ್ದಾರೆ. ಇತ್ತೀಚೆಗೆ ನಡೆದ ಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ಸಹೋದರ ಅಮರ್‌ಕುಮಾರ ಖಂಡ್ರೆ ಅವರನ್ನು ಗೆಲ್ಲಿಸಿ, ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಆ ಮೂಲಕ ಸಹಕಾರ ಕ್ಷೇತ್ರದ ಮೇಲೆ ಹಿಡಿತ ಸಾಧಿಸಿದ್ದಾರೆ. ಈಗ ಮಗ ಸಾಗರ್ ಖಂಡ್ರೆಗೆ ಕಾಂಗ್ರೆಸ್ ಪಕ್ಷದ ಟಿಕೆಟ್ ಕೊಡಿಸಿ, ಬರುವ ಚುನಾವಣೆಯಲ್ಲಿ ಅಭ್ಯರ್ಥಿಯಾಗಿಸಲು ಮುಂದಾಗಿದ್ದಾರೆ. ಈ ಮೂಲಕ ಇಡೀ ಜಿಲ್ಲೆಯ ಮೇಲೆ ಹಿಡಿತ ಸಾಧಿಸುವುದು ಅವರ ಲೆಕ್ಕಾಚಾರವಾಗಿದೆ. ತಾವು ಪ್ರಭಾವಿ ಸ್ಥಾನದಲ್ಲಿದ್ದಾಗಲೇ ಮಗನಿಗೆ ರಾಜಕೀಯ ವೇದಿಕೆ ಕಲ್ಪಿಸಿಕೊಡುವ ಉದ್ದೇಶವೂ ಇದರ ಹಿಂದಿದೆ.

ಒಂದುವೇಳೆ ಕಾಂಗ್ರೆಸ್ ಪಕ್ಷವು ತಮ್ಮನ್ನೇ ಕಣಕ್ಕಿಳಿಸಿದರೆ ಭಾಲ್ಕಿ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಮಗ ಸಾಗರ್ ಖಂಡ್ರೆಯನ್ನು ನಿಲ್ಲಿಸುವ ಯೋಜನೆ ಕೂಡ ಈಶ್ವರ ಖಂಡ್ರೆ ಹೊಂದಿದ್ದಾರೆ ಎಂದು ತಿಳಿದು ಬಂದಿದೆ.

ಡಿಸೆಂಬರ್‌ನಲ್ಲಿ ಭಾಲ್ಕಿಯಲ್ಲಿ ಏರ್ಪಡಿಸಿದ್ದ ಭೀಮಣ್ಣ ಖಂಡ್ರೆಯವರ ಜನ್ಮಶತಮಾನೋತ್ಸವ ಕಾರ್ಯಕ್ರಮದ ಮೂಲಕ ಸಾಗರ್ ಖಂಡ್ರೆಯವರನ್ನು ಪರಿಚಯಿಸುವ ಕೆಲಸ ಮಾಡಿದ್ದರು. ಅದಾದ ಬಳಿಕ ಒಂದಿಲ್ಲೊಂದು ಕಾರ್ಯಕ್ರಮಗಳ ಮೂಲಕ ಮಗನನ್ನು ರಾಜಕೀಯವಾಗಿ ಮುಂಚೂಣಿಗೆ ತರಲು ಮುಂದಾಗಿದ್ದಾರೆ.

ಪಕ್ಷದೊಳಗೆ ವಿರೋಧ: ಹೇಗಾದರೂ ಮಾಡಿ ತಮ್ಮ ಮಗನಿಗೆ ಟಿಕೆಟ್ ಕೊಡಿಸಲು ಪ್ರಯತ್ನಿಸುತ್ತಿರುವ ಈಶ್ವರ ಬಿ. ಖಂಡ್ರೆಯವರಿಗೆ ಪಕ್ಷದೊಳಗೆ ವಿರೋಧ ವ್ಯಕ್ತವಾಗಿದೆ. ಇದುವರೆಗೆ ಯಾವೊಬ್ಬ ಮುಖಂಡರು ಬಹಿರಂಗವಾಗಿ ಇದರ ವಿರುದ್ಧ ಮಾತನಾಡಿಲ್ಲ. ಆದರೆ, ಪಕ್ಷದ ವರಿಷ್ಠರನ್ನು ಭೇಟಿ ಮಾಡಿ ವಿರೋಧ ಸೂಚಿಸಿದ್ದಾರೆ ಎಂದು ಗೊತ್ತಾಗಿದೆ.

ಸದ್ಯ ಈಶ್ವರ ಖಂಡ್ರೆಯವರು ಬೀದರ್ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾರೆ. ಜೊತೆಗೆ ಅವರ ಸಹೋದರ ಅಮರ್‌ಕುಮಾರ ಖಂಡ್ರೆಯವರು ಬೀದರ್ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ (ಬಿಡಿಸಿಸಿ) ಅಧ್ಯಕ್ಷರಾಗಿದ್ದಾರೆ. ಈಗ ಸಾಗರ್ ಖಂಡ್ರೆಯವರಿಗೆ ಲೋಕಸಭಾ ಚುನಾವಣೆಯಲ್ಲಿ ಟಿಕೆಟ್ ಕೊಟ್ಟರೆ ತಪ್ಪು ಸಂದೇಶ ಹೋಗುತ್ತದೆ. ಕಾಂಗ್ರೆಸ್ ಪಕ್ಷವು 'ಕುಟುಂಬ ರಾಜಕಾರಣ' ಮಾಡುತ್ತಿದೆ ಎಂದು ಈಗಾಗಲೇ ಆರೋಪಗಳನ್ನು ಎದುರಿಸುತ್ತಿದೆ. ಇಂತಹ ಸಂದರ್ಭದಲ್ಲಿ ಸಾಗರ್ ಖಂಡ್ರೆಯವರಿಗೆ ಟಿಕೆಟ್ ಕೊಟ್ಟರೆ ಪಕ್ಷಕ್ಕೆ ದೊಡ್ಡ ನಷ್ಟ ಉಂಟಾಗುತ್ತದೆ. ಪಕ್ಷದ ನಿಷ್ಠಾವಂತರಿಗೆ ಅವಕಾಶ ಕಲ್ಪಿಸಿ ಕೊಡಬೇಕು ಎಂಬುದಾಗಿ ತಿಳಿಸಿದ್ದಾರೆ ಎಂದು ಗೊತ್ತಾಗಿದೆ.

ಸುದ್ದಿ 2 ನಿಮಿಷ

ನನ್ನ ವಿರುದ್ಧ ಬಿಜೆಪಿ–ಜೆಡಿಎಸ್ ದೊಡ್ಡ ಷಡ್ಯಂತ್ರ: ಡಿ.ಕೆ. ಶಿವಕುಮಾರ್

ರಾಮನಗರ: 'ಬಿಜೆಪಿ ಮತ್ತು ಜೆಡಿಎಸ್‌ನವರು ನನ್ನ ವಿರುದ್ಧ ದೊಡ್ಡ ಷಡ್ಯಂತ್ರ ಮಾಡುತ್ತಿದ್ದಾರೆ. ಸಿಬಿಐ, ಜಾರಿ ನಿರ್ದೇಶನಾಲಯ (ಇ.ಡಿ) ಹಾಗೂ ಬೇರೆಯವರ ಮೂಲಕ ಏನು ಮಾಡಿಸುತ್ತಿದ್ದಾರೆ ಎಂದು ಗೊತ್ತಿದೆ. ಸಮಯ ಬಂದಾಗ ಎಲ್ಲವನ್ನೂ ಹೇಳುತ್ತೇನೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನನ್ನನ್ನು ಜೈಲಿಗೆ ಕಳಿಸುತ್ತೇನೆ ಎಂದು ಹಿಂದೆ ನಮ್ಮ ಜಿಲ್ಲೆಯವರಷ್ಟೇ ಅಲ್ಲದೆ ಬೇರೆಯವರೂ ಹೇಳಿದ್ದರು. ನಾನು ಎಲ್ಲದಕ್ಕೂ ತಯಾರಿದ್ದೇನೆ. ಯಾವುದಕ್ಕೂ ಹೆದರುವವನಲ್ಲ. ನನ್ನನ್ನು ಕಟ್ಟಿ ಹಾಕಲು ಅದೇನು ಮಾಡುತ್ತಾರೋ ಮಾಡಲಿ' ಎಂದು ತಿರುಗೇಟು ನೀಡಿದರು.

'ಲೋಕಸಭಾ ಚುನಾವಣೆಯಲ್ಲಿ ಡಿ.ಕೆ. ಸಹೋದರರನ್ನು ಕಟ್ಟಿ ಹಾಕಲು ಬದ್ಧ ವೈರಿಗಳು ಮುಂದಾಗಿದ್ದಾರೆ ಎಂಬ ಮಾತುಗಳು ಕೇಳಿ ಬರುತ್ತಿವೆ. ಅವರು ಈಗಷ್ಟೇ ಅಲ್ಲ, ಹಿಂದೆಯೂ ಒಂದಾಗಿದ್ದರು. ಸುರೇಶ್ ಅವರ ಎದುರು ಹಿಂದೊಮ್ಮೆ ಒಬ್ಬರೇ ಅಭ್ಯರ್ಥಿಯನ್ನು ನಿಲ್ಲಿಸಿದ್ದರು. ಆದರೆ, ಸುರೇಶ್ ಮಾಡಿರುವ ಅಭಿವೃದ್ಧಿ ಕೆಲಸವನ್ನು ರಾಜ್ಯದ ಮತ್ತಾವ ಸಂಸದರೂ ಮಾಡಿಲ್ಲ. ಅದಕ್ಕೆ ದಾಖಲೆಗಳಿವೆ. ಸುರೇಶ್ ವಿರುದ್ಧ ಸ್ಪರ್ಧಿಸಲು ಮುಂದಾಗಿರುವವರು ತಮ್ಮ ಕೈಲಿ ಅಧಿಕಾರವಿದ್ದಾಗ ಏನು ಮಾಡಿದ್ದಾರೆ?' ಎಂದು ಪ್ರಶ್ನಿಸಿದರು.

'ನರೇಂದ್ರ ಮೋದಿ ಅವರು ಮತ್ತೆ ಪ್ರಧಾನಿಯಾಗುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ ಎನ್ನುವ ಜೆಡಿಎಸ್ ನಾಯಕರಾದ ಎಚ್.ಡಿ. ದೇವೇಗೌಡರು ಮತ್ತು ಎಚ್.ಡಿ. ಕುಮಾರಸ್ವಾಮಿ ಅವರು ಹಿಂದೆ ಮೋದಿ ವಿರುದ್ಧ ಏನು ಹೇಳಿಕೆ ನೀಡಿದ್ದರು ಎಂದು ನೆನಪಿಸಿಕೊಳ್ಳಲಿ. ಮೋದಿ ಪ್ರಧಾನಿಯಾದರೆ ದೇಶ ಬಿಟ್ಟು ಹೋಗುತ್ತೇನೆ ಎಂದು ದೇವೇಗೌಡರು ಹೇಳಿದ್ದಾಗ ನಮ್ಮ ಮನೆಯಲ್ಲಿ ಜಾಗ ಕೊಡ್ತೀನಿ ಎಂದು ಮೋದಿ ಹೇಳಿದ್ದರಲ್ಲವೆ' ಎಂದು ಕಾಲೆಳೆದರು.



ಕುಂದಾಪುರ– ಮುರ್ಡೇಶ್ವರ ರೈಲು ಸಂಚಾರ ರದ್ದು

ಹುಬ್ಬಳ್ಳಿ: ಮುರ್ಡೇಶ್ವರ– ಸೇನಾಪುರ ವಿಭಾಗ ಹಾಗೂ ಉಡುಪಿ– ನಂದಿಕೂರು ವಿಭಾಗಗಳ ನಡುವೆ ಸುರಕ್ಷತೆ ಹಾಗೂ ನಿರ್ವಹಣಾ ಕಾಮಗಾರಿ ಕೈಗೊಳ್ಳುವ ಕಾರಣ ಫೆಬ್ರುವರಿ 14ರಂದು ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು– ಮುರ್ಡೇಶ್ವರ ಡೈಲಿ ಎಕ್ಸ್‌ಪ್ರೆಸ್ ರೈಲಿನ (16585/86) ಕುಂದಾಪುರ– ಮುರ್ಡೇಶ್ವರ ನಿಲ್ದಾಣಗಳ ನಡುವಣ ಸಂಚಾರ ರದ್ದುಪಡಿಸಲಾಗಿದೆ.

ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು– ಮುರ್ಡೇಶ್ವರ ಡೈಲಿ ಎಕ್ಸ್‌ಪ್ರೆಸ್ ರೈಲಿನ (16585) ಸಂಚಾರ ಕುಂದಾಪುರದಲ್ಲಿ ಕೊನೆಗೊಳ್ಳಲಿದೆ. ಮುರ್ಡೇಶ್ವರ– ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು ಡೈಲಿ ಎಕ್ಸ್‌ಪ್ರೆಸ್ ರೈಲು (16586) ಕುಂದಾಪುರದಿಂದ ಸಂಚಾರ ಆರಂಭಿಸಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕ್ರೀಡಾಶಾಲೆ ಅವ್ಯವಸ್ಥೆ: ದೂರು ದಾಖಲು

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಳಗಾವಿ: ರಾಜ್ಯದ ಕ್ರೀಡಾಶಾಲೆಗಳು, ಕ್ರೀಡಾ ಹಾಸ್ಟೆಲ್ ಮತ್ತು ಜಿಲ್ಲಾ ಕ್ರೀಡಾಂಗಣಗಳ ಸ್ಥಿತಿಗತಿ ಕುರಿತು ಪ್ರಜಾವಾಣಿ ಫೆಬ್ರುವರಿ 11ರ ಸಂಚಿಕೆಯ ಒಳನೋಟ ಅಂಕಣದಲ್ಲಿ ಪ್ರಕಟವಾದ 'ನೆರವಿಗೆ ಕಾಯುತ್ತಿದೆ ಆಟ' ವಿಶೇಷ ವರದಿಯ ಅಂಶಗಳನ್ನು ಆಧರಿಸಿ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಆಯೋಗ ಸೋಮವಾರ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದೆ.

'ಕ್ರೀಡಾ ಹಾಸ್ಟೆಲ್ ಮತ್ತು ಕ್ರೀಡಾಂಗಣಗಳಲ್ಲಿ ಕ್ರೀಡಾಪಟುಗಳಿಗೆ ತರಬೇತಿಗೆ ಅಗತ್ಯ ಸೌಲಭ್ಯ ಕಲ್ಪಿಸಬೇಕು. ಕ್ರೀಡಾ ಸೌಲಭ್ಯ ಅಭಿವೃದ್ಧಿ ದೃಷ್ಟಿಯಿಂದ ಕೈಗೊಂಡ ಕ್ರಮಗಳ ವರದಿಯನ್ನು ಒಂದು ವಾರದೊಳಗೆ ಆಯೋಗಕ್ಕೆ ಸಲ್ಲಿಸಬೇಕು' ಎಂದು ಆಯೋಗದ ಅಧ್ಯಕ್ಷ ಕೆ.ನಾಗಣ್ಣಗೌಡ ಅವರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

ಕ್ರೀಡಾ ವಸತಿ ಶಾಲೆಗೆ ಭೇಟಿ (ಬೀದರ್ ವರದಿ): ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ ಅವರು ಸೋಮವಾರ ಸಂಜೆ ನಗರದ ನೆಹರೂ ಕ್ರೀಡಾಂಗಣದ ಕ್ರೀಡಾ ವಸತಿ ಶಾಲೆಗೆ ಭೇಟಿ ನೀಡಿ ಪರಿಶೀಲಿಸಿದರು.

'ಇಲಾಖೆಯ ಸುತ್ತೋಲೆ ಪ್ರಕಾರ, ಕ್ರೀಡಾ ವಸತಿ ಶಾಲೆಯಲ್ಲಿ ಇರಬೇಕಾದ ಸೌಲಭ್ಯಗಳು ಇಲ್ಲ. ಕನಿಷ್ಠ ಬೆಡ್, ಕಾಟ್‌ಗಳು ಇಲ್ಲ. ಡ್ರೈಫ್ರುಟ್ಸ್, ಜ್ಯೂಸ್, ಮಾಂಸ, ಮೊಟ್ಟೆ ನಿಯಮಿತವಾಗಿ ಕೊಡುತ್ತಿಲ್ಲ. ಬಯೊಮೆಟ್ರಿಕ್ ಹಾಜರಾತಿ ಇಲ್ಲ. ಶುದ್ಧ ಕುಡಿಯುವ ನೀರು ಇಲ್ಲ. ದೇವರು ಕೊಟ್ಟರೂ ಪೂಜಾರಿ ಕೊಡಲಿಲ್ಲ' ಎಂಬಂತಹ ಪರಿಸ್ಥಿತಿ ಇದೆ. ಕೂಡಲೇ ಮಕ್ಕಳಿಗೆ ಅಗತ್ಯ ಸೌಕರ್ಯ ಕಲ್ಪಿಸಿಕೊಡಲು ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಗೌತಮ್ ಅರಳಿ ಅವರಿಗೆ ಸೂಚನೆ ಕೊಟ್ಟಿದ್ದೇನೆ' ಎಂದು ಶಶಿಧರ ಕೋಸಂಬೆ 'ಪ್ರಜಾವಾಣಿ'ಗೆ ತಿಳಿಸಿದರು.

'ಕೋರ್ಟ್‌ನಲ್ಲಿ ಕಟ್ಟಡದ ವ್ಯಾಜ್ಯ ಬಗೆಹರಿಯುವವರೆಗೆ ತಾತ್ಕಾಲಿಕವಾಗಿ ಬೇರೆಡೆ ವ್ಯವಸ್ಥೆ ಮಾಡಲು ಸೂಚಿಸಿದ್ದೇನೆ. ನಾನು ವಿವಿಧ ಜಿಲ್ಲೆಗಳಲ್ಲಿನ ಕ್ರೀಡಾ ಹಾಸ್ಟೆಲ್‌ಗಳಿಗೆ ಭೇಟಿ ನೀಡಿದ್ದು, ಸೌಲಭ್ಯಗಳ ಕೊರತೆ ಇರುವುದು ಗಮನಕ್ಕೆ ಬಂದಿದೆ.' ಎಂದರು.

ಪ್ರೀತಂ ಹೇಳಿಕೆಗೆ ಎಚ್‌ಡಿಕೆ ತಿರುಗೇಟು

ಪ್ರಜಾವಾಣಿ ವಾರ್ತೆ


ಕುಮಾರಸ್ವಾಮಿ

ಹಾಸನ: 'ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡರಿಗೆ ಇನ್ನೂ ಸಣ್ಣ ವಯಸ್ಸು. ಪಾಪ ಬಿರುಸಿನಲ್ಲಿ ಮಾತಾಡುತ್ತಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

'ಲೋಕಸಭೆ ಚುನಾವಣೆಯಲ್ಲಿ ಹಾಸನ ಮತ್ತು ಮಂಡ್ಯ ಕ್ಷೇತ್ರದಲ್ಲಿ ಸ್ಪರ್ಧಿಸಲು ಬಿಜೆಪಿಗೆ ಅವಕಾಶ ನೀಡಬೇಕು' ಎಂಬ ಪ್ರೀತಂ ಹೇಳಿಕೆಗೆ ತಾಲ್ಲೂಕಿನ ಚನ್ನಂಗಿಹಳ್ಳಿಯಲ್ಲಿ ಸೋಮವಾರ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, 'ಆತನೂ ಒಬ್ಬ ನಮ್ಮ ತಮ್ಮ ಅಲ್ವೆ? ಕುಳಿತು ಸರಿ ಮಾಡೋಣ' ಎಂದರು.

'ಅವರನ್ನೇ ಕಣಕ್ಕಿಳಿಸಬೇಕೆಂದರೆ ಕಣಕ್ಕಿಳಿಸೋಣ. ಸ್ಪರ್ಧಿಸುವ ಆಸೆ ಅವರಿಗಿದ್ದರೆ ಚರ್ಚಿಸೋಣ. ನಾವು–ಅವರು ಅಣ್ಣ-ತಮ್ಮಂದಿರಂತೆ ಹೋಗಬೇಕಲ್ವಾ? ಯಾರ್‍ಯಾರೋ ಏನೇನೋ ಮಾತನಾಡುತ್ತಾರೆ. ಪಾಪ, ಅದಕ್ಕೆ ಅವರು ಪ್ರತಿಕ್ರಿಯಿಸುತ್ತಾರೆ. ಕುಳಿತು ಸರಿ ಮಾಡೋಣ, ಅದೇನೂ ಸಮಸ್ಯೆ ಅಲ್ಲ' ಎಂದು ಹೇಳಿದರು.

ಅವರ ಹೇಳಿಕೆಗೆ ನಗರದಲ್ಲಿ ತಿರುಗೇಟು ನೀಡಿದ ಪ್ರೀತಂ, 'ರಾಜಕಾರಣದಲ್ಲಿ ಅಣ್ಣ-ತಮ್ಮಂದಿರಾಗುವುದು ಸಾಧ್ಯವಿಲ್ಲ. ಸದಾ ಪಕ್ಕದಲ್ಲೇ ಕೂರಿಸಿಕೊಂಡಿರುವ ಅವರ ತಮ್ಮನೊಂದಿಗೇ ಮಾತನಾಡಿಕೊಳ್ಳಲಿ' ಎಂದರು.

'ಹಾಸನದಲ್ಲಿ ನನ್ನ ಶಕ್ತಿ ಏನೆಂದು ಅವರಿಗೆ ಅರ್ಥವಾಗಿರುತ್ತದೆ. ನನ್ನೊಂದಿಗೆ ಕುಳಿತು ಮಾತನಾಡುವ ಬದಲು, ಅವರು ಶಾಸಕರೊಂದಿಗೆ ಕುಳಿತು ಮಾತನಾಡುವುದು ಒಳ್ಳೆಯದು. ನಾನೇನು ಮಾಡಬೇಕು ಎಂಬುದನ್ನು ನಮ್ಮ ಪಕ್ಷ ತೀರ್ಮಾನಿಸುತ್ತದೆ. ಅದನ್ನು ಬೇರೆಯವರು ಹೇಳಬೇಕಿಲ್ಲ' ಎಂದು ಖಾರವಾಗಿ ನುಡಿದರು.

'ಹಿಂದಿನ ವಿಧಾನಸಭೆ ಚುನಾವಣೆಯಲ್ಲಿ ಹಾಸನ ಕ್ಷೇತ್ರದಲ್ಲಿ ಜೆಡಿಎಸ್ 84ಸಾವಿರ ಮತ ಪಡೆದಿತ್ತು. ಈಗ ಪಕ್ಷದ ಸ್ಥಿತಿ ಏನಾಗಿದೆ ಎಂಬ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುವುದು ಒಳ್ಳೆಯದು. ಆಗ ಪ್ರೀತಂನನ್ನು ಸೋಲಿಸಿ ಎಂದಿದ್ದರು. ಈಗ ತಮ್ಮ ಎನ್ನುತ್ತಿದ್ದಾರೆ. 2028ರಲ್ಲಿ ಏನು ಹೇಳುತ್ತಾರೋ ಗೊತ್ತಿಲ್ಲ' ಎಂದು ಅವರು ಲೇವಡಿ ಮಾಡಿದರು.

ಲಂಚ: ಗ್ರಾಮ ಲೆಕ್ಕಾಧಿಕಾರಿಗೆ ಜೈಲು ಶಿಕ್ಷೆ

ಪ್ರಜಾವಾಣಿ ವಾರ್ತೆ

ಕಾರವಾರ: ಜಮೀನು ವಾಂಟಣೆ ಮಾಡಿಕೊಡಲು ಲಂಚ ಪಡೆದಿದ್ದ ಗ್ರಾಮ ಲೆಕ್ಕಾಧಿಕಾರಿಯೊಬ್ಬರಿಗೆ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆಯಡಿ ಎರಡು ವರ್ಷ ಕಠಿಣ ಕಾರಾಗೃಹ ಶಿಕ್ಷೆ ಮತ್ತು ₹ 12 ಸಾವಿರ ದಂಡ ವಿಧಿಸಿ ಇಲ್ಲಿನ ಜಿಲ್ಲಾ ಸೆಷನ್ಸ್ ನ್ಯಾಯಾಲಯ ಆದೇಶಿಸಿದೆ.

ಬಸವರಾಜ ಭಜಂತ್ರಿ ಶಿಕ್ಷೆಗೆ ಒಳಗಾದ ಗ್ರಾಮ ಲೆಕ್ಕಾಧಿಕಾರಿಯಾಗಿದ್ದಾರೆ. ಕುಮಟಾ ತಾಲ್ಲೂಕಿನ ಹೆಗಡೆ ಗ್ರಾಮದಲ್ಲಿ ಕೆಲ ವರ್ಷಗಳ ಹಿಂದೆ ಕೆಲಸ ಮಾಡುವಾಗ, ಗಂಗಾ ಕೋಡಿಯಾ ಎಂಬುವರ ಜಮೀನನ್ನು ಅವರ ಮಕ್ಕಳ ಹೆಸರಿಗೆ ವರ್ಗಾಯಿಸಿ ಕೊಡಲು ₹20 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಹಣ ಪಡೆದುಕೊಳ್ಳುವ ವೇಳೆ ಲೋಕಾಯುಕ್ತ ಅಧಿಕಾರಿಗಳ ಕೈಗೆ ಸಿಕ್ಕಿ ಬಿದ್ದಿದ್ದರು.

ಜಿಲ್ಲಾ ಸೆಷನ್ಸ್ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿತ್ತು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶ ಡಿ.ಎಸ್.ವಿಜಯಕುಮಾರ ಅವರು ಶಿಕ್ಷೆ ಪ್ರಕಟಿಸಿದರು. ಲೋಕಾಯುಕ್ತ ಸಂಸ್ಥೆಯ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಲಕ್ಷ್ಮೀಕಾಂತ ಪ್ರಭು ವಾದ ಮಂಡಿಸಿದರು.

ಧರ್ಮನಿಂದನೆ ಆರೋಪ: ಶಿಕ್ಷಕಿ ವಜಾ

ಜೆರೋಸಾ ಶಾಲೆ ವಿರುದ್ಧ ವಿಎಚ್‌ಪಿ– ಬಜರಂಗದಳ ಸದಸ್ಯರ ಪ್ರತಿಭಟನೆಗೆ ಶಾಸಕದ್ವಯರ ಬೆಂಬಲ

ಪ್ರಜಾವಾಣಿ ವಾರ್ತೆ

ಮಂಗಳೂರು: ತರಗತಿಯಲ್ಲಿ ಧರ್ಮನಿಂದನೆ ಮಾಡಿದ್ದಾರೆ ಎಂದು ಆರೋಪಿಸಿ ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗ ದಳ ಸಂಘಟನೆಗಳು ಮತ್ತು ಶಾಸಕರಿಬ್ಬರ ಪ್ರತಿಭಟನೆಯ ಹಿನ್ನೆಲೆಯಲ್ಲಿ ನಗರದ ಜೆರೋಸಾ ಕಾನ್ವೆಂಟ್‌ನ ಶಿಕ್ಷಕಿ ಸಿಸ್ಟರ್ ಪ್ರಭಾ ಅವರನ್ನು ಶಾಲಾ ಆಡಳಿತ ವಜಾ ಮಾಡಿದೆ.

ಸೋಮವಾರ ಬೆಳಿಗ್ಗೆ ಸಾರ್ವಜನಿಕ ಶಿಕ್ಷಣಾಧಿಕಾರಿ ಕಚೇರಿ ಮತ್ತು ಮಧ್ಯಾಹ್ನದ ನಂತರ ಶಾಲೆಯ ಆವರಣದಲ್ಲಿ ನಡೆದ ಪ್ರತಿಭಟನೆಯ ನಂತರ ಜಿಲ್ಲಾಧಿಕಾರಿ ಮತ್ತು ನಗರ ಪೊಲೀಸ್ ಆಯುಕ್ತರ ಸಮಕ್ಷಮದಲ್ಲಿ ಶಾಲೆಯಲ್ಲಿ ಸಂಜೆ ಒಂದೂವರೆ ತಾಸು ಸಭೆ ನಡೆಯಿತು. ನಂತರ ಶಾಲೆಯ ಮುಖ್ಯ ಶಿಕ್ಷಕಿ ಸಿಸ್ಟರ್ ಅನಿತಾ ಅವರು ಪ್ರಭಾ ಅವರನ್ನು ವಜಾ ಮಾಡಿರುವ ವಿಷಯವನ್ನು ಪ್ರಕಟಿಸಿದರು.

'ಶಿಕ್ಷಕಿಯನ್ನು ಶಾಲಾ ಆಡಳಿತ ಸ್ವಯಂಪ್ರೇರಣೆಯಿಂದ ವಜಾ ಮಾಡಿದ್ದಾರೆ. ಶಾಲೆಯಲ್ಲಿ ನಡೆದಿದೆ ಎನ್ನಲಾದ ಘಟನೆಯ ಬಗ್ಗೆ ಜಿಲ್ಲಾಡಳಿತ ನಡೆಸುವ ತನಿಖೆ ಶೀಘ್ರ ಮುಗಿಯಲಿದೆ. ಶಿಕ್ಷಕಿಯನ್ನು ವಜಾ ಮಾಡುವ ನಿರ್ಧಾರವು ನಿಷ್ಪಕ್ಷಪಾತ ತನಿಖೆಗೆ ನೆರವಾಗಲಿದೆ' ಎಂದು ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ಸಭೆಯ ನಂತರ ತಿಳಿಸಿದರು.

ವಿಶ್ವ ಹಿಂದೂ ಪರಿಷತ್ ಪ್ರಾಂತ ಸಹಕಾರ್ಯವಾಹ ಶರಣ್ ಪಂಪ್‌ವೆಲ್ ಮತ್ತು ಮುಖಂಡ ಶಿವಾನಂದ ಮೆಂಡನ್ ಅವರೊಂದಿಗೆ ಸಂಘಟನೆಗಳ ಕಾರ್ಯಕರ್ತರು ಬೆಳಿಗ್ಗೆ ಸಾರ್ವಜನಿಕ ಶಿಕ್ಷಣಾಧಿಕಾರಿ ಕಚೇರಿ ಬಳಿ ಸೇರಿ ಸಿಸ್ಟರ್ ಪ್ರಭಾ ಮತ್ತು ಶಿಕ್ಷಕ ಸ್ಟೀಫನ್ ಅವರನ್ನು ವಜಾ ಮಾಡಬೇಕು ಎಂದು ಒತ್ತಾಯಿಸಿದರು. ಮಂಗಳೂರು ಉತ್ತರ ಶಾಸಕ ಡಾ. ವೈ. ಭರತ್ ಶೆಟ್ಟಿ ಮತ್ತು ದಕ್ಷಿಣ ಶಾಸಕ ವೇದವ್ಯಾಸ ಕಾಮತ್ ಅವರ ಪ್ರವೇಶವಾಗುವುದರೊಂದಿಗೆ ಪ್ರತಿಭಟನೆ ತೀವ್ರಗೊಂಡಿತು. ಮನವಿ ಸಲ್ಲಿಸಿದ ನಂತರ ಪ್ರತಿಭಟನಕಾರರು ಶಾಲೆಯತ್ತ ತೆರಳಿದರು. ಅವರಿಗೆ ವೇದವ್ಯಾಸ ಕಾಮತ್ ಜೊತೆಯಾದರು. ಗೇಟ್ ದಾಟಿ ಒಳಗೆ ಪ್ರವೇಶಿಸಲು ಪ್ರಯತ್ನಿಸಿ 'ಭಾರತ್ ಕಾ ಹರ್ ಏಕ್ ಬಚ್ಚಾ ಜೈ ಶ್ರೀರಾಮ್ ಬೋಲೇಗ' (ಭಾರತದ ಪ್ರತಿಯೊಂದು ಮಗು ಜೈಶ್ರೀರಾಮ್ ಘೋಷಣೆ ಮೊಳಗಿಸಲಿದೆ), ಭಾರತ್ ಮಾತಾ ಕಿ ಜೈ, ಜೈ ಶ್ರೀರಾಮ್ ಎಂಬ ಘೋಷಣೆ ಕೂಗಿದರು.

ಒಂದು ತಾಸು ಗೇಟಿನ ಹೊರಗೆ ಕಾದು ನಿಂತ ವೇದವ್ಯಾಸ ಕಾಮತ್, ನಂತರ ಕೆಲ ಪೋಷಕರ ಜೊತೆ ಒಳಗೆ ಹೋಗಿ ಶಾಲಾ ಆಡಳಿತದವರ ಜೊತೆ ಮಾತುಕತೆ ನಡೆಸಿದರು. ಕೆಲ ಹೊತ್ತಿನಲ್ಲಿ ಶಾಲಾ ಆಡಳಿತ ಪ್ರಕಟಣೆಯನ್ನು ಹೊರಡಿಸಿ 'ಶಿಕ್ಷಕಿ ಯಾವುದೇ ತಪ್ಪು ಮಾಡದೇ ಇದ್ದರೂ ಅವರ ಕುರಿತು ವಾಟ್ಸ್ ಆ್ಯಪ್‌ನಲ್ಲಿ ಹರಿದಾಡುತ್ತಿರುವ ಸಂದೇಶವೊಂದು ಶಾಸಕರು ಮತ್ತು ಕೆಲವು ಪೋಷಕರ ಅಸಮಾಧಾನಕ್ಕೆ ಕಾರಣವಾಗಿದೆ' ಎಂದು ಹೇಳಿದರು.

ಇದರಿಂದ ಶಾಸಕರು ಕುಪಿತರಾದರು. ಪ್ರತಿಭಟನೆ ತೀವ್ರಗೊಂಡಿತು. ಶಾಲೆ ಬಿಟ್ಟ ನಂತರ ವಿದ್ಯಾರ್ಥಿಗಳು ಕೂಡ ಪ್ರತಿಭಟನಕಾರರ ಜೊತೆ ಸೇರಿ ಜೈ ಶ್ರೀರಾಮ್ ಘೋಷಣೆ ಕೂಗಿದರು. ಈ ಸಂದರ್ಭದಲ್ಲಿ ಅಲ್ಲಿಗೆ ಬಂದ ಜಿಲ್ಲಾಧಿಕಾರಿ, ಶಾಸಕರನ್ನು ಸಮಾಧಾನಪಡಿಸಿ ವಾಪಸ್ ಕಳುಹಿಸಿದರು. ನಂತರ ಸುದೀರ್ಘ ಮಾತುಕತೆ ನಡೆಯಿತು.

ವಿಚಾರಗೋಷ್ಠಿಯಲ್ಲಿ ಅವಹೇಳನ– ಆರೋಪ: ಶಾಲೆಯಲ್ಲಿ ನಡೆದ 'ವರ್ಕ್ ಈಸ್ ವರ್ಷಿಪ್' ವಿಷಯದ ಕುರಿತ ವಿಚಾರಗೋಷ್ಠಿಯಲ್ಲಿ ಹಿಂದೂ ದೇವರನ್ನು ಅವಹೇಳನ ಮಾಡಿರುವುದಾಗಿ ಮಕ್ಕಳು ಪೋಷಕರ ಬಳಿ ದೂರಿದ್ದಾರೆ ಎಂದು ಪ್ರತಿಭಟನಕಾರರು ಆರೋಪಿಸಿದರು. ಶಿಕ್ಷಕ ಸ್ಟೀಫನ್ ಅವರು ಈ ಭಾಗದ ದೈವ ಕೊರಗಜ್ಜ ಬಗ್ಗೆ ನಿಂದನಾತ್ಮಕ ಮಾತುಗಳನ್ನಾಡಿದ್ದಾರೆ ಎಂದು ದೂರಿದ ಅವರು ಸ್ಟೀಫನ್ ಮೇಲೆಯೂ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಸಿಸ್ಟರ್ ಪ್ರಭಾ ಅವರ ಮೇಲಷ್ಟೇ ಕ್ರಮ ಕೈಗೊಂಡ ವಿಷಯ ಪ್ರಕಟಿಸಿದ ನಂತರವೂ ಶಾಲೆಯ ಗೇಟಿನ ಬಳಿ ಸೇರಿದ ಕೆಲವರು ಸ್ಟೀಫನ್ ಅವರನ್ನು ಸುಮ್ಮನೇ ಬಿಟ್ಟ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.


ಮಂಗಳೂರಿನ ಜೆರೋಸಾ ಶಾಲೆಯ ಮುಖ್ಯ ಶಿಕ್ಷಕಿ ಸಿಸ್ಟರ್ ಅನಿತಾ ಅವರ ಜೊತೆ ಶಾಸಕ ವೇದವ್ಯಾಸ ಕಾಮತ್ ವಾಗ್ವಾದ ನಡೆಸಿದರು –ಪ್ರಜಾವಾಣಿ ಚಿತ್ರ

> **ಧರ್ಮನಿಂದನೆ ಸಹಿಸಲಾಗದು. ಯೇಸು ಬಗ್ಗೆ ಕೆಟ್ಟದಾಗಿ ಮಾತನಾಡಿದರೆ ಅವರಿಗೆ ಹೇಗೆ ನೋವಾಗುತ್ತದೆಯೋ, ಶ್ರೀರಾಮನ ಬಗ್ಗೆ ಮಾತನಾಡಿದರೆ ನಮಗೂ ಬೇಸರವಾಗುತ್ತದೆ**
> **ವೇದವ್ಯಾಸ ಕಾಮತ್** ಮಂಗಳೂರು ದಕ್ಷಿಣ ಶಾಸಕ

> **ಸೇಂಟ್ ಜೆರೋಸಾ ಶಾಲೆಯಲ್ಲಿ ಇಂಥ ಕಹಿ ಘಟನೆ ಇದೇ ಮೊದಲು. ಒಳ್ಳೆಯ ಮನೋಭಾವದಿಂದ ನಡೆಯುತ್ತಿರುವ ಶಾಲೆಯು ತನಿಖೆಗೆ ಬೆಂಬಲ ನೀಡಲಿದೆ**
> **ಸಿಸ್ಟರ್ ಅನಿತಾ** ಸೇಂಟ್ ಜೊರೊಸಾ ಶಾಲೆಯ ಮುಖ್ಯ ಶಿಕ್ಷಕಿ

ಸಿಸ್ಟರ್ ಪ್ರಭಾ ಆಸ್ಪತ್ರೆಗೆ ದಾಖಲು?

ಧರ್ಮ ನಿಂದನೆ ಆರೋಪ ಹೊತ್ತಿರುವ ಸಿಸ್ಟರ್ ಪ್ರಭಾ ಅವರು ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಶಾಲೆಯ ಮೂಲಗಳು ತಿಳಿಸಿವೆ. ಆರೋಪದ ನಂತರ ನಡೆದ ಪ್ರತಿಭಟನೆ ಹಾಗೂ ಇತರ ಬೆಳವಣಿಗೆಗಳಿಂದಾಗಿ ಪ್ರಭಾ ಅವರು ಒತ್ತಡಕ್ಕೆ ಒಳಗಾಗಿದ್ದು ಅಸ್ವಸ್ಥರಾದ ಕಾರಣ ಕುಟುಂಬದವರು ಆಸ್ಪತ್ರೆಗೆ ದಾಖಲಿಸಿದ್ದಾರೆ ಎಂದು ಮೂಲಗಳು ಹೇಳಿವೆ. ಸಭೆಯ ನಂತರ ಸಂಜೆ ಪತ್ರಕರ್ತರ ಜೊತೆ ಮಾತನಾಡಿದ ಮುಖ್ಯ ಶಿಕ್ಷಕಿ ಸಿಸ್ಟರ್ ಅನಿತಾ ಅವರು ಪ್ರಭಾ ಬದಲಿಗೆ ಮತ್ತೊಬ್ಬರನ್ನು ನೇಮಕ ಮಾಡಲಾಗುವುದು ಎಂದು ತಿಳಿಸಿದರು.

ಬಾವಿ ತೋಡಲು ಮಹಿಳೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಶಿರಸಿ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ಹುತ್ಗಾರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗಣೇಶನಗರದ ಅಂಗನವಾಡಿ ಕೇಂದ್ರ 6ರ ಹಿಂಭಾಗದಲ್ಲಿ ಗೌರಿ ನಾಯ್ಕ ತೋಡುತ್ತಿದ್ದ ಬಾವಿಗೆ ಎದುರಾದ 'ಇಲಾಖೆಗಳ ಅನುಮತಿ ತೊಡಕು' ತಾತ್ಕಾಲಿಕವಾಗಿ ನಿವಾರಣೆಯಾಗಿದೆ.

ಸೋಮವಾರ ಅಂಗನವಾಡಿ ಕೇಂದ್ರಕ್ಕೆ ಬಂದ ಸಾರ್ವಜನಿಕರು ಬಾವಿ ತೋಡಲು ನಿರಾಕರಿಸುತ್ತಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಅನುಮತಿ ನೀಡುವಂತೆ ಆಗ್ರಹಿಸಿದರು.

ಜನರ ಒತ್ತಾಯಕ್ಕೆ ಮಣಿದು ಸ್ಥಳಕ್ಕೆ ಬಂದ ಕಂದಾಯ ಇಲಾಖೆಯ ಡಿ.ಆರ್.ಬೆಳ್ಳಿಮನೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವೀಣಾ ಶಿರ್ಸಿಕರ್, ಶಿಕ್ಷಣ ಇಲಾಖೆಯ ಪಿ.ಬಸವರಾಜ ಹಾಗೂ ತಾಲ್ಲೂಕು ಪಂಚಾಯಿತಿ ಅಧಿಕಾರಿ ಸತೀಶ ಹೆಗಡೆ ಸುದೀರ್ಘ ಚರ್ಚೆ ನಡೆಸಿದರು. ಸೂಕ್ತ ಸುರಕ್ಷತಾ ವ್ಯವಸ್ಥೆ ಕಲ್ಪಿಸಿಕೊಂಡು ಬಾವಿ ತೋಡಲು ಮೌಖಿಕ ಅನುಮತಿ ನೀಡಿದರು.

ಇದೇ ವೇಳೆ ಜೀವಜಲ ಕಾರ್ಯಪಡೆ ಅಧ್ಯಕ್ಷ ಶ್ರೀನಿವಾಸ ಹೆಬ್ಬಾರ್ ಅವರು, ಅಂಗನವಾಡಿ ಕೇಂದ್ರಕ್ಕೆ ಕಾಂಪೌಂಡ್, ಬಾವಿಗೆ ರಿಂಗ್, ಕಟ್ಟೆ, ಪಂಪ್ ಸೆಟ್ ಹಾಗೂ ಓವರ್ ಹೆಡ್ ಟ್ಯಾಂಕ್ ನಿರ್ಮಿಸಿ ಕೊಡುವ ಭರವಸೆ ನೀಡಿದರು. ಸಾಮಾಜಿಕ ಹೋರಾಟಗಾರ ಅನಂತಮೂರ್ತಿ ಹೆಗಡೆ, ಗ್ರಾಮ ಪಂಚಾಯಿತಿ ಅಧ್ಯಕ್ಷ ಶ್ರೀಧರ ನಾಯ್ಕ, ಉಪಾಧ್ಯಕ್ಷೆ ಶೋಭಾ ನಾಯ್ಕ ಇತರರಿದ್ದರು.

ಅಹೋರಾತ್ರಿ ಶಾಸಕಿ ಧರಣಿ

ಪ್ರಜಾವಾಣಿ ವಾರ್ತೆ

ರಾಯಚೂರು: ದೇವದುರ್ಗದಲ್ಲಿ ಮರಳು ಅಕ್ರಮ ಸಾಗಣೆ ಟ್ರ್ಯಾಕ್ಟರ್ ತಡೆದ ಕಾರಣಕ್ಕೆ ಪೊಲೀಸ್ ಕಾನ್‌ಸ್ಟೆಬಲ್ ಮೇಲೆ ಹಲ್ಲೆ ನಡೆಸಿದ ಪ್ರಕರಣ ರಾಜಕೀಯ ಸ್ವರೂಪ ಪಡೆದಿದೆ. ಶಾಸಕಿ ಪುತ್ರ ಹಾಗೂ ಆಪ್ತ ಸಹಾಯಕ ಸೇರಿ ಎಂಟು ಜನರ ವಿರುದ್ಧ ಪೊಲೀಸರು ಸ್ವಯಂ ಪ್ರೇರಣೆಯಿಂದ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಇನ್ನೊಂದೆಡೆ ಶಾಸಕಿ ಕರೆಮ್ಮ ಅವರು ಮೂವರು ಪೊಲೀಸರ ವಿರುದ್ಧ ದೂರು ದಾಖಲಿಸಿದ್ದಾರೆ.

'ನನ್ನ ಪುತ್ರ ಹಾಗೂ ಆಪ್ತ ಸಹಾಯಕನ ವಿರುದ್ಧ ದಾಖಲಿಸಿರುವ ಪ್ರಕರಣ ಹಿಂದಕ್ಕೆ ಪಡೆಯಬೇಕು. ಜಾತಿನಿಂದನೆ ಆರೋಪ ಮಾಡಿರುವ ಮೂವರು ಪೊಲೀಸರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು' ಎಂದು ಒತ್ತಾಯಿಸಿ ಶಾಸಕಿ ಕರೆಮ್ಮ ಅವರು ಜೆಡಿಎಸ್ ಕಾರ್ಯಕರ್ತರೊಂದಿಗೆ ದೇವದುರ್ಗ ಪೊಲೀಸ್ ಠಾಣೆ ಆವರಣದಲ್ಲಿ ಭಾನುವಾರ ಅಹೋರಾತ್ರಿ ಧರಣಿ ನಡೆಸಿದರು.

'ನನ್ನ ರಾಜಕೀಯ ತೇಜೋವಧೆಗೆ ವಿರೋಧಿಗಳೊಂದಿಗೆ ಸೇರಿಕೊಂಡು ಪೊಲೀಸರು ಷಡ್ಯಂತ್ರ ನಡೆಸಿದ್ದಾರೆ. ಪೊಲೀಸರ ಕಾರ್ಯವೈಖರಿಯನ್ನು ಸದನದಲ್ಲಿ ಪ್ರಸ್ತಾಪಿಸುವೆ' ಎಂದರು.

ಪೊಲೀಸ್ ಇನ್‌ಸ್ಪೆಕ್ಟರ್ ಅಶೋಕ ಸದಲಗಿ ಹಾಗೂ ಐವರು ಪೊಲೀಸ್ ಕಾನ್‌ಸ್ಟೆಬಲ್‌ಗಳ ವಿರುದ್ಧ ಪ್ರಕರಣ ದಾಖಲಿಸುವಂತೆ ಒತ್ತಾಯಿಸಿದರು. ಪೊಲೀಸರು ಒಪ್ಪದಿದ್ದಾಗ ರಾತ್ರಿಯಿಡೀ ಧರಣಿ ನಡೆಸಿದರು. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಿವಕುಮಾರ ದಂಡಿನ್ ಮಧ್ಯರಾತ್ರಿ ಬಂದು ಮನವಿ ಮಾಡಿದರೂ ಧರಣಿ ನಿಲ್ಲಿಸಲಿಲ್ಲ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ಬೆಳಗಿನ ಜಾವ ಸ್ಥಳಕ್ಕೆ ಭೇಟಿ ನೀಡಿ ಶಾಸಕರ ಮನವಿ ಆಲಿಸಿ ಪೊಲೀಸ್ ಕಾನ್‌ಸ್ಟೆಬಲ್‌ಗಳ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲು ಪೊಲೀಸ್ ಅಧಿಕಾರಿಗೆ ಸೂಚಿಸಿದರು. ನಂತರ ಶಾಸಕಿ ಧರಣಿ ಅಂತ್ಯಗೊಳಿಸಿದರು. ದೇವದುರ್ಗ ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್‌ಗಳಾದ ಹನುಮಂತರಾಯ, ಹನುಮೇಶ ಹಾಗೂ ಮಹೇಶ ವಿರುದ್ಧ ಪ್ರಕರಣ ದಾಖಲಾಗಿದೆ.


ರಾಯಚೂರು ಜಿಲ್ಲೆಯ ದೇವದುರ್ಗ ಪೊಲೀಸ್ ಠಾಣೆ ಆವರಣದಲ್ಲಿ ಶಾಸಕಿ ಕರೆಮ್ಮ ನಾಯಕ ಅವರು ಜೆಡಿಎಸ್ ಕಾರ್ಯಕರ್ತರೊಂದಿಗೆ ಭಾನುವಾರ ರಾತ್ರಿ ಧರಣಿ ನಡೆಸಿದರು

ಬೇಸಿಗೆಗೂ ಮುನ್ನವೇ ತಾಪಮಾನ ಹೆಚ್ಚಳ: ಹವಾಮಾನ ಇಲಾಖೆ

ಅತಿಯಾದ ಬಿಸಿಲಿಗೆ ಹೈರಾಣಾದ ಜನರು

• ಶಿವರಾಯ ಪೂಜಾರಿ

ಹುಬ್ಬಳ್ಳಿ: ಪ್ರಸಕ್ತ ವರ್ಷ ಬೇಸಿಗೆಗೂ ಮುನ್ನ ಫೆಬ್ರುವರಿಯಲ್ಲೇ ಬಿಸಿಲು ಹೆಚ್ಚಾಗಿದ್ದು, ಅತಿ ತಾಪಮಾನವು ಜನರನ್ನು ಹೈರಾಣಾಗಿಸಿದೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿಗಾ ಕೇಂದ್ರದ ಪ್ರಕಾರ, ಕಳೆದ 24 ಗಂಟೆಗಳಲ್ಲಿ ರಾಜ್ಯದಲ್ಲೇ ಅತಿ ಹೆಚ್ಚು 36.5 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಹಾವೇರಿಯಲ್ಲಿ ದಾಖಲಾಗಿದೆ. ಕೋಲಾರದಲ್ಲಿ ಅತಿ ಕಡಿಮೆ 30.7 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ.

ಬೆಂಗಳೂರಿನಲ್ಲಿ 31.3 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ಫೆಬ್ರುವರಿ 9ರಂದು 34.8 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶವಿತ್ತು. ಈ ನಗರದ ಮಟ್ಟಿಗೆ ಈವರೆಗೆ ಫೆಬ್ರುವರಿಯಲ್ಲಿ ದಾಖಲಾದ 2ನೇ ಅತಿ ಹೆಚ್ಚು ಉಷ್ಣಾಂಶವಾಗಿದೆ (2005ರ ಫೆಬ್ರುವರಿ 7ರಂದು 35.9 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ವರದಿಯಾಗಿತ್ತು). ಬೆಂಗಳೂರಿನಲ್ಲಿ ಕಳೆದ ವರ್ಷಕ್ಕಿಂತ ಈ ಬಾರಿ 1.5 ಡಿಗ್ರಿ ಸೆಲ್ಸಿಯಸ್ ಸರಾಸರಿ ಉಷ್ಣಾಂಶ ಹೆಚ್ಚಾಗಿದೆ.

23 ಜಿಲ್ಲೆಗಳಲ್ಲಿ ಆರ್ದ್ರತೆ (ಗಾಳಿಯಲ್ಲಿರುವ ಆವಿ) ಪ್ರಮಾಣ ಶೇ 90ಕ್ಕಿಂತ ಹೆಚ್ಚಿದೆ.

ಕಳೆದ ವರ್ಷ ಫೆಬ್ರುವರಿಯಲ್ಲಿ ರಾಜ್ಯದಲ್ಲಿ ಬಿಸಿಲಿನ ತಾಪಮಾನದ ಪ್ರಮಾಣ 38 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿತ್ತು. 2023ರ ಫೆಬ್ರುವರಿಯಲ್ಲಿ ಕಾರವಾರದಲ್ಲಿ 38.8 ಡಿಗ್ರಿ ಸೆಲ್ಸಿಯಸ್, 2022ರಲ್ಲಿ ಮಂಗಳೂರಲ್ಲಿ 37.4 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇತ್ತು.

'ನಿರ್ಮಲ ಆಕಾಶ, ಮೋಡಗಳ ಕೊರತೆಯಿಂದ ಬಿಸಿಲಿನ ಪ್ರಮಾಣ ಹೆಚ್ಚಾಗುತ್ತಿದೆ. ಮುಂದಿನ ಎರಡು ದಿನಗಳಲ್ಲಿ ಗಾಳಿಯ ಪ್ರಮಾಣ ಹೆಚ್ಚಾಗಲಿದೆ. ಉಷ್ಣಾಂಶ ಸ್ವಲ್ಪ ಕಡಿಮೆ ಇರಲಿದ್ದು, ಒಣಹವೆ ಮುಂದುವರಿಯಲಿದೆ. ಮಾರ್ಚ್, ಏಪ್ರಿಲ್ ವೇಳೆಗೆ ಬಿಸಿಲಿನ ಪ್ರಮಾಣ ಮತ್ತಷ್ಟು ಹೆಚ್ಚಳ ಆಗಲಿದೆ. ಬೆಳಿಗ್ಗೆ 11 ರಿಂದ ಸಂಜೆ 4ರವರೆಗೂ ಅತಿ ಬಿಸಿಲು ಇರಲಿದ್ದು, ಈ ಸಮಯದಲ್ಲಿ ಜನರು ಹೊರಗೆ ಓಡಾಡುವುದನ್ನು ಕಡಿಮೆ ಮಾಡಬೇಕು' ಎಂದು ಬೆಂಗಳೂರಿನ ಭಾರತೀಯ ಹವಾಮಾನ ಇಲಾಖೆಯ ವಿಜ್ಞಾನಿ ಎ.ಪ್ರಸಾದ 'ಪ್ರಜಾವಾಣಿ'ಗೆ ತಿಳಿಸಿದರು.


ಬಿಸಿಲಿನಿಂದ ರಕ್ಷಣೆ ಪಡೆಯಲು ಹುಬ್ಬಳ್ಳಿಯಲ್ಲಿ ಯುವತಿಯರು ಕೊಡೆ ಹಿಡಿದು ಸಾಗಿದರು –ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ಕಳೆದ 24 ಗಂಟೆಗಳಲ್ಲಿ ದಾಖಲಾದ ಗರಿಷ್ಠ ಉಷ್ಣಾಂಶ

ಜಿಲ್ಲೆ	ಡಿಗ್ರಿ ಸೆಲ್ಸಿಯಸ್	ಜಿಲ್ಲೆ	ಡಿಗ್ರಿ ಸೆಲ್ಸಿಯಸ್
ದಾವಣಗೆರೆ	36.2	ಬೆಳಗಾವಿ	35.6
ದಕ್ಷಿಣ ಕನ್ನಡ	36.2	ಗದಗ	35.6
ಉಡುಪಿ	36.1	ಧಾರವಾಡ	35.6
ರಾಯಚೂರು	35.9	ಕಲಬುರಗಿ	35.4
ವಿಜಯನಗರ	35.9	ಬಳ್ಳಾರಿ	35.2
ವಿಜಯಪುರ	35.9	ಬೀದರ್	35.2
ಬಾಗಲಕೋಟೆ	35.7	ಯಾದಗಿರಿ	35.1
		ಕೊಪ್ಪಳ	35.1
		ಚಿತ್ರದುರ್ಗ	35.1

₹2,000 ಕೋಟಿ ಮೌಲ್ಯದ 45 ಎಕರೆ ಆಸ್ತಿ • ವ್ಯಾಜ್ಯದಲ್ಲಿರುವ ಜಮೀನಿಗೆ ನಕ್ಷೆ ಮಂಜೂರಾತಿಗೆ ಅರ್ಜಿ

ಒಕ್ಕಲಿಗರ ಸಂಘದ ಜಮೀನು ಕೈತಪ್ಪುವ ಭೀತಿ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ರಾಜ್ಯ ಒಕ್ಕಲಿಗರ ಸಂಘದ ಅಧೀನದಲ್ಲಿರುವ ಕೃಷ್ಣಪ್ಪ ರಂಗಮ್ಮ ಶಿಕ್ಷಣ (ಕೆಆರ್‌ಇ) ಟ್ರಸ್ಟ್‌ ನಗರದ ಸಜ್ಜೆಪಾಳ್ಯದಲ್ಲಿ ಹೊಂದಿರುವ ₹2,000 ಕೋಟಿಗೂ ಹೆಚ್ಚು ಮೌಲ್ಯದ ಜಮೀನಿಗೆ ಸಂಬಂಧಿಸಿದ ಕಾನೂನು ವ್ಯಾಜ್ಯಗಳು ಬಾಕಿ ಇರುವಾಗಲೇ ಆ ಸ್ವತ್ತನ್ನು ರಿಯಲ್‌ ಎಸ್ಟೇಟ್‌ ಉದ್ದೇಶಕ್ಕೆ ಬಳಸಲು ನಕ್ಷೆ ಅನುಮೋದನೆ ಕೋರಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ಅರ್ಜಿ ಸಲ್ಲಿಸಲಾಗಿದೆ.

ಸಜ್ಜೆಪಾಳ್ಯದ ಗ್ರಾಮದಲ್ಲಿರುವ 45 ಎಕರೆ 33 ಗುಂಟೆ ಜಮೀನಿನ ಒಡೆತನಕ್ಕೆ ಸಂಬಂಧಿಸಿದ ವ್ಯಾಜ್ಯಗಳು ನ್ಯಾಯಾಲಯಗಳಲ್ಲಿ ಬಾಕಿ ಇವೆ. ವ್ಯಾಜ್ಯ ಇತ್ಯರ್ಥವಾಗದಿದ್ದರೂ ಕೆಲ ವ್ಯಕ್ತಿಗಳ ಹೆಸರಿನಲ್ಲಿ ಬಡಾವಣೆ ನಿರ್ಮಾಣಕ್ಕೆ ನಕ್ಷೆ ಅನುಮೋದನೆ ಕೋರಿ ಸಲ್ಲಿಸಿರುವ ಅರ್ಜಿಗಳನ್ನು ಮಾನ್ಯ ಮಾಡದಂತೆ ಕೆಆರ್‌ಇ ಟ್ರಸ್ಟ್‌, ಬಿಡಿಎ ಆಯುಕ್ತರಿಗೆ ತಕರಾರು ಸಲ್ಲಿಸಿದೆ. ಭೂಕಬಳಿಕೆ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿ ವಿಧಾನಸಭೆಯ ಅರ್ಜಿ ಸಮಿತಿಗೂ ದೂರಿತ್ತಿದೆ.

ತಮ್ಮ ಕುಟುಂಬದ ಹೆಸರಿನಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ಒಳಗೊಂಡ ದತ್ತಿ ಸ್ಥಾಪಿಸಲು ರಂಗಮ್ಮ ಅವರು ಉಯಿಲಿನ ಮೂಲಕ ದಾನವಾಗಿ ನೀಡಿದ್ದ ಜಮೀನನ್ನು ಕೆಆರ್‌ಇ ಟ್ರಸ್ಟ್‌ ಸುಪರ್ದಿಗೆ ವಹಿಸಲಾಗಿತ್ತು. ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಸಜ್ಜೆಪಾಳ್ಯ ಗ್ರಾಮದ ಸರ್ವೆ ನಂಬರ್‌ 15ರಲ್ಲಿ ಟ್ರಸ್ಟ್‌ ಸ್ವಾಧೀನದಲ್ಲಿರುವ ಜಮೀನಿಗೆ ನಕ್ಷೆ ಅನುಮೋದನೆ ಕೋರಿ ರಂಗಮ್ಮ ಅವರ ಉಯಿಲು ನಿರ್ವಾಹಕರ ಕುಟುಂಬದ ಸದಸ್ಯ ಬಿ.ಪಿ. ಮಹೇಂದ್ರ ಮತ್ತು ರಿಯಲ್‌ ಎಸ್ಟೇಟ್‌ ಉದ್ಯಮಿಯೂ ಆಗಿರುವ ಜೆಡಿಎಸ್‌ ಮುಖಂಡ ಟಿ.ಎನ್‌. ಜವರಾಯಿಗೌಡ ಅರ್ಜಿ ಸಲ್ಲಿಸಿದ್ದಾರೆ.

ದೂರಿನಲ್ಲಿ ಏನಿದೆ?: 'ರಂಗಮ್ಮ ಎಂಬುವವರು ಸಜ್ಜೆಪಾಳ್ಯದ ಸರ್ವೆ ನಂಬರ್‌ 8, 9, 10, 13, 14 ಮತ್ತು 15 ಹಾಗೂ ಮಾಳಗಾಳ ಗ್ರಾಮದ ಸರ್ವೆ ನಂಬರ್‌ 43 ಮತ್ತು 44ರಲ್ಲಿ ಒಟ್ಟು 96 ಎಕರೆ 35 ಗುಂಟೆ ಜಮೀನು ಹೊಂದಿದ್ದರು. ಸದರಿ ಜಮೀನನ್ನು ತಮ್ಮ ಕುಟುಂಬದ ಹೆಸರಿನಲ್ಲಿ ಸಾರ್ವಜನಿಕ ದತ್ತಿ ಉದ್ದೇಶಕ್ಕೆ ಬಳಕೆ ಮಾಡುವಂತೆ ರಂಗಮ್ಮ ಅವರು 1962ರ ಮಾರ್ಚ್‌ 19ರಂದು ಉಯಿಲು ಬರೆದಿದ್ದರು.

'ಉಯಿಲಿನ ನಿರ್ವಾಹಕರನ್ನಾಗಿ ಸೋದರಳಿಯ ಬಿ.ಎಂ. ಪುಟ್ಟಸ್ವಾಮಿ ಎಂಬವರನ್ನು ನೇಮಿಸಿದ್ದರು. ಅವರಿಗೆ ಜಮೀನನ್ನು ವಿಲೇವಾರಿ ಮಾಡಿ ಟ್ರಸ್ಟ್‌ಗೆ ವರಮಾನ ವರ್ಗಾಯಿಸುವ ಜವಾಬ್ದಾರಿಯನ್ನಷ್ಟೇ ನೀಡಲಾಗಿತ್ತು. ಉಳಿದಂತೆ ಆಸ್ತಿಯ ಮೇಲೆ ಯಾವುದೇ ಹಕ್ಕನ್ನೂ ನೀಡಿರಲಿಲ್ಲ.

'ರಂಗಮ್ಮ 1966ರಲ್ಲಿ ನಿಧನರಾದರು. ಆ ಬಳಿಕ ಕೆಆರ್‌ಇ ಟ್ರಸ್ಟ್‌ ರಚಿಸಿದ್ದ ಪುಟ್ಟಸ್ವಾಮಿ, 96 ಎಕರೆ 35 ಗುಂಟೆ ಜಮೀನನ್ನು ಟ್ರಸ್ಟ್‌ ಸ್ವಾಧೀನಕ್ಕೆ ನೀಡಿದ್ದರು. ರಾಜ್ಯ ಒಕ್ಕಲಿಗರ ಸಂಘದ ಮೂಲಕವೇ ಟ್ರಸ್ಟ್‌ ಕಾರ್ಯನಿರ್ವಹಿಸಬೇಕು ಮತ್ತು ಶೈಕ್ಷಣಿಕ ಉದ್ದೇಶಕ್ಕಾಗಿ ಟ್ರಸ್ಟ್‌ ಕೆಲಸ ಮಾಡಬೇಕು ಎಂದು ನೋಂದಣಿ ದಾಖಲೆಗಳಲ್ಲಿ ಹೇಳಲಾಗಿತ್ತು.

'ಭೂಸುಧಾರಣಾ ಕಾಯ್ದೆ ಜಾರಿಯಾದ ಬಳಿಕ ಹಲವರು ಸದರಿ ಜಮೀನಿನ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿದ್ದರು. ಭೂ ಸುಧಾರಣೆ ಕಾಯ್ದೆಯಡಿ ಮಂಜೂರಾತಿ ಮತ್ತು ಸರ್ಕಾರದ ಭೂಸ್ವಾಧೀನ ಪ್ರಕ್ರಿಯೆಯಿಂದ 51 ಎಕರೆಯಷ್ಟು ಜಮೀನು ಟ್ರಸ್ಟ್‌ನ ಕೈಬಿಟ್ಟು ಹೋಗಿತ್ತು. ಉಳಿದ 45 ಎಕರೆ 33 ಗುಂಟೆ ಜಮೀನು ತಮಗೆ ಸೇರಬೇಕು ಎಂದು ಪುಟ್ಟಸ್ವಾಮಿ ಅವರ ಮಗ ಬಿ.ಪಿ. ಮಹೇಂದ್ರ ಅರ್ಜಿ ಸಲ್ಲಿಸಿದ್ದರು. ಅವರ ಹೆಸರಿಗೆ ಖಾತೆ ವರ್ಗಾಯಿಸುವ ಪ್ರಯತ್ನವೂ ನಡೆದಿತ್ತು.

'ಈ ಕುರಿತ ವ್ಯಾಜ್ಯದ ವಿಚಾರಣೆ ನಡೆಸಿದ್ದ ಹೈಕೋರ್ಟ್‌, ಜಮೀನಿನ ಮಾಲೀಕತ್ವ ಯಾರಿಗೆ ಸೇರಬೇಕು ಎಂಬುದನ್ನು ಸಿವಿಲ್‌ ನ್ಯಾಯಾಲಯವು ವಿಚಾರಣೆ ನಡೆಸಿ ನಿರ್ಧರಿಸಬೇಕು. ಅಲ್ಲಿಯವರೆಗೂ ರಂಗಮ್ಮ ಹೆಸರಿನಲ್ಲೇ ಖಾತೆ ಮುಂದುವರಿಸಬೇಕು ಎಂಬುದಾಗಿ ತೀರ್ಪು ನೀಡಿತ್ತು. ಸುಪ್ರೀಂ ಕೋರ್ಟ್‌ ಕೂಡ ಅದನ್ನು ಎತ್ತಿ ಹಿಡಿದಿತ್ತು. ಸಿಟಿ ಸಿವಿಲ್‌ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದ್ದರೂ ಮಹೇಂದ್ರ ಮತ್ತು ಜವರಾಯಿಗೌಡ ಜತೆಗೂಡಿ ನಕ್ಷೆ ಅನುಮೋದನೆಗೆ ಅರ್ಜಿ ಸಲ್ಲಿಸಿದ್ದಾರೆ' ಎಂದು ಟ್ರಸ್ಟ್‌ ಪದಾಧಿಕಾರಿಗಳು ಅರ್ಜಿ ಸಮಿತಿಗೆ ಸಲ್ಲಿಸಿರುವ ದೂರಿನಲ್ಲಿ ಆರೋಪಿಸಿದ್ದಾರೆ.

ಸರ್ಕಾರದ ಕೆಲವು ಅಧಿಕಾರಿಗಳು ಹಾಗೂ ಪ್ರಭಾವಿ ವ್ಯಕ್ತಿಗಳೊಂದಿಗೆ ಶಾಮೀಲಾಗಿ ಮಹೇಂದ್ರ ಮತ್ತು ಇತರರು ಟ್ರಸ್ಟ್‌ ಜಮೀನನ್ನು ಕಬಳಿಸಲು ಯತ್ನಿಸುತ್ತಿದ್ದಾರೆ. ನಕ್ಷೆ ಮಂಜೂರಾತಿ ಮಾಡದಂತೆ ಬಿಡಿಎಗೆ ನಿರ್ದೇಶನ ನೀಡಬೇಕು ಎಂದು ಅರ್ಜಿಯಲ್ಲಿ ಮನವಿ ಮಾಡಿದ್ದಾರೆ.

'ಟ್ರಸ್ಟ್‌ ಆಸ್ತಿಯೇ ಅಲ್ಲ'

'ಸಜ್ಜೆಪಾಳ್ಯದ ಜಮೀನಿನ ಮೇಲೆ ಕೆಆರ್‌ಇ ಟ್ರಸ್ಟ್‌ಗೆ ಹಕ್ಕು ಇಲ್ಲ. ಆ ಜಮೀನು ಭೂ ಸುಧಾರಣಾ ಕಾಯ್ದೆ ಜಾರಿಯಾದಾಗ ಗೇಣಿದಾರರಿಗೆ ಹೋಗಿತ್ತು. ಅದನ್ನು ಬಿಡಿಎ ಸ್ವಾಧೀನಪಡಿಸಿಕೊಂಡಿತ್ತು. ಕಾನೂನಿನ ಪ್ರಕಾರ, ಆಸ್ತಿಯ ಮಾಲೀಕರು ಮತ್ತು ನಾವು ಸೇರಿ ಹಿಂಪಡೆಯುತ್ತಿದ್ದೇವೆ' ಎಂದು ಟಿ.ಎನ್‌. ಜವರಾಯಿಗೌಡ ಪ್ರತಿಕ್ರಿಯಿಸಿದರು.

'ಎಚ್‌.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದಾಗಲೇ ಜಮೀನು ಹಿಂದಿರುಗಿಸುವ ತೀರ್ಮಾನ ಆಗಿತ್ತು. ಈಗ ನಕ್ಷೆ ಅನುಮೋದನೆ ಕೋರಿದ್ದೇವೆ. ನಂತರ ಶುಲ್ಕ ಪಾವತಿಸಬೇಕಿದೆ. ಟ್ರಸ್ಟ್‌ನವರು ಕಾನೂನು ಹೋರಾಟ ನಡೆಸಲಿ. ನಮ್ಮ ತಪ್ಪಿದ್ದರೆ ಕಾನೂನಿಗೆ ತಲೆ ಬಾಗುತ್ತೇವೆ' ಎಂದರು.

ಬಿಡಿಎಗೆ ₹38.20 ಕೋಟಿ ಪಾವತಿ

ಸಜ್ಜೆಪಾಳ್ಯದ ಜಮೀನಿನ ನಕ್ಷೆ ಮಂಜೂರಾತಿ ಸಂಬಂಧ ಬಿ.ಪಿ. ಮಹೇಂದ್ರ ಮತ್ತು ಟಿ.ಎನ್‌. ಜವರಾಯಿಗೌಡ ಜಂಟಿಯಾಗಿ 2023ರ ಡಿಸೆಂಬರ್‌ 26ರಂದು ಬಿಡಿಎಗೆ ₹38.20 ಕೋಟಿ ಪಾವತಿಸಿದ್ದಾರೆ.

'ಸದರಿ ಜಮೀನು ಹಿಂದೆ ಬಿಡಿಎಗೆ ಭೂಸ್ವಾಧೀನವಾಗಿತ್ತು. ಶೇಕಡ 70:30ರ ಸೂತ್ರದಂತೆ ಜಮೀನನ್ನು ಮಾಲೀಕರಿಗೆ ಹಿಂದಿರುಗಿಸಲಾಗಿತ್ತು. ಬಿಡಿಎ ಪಾಲಿನ ಶೇ 30ರಷ್ಟು ಜಮೀನಿನ ಬಾಬ್ತು ₹38.20 ಕೋಟಿ ಕಟ್ಟಿದ್ದೇವೆ' ಎಂದು ಜವರಾಯಿಗೌಡ ತಿಳಿಸಿದರು.

'ಟ್ರಸ್ಟ್‌ ಸ್ವತ್ತು ಕಬಳಿಕೆಗೆ ಯತ್ನ'

'ಸಜ್ಜೆಪಾಳ್ಯದ 45 ಎಕರೆ 33 ಗುಂಟೆ ಆಸ್ತಿಯು ಕೆಆರ್‌ಇ ಟ್ರಸ್ಟ್‌ ಆಸ್ತಿ. ಪ್ರಭಾವಿಗಳ ಕೈವಾಡದೊಂದಿಗೆ ಅದನ್ನು ಕಬಳಿಸುವ ಪ್ರಯತ್ನ ನಡೆದಿದೆ. ಟ್ರಸ್ಟ್‌ ಆಸ್ತಿಯನ್ನು ಕಬಳಿಸಲು ಅವಕಾಶ ಕೊಡುವುದಿಲ್ಲ. ಬೃಹತ್‌ ಹೋರಾಟಕ್ಕೆ ಸಜ್ಜಾಗುತ್ತಿದ್ದೇವೆ' ಎಂದು ಕೆಆರ್‌ಇ ಟ್ರಸ್ಟ್‌ ಅಧ್ಯಕ್ಷ ಅಶೋಕ್‌ ಎಚ್‌.ಎನ್‌. 'ಪ್ರಜಾವಾಣಿ'ಗೆ ತಿಳಿಸಿದರು.



ಐಷಾರಾಮಿ ಫಾರ್ಚೂನರ್‌

ಸಭಾಧ್ಯಕ್ಷರಿಗೆ ಬಂತು ಐಷಾರಾಮಿ ಕಾರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್‌ ಅವರ ಓಡಾಟಕ್ಕೆ ಹೊಸ ಮಾದರಿಯ, ಕಪ್ಪು ಬಣ್ಣದ ಐಷಾರಾಮಿ ಫಾರ್ಚೂನರ್‌ ಕಾರು (ಕೆಎ 11 ಜಿಎ 1) ಬಂದಿದೆ. ಸಚಿವಾಲಯದಿಂದ ಈ ಕಾರು ಒದಗಿಸಲಾಗಿದ್ದು, ವಿಶೇಷ ವಿನ್ಯಾಸ ಮಾಡಿರುವುದರಿಂದ ₹41 ಲಕ್ಷ ವೆಚ್ಚ ಆಗಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

360 ಡಿಗ್ರಿ ಕ್ಯಾಮೆರಾ, ಪ್ರಯಾಣದ ಸಂದರ್ಭದಲ್ಲಿ ಮುಂದಿನ ಸೀಟಿನಲ್ಲಿ ಕುಳಿತುಕೊಳ್ಳುವವರ ಮುಖಕ್ಕೆ ಬೆಳಕು ನೀಡುವ ವಿಶೇಷ ಎಲ್‌ಇಡಿ ಲೈಟ್‌ ಸೌಲಭ್ಯವನ್ನು ಈ ಕಾರು ಹೊಂದಿದೆ. ಜಿಆರ್‌ ಕಿಟ್‌ ಅಳವಡಿಸುವ ಮೂಲಕ ಕಾರಿಗೆ ವಿಶೇಷ ವಿನ್ಯಾಸ ಕೂಡಾ ಮಾಡಲಾಗಿದೆ.

ಇನ್ನು ಕಾರು ಮುಂಭಾಗ ಹಾಗೂ ಹಿಂಭಾಗದಲ್ಲಿ ಗಂಡಭೇರುಂಡ ಲಾಂಛನ ಹೊಂದಿದೆ. ರಾಜ್ಯಪಾಲರ ಹೊರತಾಗಿ ವಿಧಾನ ಸಭಾಧ್ಯಕ್ಷರಿಗೆ ಮಾತ್ರ ಈ ಲಾಂಛನ ಅಳವಡಿಸಲು ಅವಕಾಶವಿದೆ.

ಸಿದ್ದರಾಮಯ್ಯ ಸಂಪುಟದ 33 ಸಚಿವರಿಗೆ ಕಳೆದ ಅಕ್ಟೋಬರ್‌ನಲ್ಲಿ ಇನೋವಾ ಕ್ರಿಸ್ಟಾ ಹೈಬ್ರಿಡ್‌ ಕಾರು ಖರೀದಿಸಲಾಗಿದೆ. 33 ಕಾರುಗಳನ್ನು ತಲಾ ₹30 ಲಕ್ಷ ದರದಲ್ಲಿ ಟೊಯೊಟಾ ಕಿರ್ಲೋಸ್ಕರ್‌ ಮೋಟಾರ್‌ ಪ್ರೈವೇಟ್‌ ಲಿಮಿಟೆಡ್‌ನಿಂದ ನೇರವಾಗಿ ಖರೀದಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ (ಕೆಟಿಪಿಪಿ) ಸೆಕ್ಷನ್‌ 4-ಜಿ ಅಡಿಯಲ್ಲಿ ವಿನಾಯಿತಿ ನೀಡಿ ಆರ್ಥಿಕ ಇಲಾಖೆ ಆದೇಶ ಹೊರಡಿಸಿತ್ತು.

'ರಾಜ್ಯದ 223 ತಾಲ್ಲೂಕುಗಳನ್ನು ಬರಪೀಡಿತ ಎಂದು ಸರ್ಕಾರವೇ ಘೋಷಿಸಿರುವ ಈ ಸಮಯದಲ್ಲಿ ಐಷಾರಾಮಿ ಕಾರುಗಳ ಖರೀದಿ ಅಗತ್ಯ ಇತ್ತೇ' ಎಂದು ಹಲವರು ಪ್ರಶ್ನಿಸಿದ್ದಾರೆ.

'ಕೈ' ಪಾಳಯದಲ್ಲಿ ಮುಸುಕಿನ ಸಂಘರ್ಷ

ನಿಗಮ, ಮಂಡಳಿ ನೇಮಕಾತಿ ಪಟ್ಟಿಗೆ ಸಚಿವರ ಆಕ್ಷೇಪ: ಸಿಎಂಗೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಕ್ಷದ ಕಾರ್ಯಕರ್ತರಿಗೆ ನಿಗಮ, ಮಂಡಳಿಗಳ ಅಧ್ಯಕ್ಷ ಸ್ಥಾನ ನೀಡುವ ವಿಚಾರದಲ್ಲಿ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ ಅವರ ನಿಲುವಿಗೆ ಹಲವು ಸಚಿವರು ಆಕ್ಷೇಪ ಎತ್ತಿದ್ದಾರೆ. ಇದರಿಂದಾಗಿ ಕಾಂಗ್ರೆಸ್‌ನಲ್ಲಿ ಮುಸುಕಿನ ಸಂಘರ್ಷ ಜೋರಾಗುವ ಲಕ್ಷಣ ಕಾಣಿಸುತ್ತಿದೆ.

34 ಮಂದಿ ಕಾರ್ಯಕರ್ತರಿಗೆ ಅಧಿಕಾರ ನೀಡುವ ಪಟ್ಟಿಯೊಂದಕ್ಕೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್‌ ಕೆಲವು ದಿನಗಳ ಹಿಂದೆ ಒಪ್ಪಿಗೆ ನೀಡಿದ್ದರು. ಈ ಪಟ್ಟಿ ಸಾಮಾಜಿಕ ಮಾಧ್ಯಮಗಳಲ್ಲಿ ಬಹಿರಂಗವಾಗುತ್ತಿದ್ದಂತೆ ಸಚಿವರು ತಗಾದೆ ತೆಗೆದಿದ್ದರು. ಅವರೊಂದಿಗೆ ಜಿಲ್ಲಾ ಕಾಂಗ್ರೆಸ್‌ ಸಮಿತಿಗಳ ಪ್ರಮುಖರೂ ದನಿಗೂಡಿಸಿದ್ದಾರೆ.

ವಿಧಾನ ಮಂಡಲ ಅಧಿವೇಶನದ ಮೊದಲ ದಿನವಾದ ಸೋಮವಾರ, ಆಡಳಿತ ಪಕ್ಷದ ಮೊಗಸಾಲೆಯಲ್ಲಿ ಈ ಕುರಿತು ಬಿರುಸಿನ ಚರ್ಚೆ ನಡೆಯುತ್ತಿತ್ತು. ತಮ್ಮ ಅಭಿಪ್ರಾಯ ಆಲಿಸದೇ ಶಿವಕುಮಾರ್‌ ಅವರು ಏಕಪಕ್ಷೀಯವಾಗಿ ಪಟ್ಟಿ ಸಿದ್ಧಪಡಿಸಿದ್ದಾರೆ ಎಂಬ ಅಸಮಾಧಾನವನ್ನು ಶಾಸಕರು, ಸಚಿವರು ಹೊರ ಹಾಕುತ್ತಿದ್ದುದು ಕಂಡುಬಂತು.

ಸಿ.ಎಂ ಬಳಿ ದೂರು: 'ಬಹುತೇಕ ಜಿಲ್ಲೆಗಳಲ್ಲಿ ಸಚಿವರ ಅಭಿಪ್ರಾಯ ಪಡೆಯದೇ ಪಟ್ಟಿಯನ್ನು ಅಂತಿಮಗೊಳಿಸಲಾಗಿದೆ. ಹಲವು ಸಚಿವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಮಾಡಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಆ ಪಟ್ಟಿಯ ಪ್ರಕಾರವೇ ಅಧಿಕಾರ ಹಂಚಿಕೆಯಾದರೆ ಪಕ್ಷ ಸಂಘಟನೆಗೆ ಹೊಡೆತ ಬೀಳುತ್ತದೆ ಎಂಬ ಅಭಿಪ್ರಾಯ ಹೇಳಿದ್ದಾರೆ' ಎಂದು ಸಚಿವರೊಬ್ಬರು ತಿಳಿಸಿದರು.

ಶಾಸಕರೂ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಪಕ್ಷ ಸಂಘಟನೆಯಲ್ಲಿ ಸಕ್ರಿಯರಾಗಿರುವ ಕೆಲವು ಮುಖಂಡರು ತೀವ್ರ ಬೇಸರ ಹೊರ ಹಾಕಿದ್ದಾರೆ. ಬಯಲುಸೀಮೆಯ ಜಿಲ್ಲೆಯ ಕೆಲವರು ಪಕ್ಷದ ಸದಸ್ಯತ್ವಕ್ಕೆ ರಾಜೀನಾಮೆ ನೀಡುವುದಾಗಿಯೂ ಮುಖ್ಯಮಂತ್ರಿ ಮತ್ತು ಕೆಪಿಸಿಸಿ ಅಧ್ಯಕ್ಷರಿಗೆ ಪತ್ರ ಬರೆದಿದ್ದಾರೆ. ಹೀಗಾಗಿ ನಿಗಮ, ಮಂಡಳಿಗಳಲ್ಲಿ ಕಾರ್ಯಕರ್ತರಿಗೆ ಅಧಿಕಾರ ಹಂಚಿಕೆ ಕಗ್ಗಂಟಾಗಿ ಪರಿಣಮಿಸಿದೆ ಎಂದು ಹೇಳಿದರು.

ನಿಗಮ ಮಂಡಳಿಗಳಲ್ಲಿ ಅಧಿಕಾರ ನೀಡಲು ಗುರುತಿಸುವಾಗ ಕೆಲವೇ ಜಾತಿಯ ಕಾರ್ಯಕರ್ತರಿಗೆ ಆದ್ಯತೆ ನೀಡಿರುವ ಬಗ್ಗೆಯೂ ಸಚಿವರು, ಶಾಸಕರು ಸಿಟ್ಟು ಹೊರ ಹಾಕಿದ್ದಾರೆ. ಚಿಕ್ಕಮಗಳೂರು ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಒಂದೇ ಜಾತಿಯವರನ್ನು ಗುರುತಿಸಲಾಗಿದೆ. ಕಾಂಗ್ರೆಸ್‌ ಪರವಾಗಿ ಇರುವ ಸಮುದಾಯಗಳಿಗೆ ಒಂದು ಸ್ಥಾನ ಕೊಡುವ ಪ್ರಸ್ತಾವವೂ ಇಲ್ಲ. ಇದು ಪಕ್ಷ ಪ್ರತಿಪಾದಿಸುವ ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾದುದು ಎಂದು ನಾಯಕರ ಬಳಿ ಅಸಮಾಧಾನ ತೋಡಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಚಿವರು, ಶಾಸಕರು ಹೇಳುವ ಪ್ರಕಾರ, ವೇಣುಗೋಪಾಲ್‌ ಒಪ್ಪಿಗೆ ನೀಡಿರುವ ಪಟ್ಟಿಯಂತೆ ಆದೇಶ ಹೊರಡಿಸಿದರೆ ರಾಜ್ಯ ಕಾಂಗ್ರೆಸ್‌ನಲ್ಲಿ ಅಸಮಾಧಾನ ಭುಗಿಲೇಳುವ ಸಾಧ್ಯತೆ ದಟ್ಟವಾಗಿದೆ. ಈ ಕಾರಣಕ್ಕಾಗಿಯೇ ಲೋಕಸಭಾ ಚುನಾವಣೆಯವರೆಗೂ ಕಾರ್ಯಕರ್ತರಿಗೆ ಅಧಿಕಾರ ನೀಡುವ ಪ್ರಸ್ತಾವ ನನೆಗುದಿಗೆ ಬೀಳುವುದು ಬಹುತೇಕ ಖಚಿತ.

ಅನುದಾನ ಹಂಚಿಕೆಗೂ ಅಸಮಾಧಾನ

ಜಲ ಸಂಪನ್ಮೂಲ ಇಲಾಖೆಯ ಅನುದಾನದ ಹಂಚಿಕೆಯಲ್ಲಿ ಶಾಸಕರನ್ನು ಕಡೆಗಣಿಸಲಾಗುತ್ತಿದೆ ಎಂಬ ವಿಚಾರವೂ ಆಡಳಿತ ಪಕ್ಷದಲ್ಲಿ ಬಿರುಸಿನ ಚರ್ಚೆಗೆ ಕಾರಣವಾಗಿದೆ. ಅನುದಾನ ಹಂಚಿಕೆಯಲ್ಲಿ ಡಿ.ಕೆ. ಶಿವಕುಮಾರ್‌ ತಳೆದಿರುವ ನಿಲುವಿನ ಬಗ್ಗೆಯೂ ಅಸಮಾಧಾನ ವ್ಯಕ್ತವಾಗುತ್ತಿದೆ.

'ಬೆಳಗಾವಿಯಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಪ್ರತಿನಿಧಿಸುವ ಕ್ಷೇತ್ರದಲ್ಲಿ ಕೆರೆ ತುಂಬಿಸಲು ₹800 ಕೋಟಿ ಒದಗಿಸಲಾಗಿದೆ. ಎಚ್‌.ಸಿ. ಬಾಲಕೃಷ್ಣ ಪ್ರತಿನಿಧಿಸುವ ಮಾಗಡಿ ಕ್ಷೇತ್ರದಲ್ಲಿ ಕೆರೆ ತುಂಬಿಸಲು ₹400 ಕೋಟಿ ಒದಗಿಸಲಾಗಿದೆ. ಉಳಿದ ಯಾವ ಶಾಸಕರಿಗೂ ಅಂತಹ ಯೋಜನೆ ನೀಡಿಲ್ಲ. ಈ ರೀತಿಯ ತಾರತಮ್ಯ ಸರಿಯೇ' ಎಂಬ ಪ್ರಶ್ನೆ ಅಸಮಾಧಾನಿತ ಶಾಸಕರಲ್ಲಿ ಇದೆ. 'ಕೆಲವು ಶಾಸಕರು ಮುಖ್ಯಮಂತ್ರಿಯವರನ್ನು ಭೇಟಿಮಾಡಿ, ಜಲ ಸಂಪನ್ಮೂಲ ಇಲಾಖೆಯಲ್ಲಿ ಅನುದಾನ ಹಂಚಿಕೆಯಲ್ಲಿನ ತಾರತಮ್ಯದ ಕುರಿತು ದೂರಿದ್ದಾರೆ' ಎಂದು ಸಚಿವರೊಬ್ಬರು ತಿಳಿಸಿದರು.

ಡಿಸಿಎಂ ಸ್ಥಾನ: ಸಡಿಲವಾಗದ ಪಟ್ಟು

ಜಾತಿವಾರು ಉಪಮುಖ್ಯಮಂತ್ರಿ ಹುದ್ದೆಗಳನ್ನು ಸೃಜಿಸಬೇಕೆಂಬ ಪಟ್ಟನ್ನು ಸಡಿಲಿಸದೇ ಇರಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಚಿವರ ಗುಂಪು ನಿರ್ಧರಿಸಿದೆ. ಈ ಗುಂಪಿನ ಸಚಿವರ ಉಪಾಹಾರ ಕೂಟಗಳ ಸಭೆಗಳಲ್ಲಿ ಅಂತಹ ನಿಲುವು ತಳೆಯಲಾಗಿದೆ ಎಂದು ಮೂಲಗಳು ತಿಳಿಸಿವೆ.

'ಕಾಂಗ್ರೆಸ್‌ ಪಕ್ಷಕ್ಕೆ ಮತ ಹಾಕುವುದಕ್ಕೆ ಕೆಲವು ಸಮುದಾಯದವರು ಬೇಕು. ಮತ ಹಾಕದಿದ್ದರೂ ಕೆಲವೇ ಸಮುದಾಯಗಳಿಗೆ ಅಧಿಕಾರ ಕೊಡಲೇಬೇಕು ಎಂಬ ನಿಲುವನ್ನು ಒಪ್ಪುವುದಿಲ್ಲ. ಜಾತಿವಾರು ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕೆಂಬ ಬೇಡಿಕೆಯನ್ನು ಲೋಕಸಭಾ ಚುನಾವಣೆ ಬಳಿಕ ಮತ್ತಷ್ಟು ಬಲವಾಗಿ ಮಂಡಿಸಬೇಕು ಎಂದು ಇತ್ತೀಚಿನ ಎರಡು ಸಭೆಗಳಲ್ಲಿ ನಿರ್ಧರಿಸಲಾಗಿದೆ' ಎಂದು ಮೂಲಗಳು ಹೇಳಿವೆ.

ಡಿಕೆಶಿ ವಿರುದ್ಧ ಅರ್ಜಿ: ವಿಚಾರಣೆ ಮುಂದಕ್ಕೆ

ಬೆಂಗಳೂರು: ಆದಾಯ ಮೀರಿ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ ವಿರುದ್ಧ ಸಿಬಿಐ ತನಿಖೆಗೆ ನೀಡಲಾಗಿದ್ದ ಅನುಮತಿ ಹಿಂಪಡೆದಿರುವ ರಾಜ್ಯ ಸಚಿವ ಸಂಪುಟದ ತೀರ್ಮಾನವನ್ನು ಪ್ರಶ್ನಿಸಲಾದ ರಿಟ್‌ ಅರ್ಜಿ ವಿಚಾರಣೆಯನ್ನು ಹೈಕೋರ್ಟ್‌ ಇದೇ 29ಕ್ಕೆ ನಿಗದಿಪಡಿಸಿದೆ.

ಈ ಸಂಬಂಧ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸಲ್ಲಿಸಿರುವ ರಿಟ್‌ ಅರ್ಜಿ ಹಾಗೂ ಈ ಪ್ರಕರಣವನ್ನು ಲೋಕಾಯುಕ್ತ ತನಿಖೆಗೆ ಒಪ್ಪಿಸಿರುವುದನ್ನು ತಡೆಯಬೇಕು ಎಂದು ಕೋರಿ ಸಿಬಿಐ ಸಲ್ಲಿಸಿರುವ ಎರಡು ಪ್ರತ್ಯೇಕ ಅರ್ಜಿಗಳನ್ನು ನ್ಯಾಯಮೂರ್ತಿ ಕೆ.ಸೋಮಶೇಖರ್‌ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಡ್ವೊಕೇಟ್‌ ಜನರಲ್‌ ಕೆ.ಶಶಿಕಿರಣ ಶೆಟ್ಟಿ ಮಧ್ಯಂತರ ಮತ್ತು ಮೂಲ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಸಮಯಾವಕಾಶ ಕೋರಿದರು. ಅಂತೆಯೇ, ಪ್ರಕರಣದಲ್ಲಿ ಪ್ರತಿವಾದಿಯನ್ನಾಗಿ ಸೇರ್ಪಡೆ ಮಾಡಲು ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿತು.

ಕೇಂದ್ರದ ನಡೆ: ರಾಜ್ಯಪಾಲ ಟೀಕೆ

ಒಂದನೇ ಪುಟದಿಂದ

'ನಮಗೆ ನ್ಯಾಯ ಮತ್ತು ಧರ್ಮದ ರೀತಿಯಲ್ಲಿ ಸಿಗಬೇಕಾದ ಪಾಲನ್ನು ಪಡೆಯಲು ಎಲ್ಲ ರೀತಿಯ ಪ್ರಯತ್ನ ಮಾಡುತ್ತಿದ್ದೇವೆ' ಎಂದು ಹೇಳಿದರು.

'ಬರಪೀಡಿತ ತಾಲ್ಲೂಕುಗಳಲ್ಲಿ ಬರ ಪರಿಹಾರ ಕ್ರಮಗಳಿಗಾಗಿ ಎನ್‌ಡಿಆರ್‌ಎಫ್‌ ನಿಂದ ₹18,171.44 ಕೋಟಿ ಆರ್ಥಿಕ ನೆರವು ಕೋರಿ ಭಾರತ ಸರ್ಕಾರದ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯಕ್ಕೆ ರಾಜ್ಯ ಸರ್ಕಾರ ಮನವಿ ಸಲ್ಲಿಸಿದೆ. ಖಾರಿಫ್‌ ಬರ ಪರಿಹಾರಕ್ಕೆ ಜ್ಞಾಪನ ಪತ್ರಗಳನ್ನು ಸಲ್ಲಿಸಿದೆ. ಆದರೆ, ಈವರೆಗೂ ಯಾವುದೇ ಹಣ ಬಿಡುಗಡೆ ಆಗಿಲ್ಲ' ಎಂದೂ ಹೇಳಿದರು.

'ಬರ ಪರಿಹಾರವನ್ನು ತುರ್ತಾಗಿ ಬಿಡುಗಡೆ ಮಾಡಲು ರಾಜ್ಯ ಸರ್ಕಾರ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತಿದೆ. ಪರಿಹಾರ ಕಾರ್ಯಕ್ಕೆ ಸಂಬಂಧಿಸಿದಂತೆ ನಾವು ಈ ಬಾರಿ ಸಂಪೂರ್ಣ ಪಾರದರ್ಶಕತೆ ತಂದಿದ್ದೇವೆ. ಹಿಂದಿನ ವರ್ಷಗಳಲ್ಲಿ ನೀಡಿದ ಪರಿಹಾರಗಳಲ್ಲಿ ಮತ್ತು ಇನ್‌ಪುಟ್‌ ಸಬ್ಸಿಡಿಗಳಲ್ಲಿ ವ್ಯಾಪಕ ಅವ್ಯವಹಾರ ನಡೆದಿರುವುದು ಸರ್ಕಾರ ಗಮನಕ್ಕೆ ಬಂದಿದೆ. ಅರ್ಹ ರೈತರಿಗೆ ಪರಿಹಾರ ಸಿಗದೆ ಅನರ್ಹರಿಗೆ ಪರಿಹಾರ ನೀಡಿದ ಅನೇಕ ಪ್ರಕರಣಗಳು ಗಮನಕ್ಕೆ ಬಂದಿವೆ' ಎಂದರು.

'ಬರ ಪರಿಹಾರವಿರಲಿ, ಗ್ಯಾರಂಟಿ ಯೋಜನೆಗಳಿರಲಿ ಇವುಗಳನ್ನು ನನ್ನ ಸರ್ಕಾರವು ಜನರ ಹಕ್ಕುಗಳು ಎಂದು ಭಾವಿಸಿಯೇ ಕಾರ್ಯ ನಿರ್ವಹಿಸುತ್ತಿದೆ' ಎಂದು ತಿಳಿಸಿದರು.

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಯಶಸ್ಸನ್ನು ತಮ್ಮ ಭಾಷಣದಲ್ಲಿ ಪ್ರಸ್ತಾವಿಸಿರುವ ರಾಜ್ಯಪಾಲರು, ಸರ್ಕಾರದ ನಡೆಗೆ ಭಾರಿ ಮೆಚ್ಚುಗೆ ವ್ಯಕ್ತಪಡಿಸಿದರು. ಅಲ್ಲದೇ, ಗ್ಯಾರಂಟಿಗಳನ್ನು ಟೀಕಿಸುತ್ತಿರುವ ಕೇಂದ್ರ ಸರ್ಕಾರ ಮತ್ತು ರಾಜ್ಯದ ವಿರೋಧ ಪಕ್ಷಗಳ ನಿಲುವಿನ ಕುರಿತು ಪರೋಕ್ಷವಾಗಿ ಟೀಕಿಸಿದರು.

'ನನ್ನ ಸರ್ಕಾರ ನಡೆ-ನುಡಿಗಳನ್ನು ಒಂದಾಗಿಸಿಕೊಂಡು ಕೆಲಸ ಮಾಡುತ್ತಿದೆ. ಹೇಳುವ ಮಾತಿಗೆ ಬೆಲೆ ನೀಡದೇ, ಭರವಸೆಗಳನ್ನೇ ಅವಹೇಳನ ಮಾಡುವ ವಾತಾವರಣವೇ ಎಲ್ಲೆಡೆ ತುಂಬಿರುವಾಗ ನನ್ನ ಸರ್ಕಾರವು ಹೊಸ ಸಂಸ್ಕೃತಿಗೆ ನಾಂದಿ ಹಾಡಿದೆ. ನನ್ನ ಸರ್ಕಾರ ನುಡಿದಂತೆ ನಡೆದಿದೆ' ಎಂದರು.

ಗ್ಯಾರಂಟಿಗಳಿಂದ ಅಭಿವೃದ್ಧಿಗೆ ಹಿನ್ನಡೆಯಾಗಿದೆ ಎಂಬ ಮಾತುಗಳನ್ನು ಅಲ್ಲಗಳೆಯುವ ರೀತಿಯೊಳಗೆ, ಕಳೆದ ಎಂಟು ತಿಂಗಳಿನಿಂದ ಏನೇನು ಪ್ರಗತಿಯಾಗಿದೆ ಎಂಬುದನ್ನೂ ರಾಜ್ಯಪಾಲರು ತಮ್ಮ ಭಾಷಣದಲ್ಲಿ ವಿವರವಾಗಿ ಮಂಡಿಸಿದರು.

ರಾಜ್ಯಪಾಲರ ಭಾಷಣಕ್ಕೆ ಪ್ರತಿಕ್ರಿಯೆಗಳು: 'ಬಜೆಟ್‌ ಅಧಿವೇಶನದ ರಾಜ್ಯಪಾಲರ ಭಾಷಣ ಅತ್ಯಂತ ನೀರಸವಾಗಿದ್ದು, ಸುಳ್ಳುಗಳ ಕಂತೆಯನ್ನೇ ತುರುಕಲಾಗಿದೆ' ಎಂದು ಬಿಜೆಪಿ ರಾಜ್ಯ ಘಟಕ ಅಧ್ಯಕ್ಷರೂ ಆಗಿರುವ ಶಾಸಕ ಬಿ.ವೈ. ವಿಜಯೇಂದ್ರ ಹೇಳಿದರು.

'ಬಿಜೆಪಿ ಯೋಜನೆಗಳನ್ನು ತನ್ನದೇ ಎಂದು ಸರ್ಕಾರ ಹೇಳಿಕೊಂಡಿದೆ. ಕಾನೂನು ಸುವ್ಯವಸ್ಥೆಯನ್ನೇ ಸರ್ಕಾರ ಕಾಪಾಡಿಲ್ಲ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್‌. ಅಶೋಕ ಆಕ್ರೋಶ ವ್ಯಕ್ತಪಡಿಸಿದರು.

ನೀರಾವರಿ ಯೋಜನೆಗಳಿಗೆ ಎಂಟು ತಿಂಗಳಲ್ಲಿ ₹10 ಸಾವಿರ ಕೋಟಿ ಖರ್ಚು ಮಾಡಿದ್ದೇವೆಂದು ರಾಜ್ಯಪಾಲರ ಮೂಲಕ ಕಾಂಗ್ರೆಸ್‌ ಸರ್ಕಾರ ಹೇಳಿಸಿದೆ. ಯಾವ ಯೋಜನೆಗೆ, ಎಷ್ಟು ಖರ್ಚು ಮಾಡಲಾಗಿದೆ ಎಂದು ದಾಖಲೆ ನೀಡಲಿ' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಆಗ್ರಹಿಸಿದರು.

ಸರ್ಕಾರ ರಾಜ್ಯಪಾಲರ ಭಾಷಣದ ಮೂಲಕ ಮುಂದಿನ ವರ್ಷದ ನೀಲನಕ್ಷೆ ಹಾಗೂ ಸಾಧನೆಗಳ ನೋಟವನ್ನು ಕೊಡಬೇಕು. ಆದರೆ, ಇವರು ಡಂಗುರ ಹೊಡೆಯುವ ಕೆಲಸಕ್ಕೆ ಸೀಮಿತರಾಗಿದ್ದಾರೆ ಜೆಡಿಎಸ್‌ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಟೀಕಿಸಿದರು.

'ನಮ್ಮ ಸರ್ಕಾರ ಇಡೀ ದೇಶಕ್ಕೆ ಕರ್ನಾಟಕ ಮಾದರಿಯನ್ನು ಪರಿಚಯಿಸಿದೆ. ಬಸವಣ್ಣವರ ನುಡಿದಂತೆ ನಡೆಯಬೇಕು ಎನ್ನುವ ತತ್ವದಂತೆ ಕಾಂಗ್ರೆಸ್‌ ಸರ್ಕಾರ ನಡೆದಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ ಹೇಳಿದರು.

'ಮನುವಾದ ವಿರುದ್ಧ ಚಳವಳಿಯೇ ಸ್ಫೂರ್ತಿ'

'ಸಂವಿಧಾನದ ಪ್ರಕಾರ ಚುನಾವಣೆಗಳಲ್ಲಿ ಜಾತಿ, ಧರ್ಮ ಬಳಕೆಗೆ ನಿರ್ಬಂಧವಿದೆ. ನಮ್ಮ ಎಲ್ಲಾ ಕಾರ್ಯಗಳು ಮತ್ತು ಚಟುವಟಿಕೆಗಳು ಸಂವಿಧಾನಕ್ಕೆ ಅನುಗುಣವಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕು' ಎಂದರು.

'ಸಾಂವಿಧಾನಿಕ ಸಂಸ್ಥೆಗಳು ಯಾವುದೇ ಕಾರಣಕ್ಕೂ ದುರ್ಬಲವಾಗದಂತೆ ಅಥವಾ ದುರುಪಯೋಗ ಆಗದಂತೆ ಸಂಕಲ್ಪ ಮಾಡಿ ರಕ್ಷಿಸಬೇಕಾಗಿದೆ. ನಮಗೆ ಸಂವಿಧಾನವೇ ರಾಷ್ಟ್ರೀಯ ಧರ್ಮ, ಸಂವಿಧಾನವನ್ನು ನಾವು ರಕ್ಷಿಸಿದರೆ ಸಂವಿಧಾನ ನಮ್ಮನ್ನು ರಕ್ಷಿಸುತ್ತದೆ ಎಂಬ ದೃಢವಾದ ಪ್ರತಿಜ್ಞೆಯನ್ನು ತೆಗೆದುಕೊಳ್ಳಬೇಕು' ಎಂದರು.

'ಜೈ ಶ್ರೀರಾಮ್‌'ಗೆ ಪರ್ಯಾಯ ಘೋಷಣೆ

ಜಂಟಿ ಅಧಿವೇಶನದ ವೇಳೆ ಇದೇ ಮೊದಲ ಬಾರಿಗೆ ಘೋಷಣೆ ಮೊಳಗಿಸುವ ಹೊಸ 'ಸಂಪ್ರದಾಯ'ವನ್ನು ಬಿಜೆಪಿ ಸದಸ್ಯರು ಶುರು ಮಾಡಿದರು. ಅದಕ್ಕೆ ಪ್ರತಿಯಾಗಿ, ಕಾಂಗ್ರೆಸ್‌ ಸದಸ್ಯರು ಭಾರತ್‌ ಮಾತಾಕೀ ಜೈ, ಜೈ ಭೀಮ್‌ ಎಂದು ಘೋಷಣೆ ಕೂಗಿದ್ದೂ ನಡೆಯಿತು.

ರಾಜ್ಯಪಾಲರು ವಿಧಾನಸಭೆ ಸಭಾಂಗಣದೊಳಗೆ ಆಗಮಿಸುವಾಗ ಮತ್ತು ನಿರ್ಗಮಿಸುವಾಗ ಕೇಸರಿಶಾಲು ಧರಿಸಿದ್ದ ಬಿಜೆಪಿ ಸದಸ್ಯರು 'ಜೈಶ್ರೀರಾಮ್‌' ಘೋಷಣೆ ಮೊಳಗಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್‌ ಕೆಲವು ಸದಸ್ಯರು 'ಜೈ ಶ್ರೀರಾಮ್‌' ಜತೆಗೆ, 'ಭಾರತ್‌ ಮಾತಾಕೀ ಜೈ', 'ಜೈ ಭಾರತ್‌', ವಂದೇ ಮಾತರಂ ಎಂದು ಘೋಷಣೆ ಕೂಗಿದರು. ಸಚಿವ ಬೈರತಿ ಸುರೇಶ್‌ ಅವರು 'ಜೈ ಭೀಮ್‌' ಎಂಬ ಘೋಷಣೆ ಹಾಕಿದರು. ರಾಜ್ಯಪಾಲರು ಸದನದ ಒಳಗೆ ಬರುವ ಮೊದಲೇ ಬಿಜೆಪಿಯ ಮುನಿರತ್ನ ಅವರು ತಮ್ಮ ಪಕ್ಷದ ಸದಸ್ಯರಿಗೆ ಕೇಸರಿ ಶಾಲು ವಿತರಿಸಿದ್ದರು. ಕಾಂಗ್ರೆಸ್‌ನತ್ತ ಒಂದು ಕಾಲಿಟ್ಟಿರುವ ಎಸ್‌.ಟಿ.ಸೋಮಶೇಖರ್‌ ಅವರೂ ಕೇಸರಿ ಶಾಲು ಹಾಕಿ ಕುಳಿತಿದ್ದರು.

ಬೆಳಿಗ್ಗೆ 11ಕ್ಕೆ ನಿಗದಿಯಾಗಿದ್ದ ಜಂಟಿ ಅಧಿವೇಶನಕ್ಕೆ ಐದು ನಿಮಿಷ ಮುಂಚಿತವಾಗಿಯೇ ಬಂದ ರಾಜ್ಯಪಾಲರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾನೂನು ಸಚಿವ ಎಚ್‌.ಕೆ.ಪಾಟೀಲ, ವಿಧಾನಸಭಾಧ್ಯಕ್ಷ ಯು.ಟಿ.ಖಾದರ್‌, ವಿಧಾನ ಪರಿಷತ್‌ ಸಭಾಪತಿ ಬಸವರಾಜ ಹೊರಟ್ಟಿ ಸ್ವಾಗತಿಸಿದರು.

'1.2 ಕೋಟಿ ಕುಟುಂಬಗಳು ಮಧ್ಯಮ ವರ್ಗಕ್ಕೆ'

'ನನ್ನ ಸರ್ಕಾರ ಪ್ರಾರಂಭಿಸಿರುವ ಗ್ಯಾರಂಟಿ ಯೋಜನೆಗಳು ದೇಶಕ್ಕೆ ಮಾದರಿಯಾಗಿವೆ.ಈ ಗ್ಯಾರಂಟಿಗಳನ್ನು ಅಳವಡಿಸಿಕೊಳ್ಳಲು ಇನ್ನಿತರೆ ಸರ್ಕಾರಗಳು ಪೈಪೋಟಿಗೆ ಮುಂದಾಗಿವೆ' ಎಂದು ಗೆಹಲೋತ್‌ ಹೇಳಿದರು.

'ಗ್ಯಾರಂಟಿಗಳಿಂದ 1.2 ಕೋಟಿಗೂ ಅಧಿಕ ಕುಟುಂಬಗಳು ಬಡತನ ರೇಖೆಗಿಂತ ಹೊರಗೆ ಬಂದು ಮಧ್ಯಮವರ್ಗದ ಸ್ಥಿತಿಗೆ ಏರುತ್ತಿವೆ. ಸರ್ಕಾರದ ಒಂದು ನಿರ್ಣಯದಿಂದಾಗಿ ರಾಜ್ಯದ 5 ಕೋಟಿಗೂ ಹೆಚ್ಚು ಜನರು ಮಧ್ಯವರ್ಗದ ಸ್ಥಿತಿಗೆ ಏರುವುದು ಜಾಗತಿಕ ದಾಖಲೆಯಾಗಿದೆ. ಗ್ಯಾರಂಟಿ ಅಗತ್ಯತೆಗೆ ಬೃಹತ್‌ ಸಂಖ್ಯೆಯಲ್ಲಿ ಹರಿದು ಬಂದ ಅರ್ಜಿಗಳೇ ಸಾಕ್ಷಿ ಎಂದರು.

ಕ್ಷೇಮ ಕುಶಲ



ಹಿರಿಯರಿಗಾಗಿ ಸರಳ ವ್ಯಾಯಾಮಗಳು

ಡಾ. ವಿನಯ ಶ್ರೀನಿವಾಸ್

ವ್ಯಾಯಾಮ ಎಂದೊಡನೆ ತೂಕ ಇಳಿಸಿಕೊಳ್ಳಲು ಮಾಡುವ ದೈಹಿಕ ಕಸರತ್ತು ಎಂದು ಹಲವರ ಅಭಿಪ್ರಾಯ. ಆದರೆ ಜನರು ವಿವಿಧ ಉದ್ದೇಶಗಳಿಗಾಗಿ ವ್ಯಾಯಾಮ ಮಾಡುವುದಿದೆ. ಸದೃಢ ಶರೀರವನ್ನು ಹೊಂದಲು, ಸುಂದರವಾಗಿ ಕಾಣಲು, ಶರೀರದ ಸರಾಗ ಚಲನೆಗೆಂದು, ಕಾಯಿಲೆಗಳ ನಿಯಂತ್ರಣಕ್ಕೆ, ಮನಸ್ಸನ್ನು ಸುಸ್ಥಿತಿಯಲ್ಲಿಡಲು – ಹೀಗೆ ಹಲವು ಕಾರಣಗಳಿಗಾಗಿ ಜನರು ವ್ಯಾಯಾಮದ ಮೊರೆ ಹೋಗುವುದಿದೆ. ಇವೆಲ್ಲವೂ ದೇಹ ಇನ್ನೂ ಗಟ್ಟಿಮುಟ್ಟಾಗಿದ್ದಾಗ ಮಾಡುವಂತಹವು. ಆದರೆ ವಯಸ್ಸಾಗಿ, ಶರೀರದ ಕಾರ್ಯಕ್ಷಮತೆ ಕ್ಷೀಣಿಸುತ್ತಾ ಹೋದಂತೆ ವ್ಯಾಯಾಮವನ್ನು ಕಡೆಗಣಿಸುವ ಅನೇಕರು ನಮ್ಮೊಂದಿಗಿದ್ದಾರೆ. ಅಷ್ಟೇ ಅಲ್ಲ, ಸದಾ ಮನೆಯಲ್ಲಿಯೇ ಇದ್ದು ಯಾವ ಜವಾಬ್ದಾರಿಯನ್ನೂ ನಿರ್ವಹಿಸಿದ ಇವರಿಗೆ ಎಂತಹ ವ್ಯಾಯಾಮ ಎಂದೂ ಮನೆಯ ಇತರ ಸದಸ್ಯರು ಮೂಗುಮುರಿಯುವುದಿದೆ. ಆದರೆ ವಾಸ್ತವದಲ್ಲಿ ಹಿರಿಯರ ದೈನಂದಿನ ಬದುಕಿನಲ್ಲಿಯೂ ವ್ಯಾಯಾಮದ ಪಾತ್ರ ಮಹತ್ವದ್ದೇ.

ವಯಸ್ಸಾದಂತೆ ದೇಹದ ಸಾಮರ್ಥ್ಯ ಕ್ಷೀಣಿಸಿದಾಗ, ವ್ಯಕ್ತಿಗೆ ಕೆಲವು ಚಟುವಟಿಕೆಗಳನ್ನು ಮಾತ್ರವೇ ಮಾಡಲು ಸಾಧ್ಯವಾಗಬಹುದು. ಉದಾಹರಣೆಗೆ, ಮೊಣಕಾಲಿನ ಕೀಲಿನ ಸಂಧಿವಾತದಿಂದ ಅಥವಾ ಬೆನ್ನುಮೂಳೆಯ ತೊಂದರೆಯಿಂದ ಬಳಲುವ ಹಲವು ಮಹಿಳೆಯರಿಗೆ ನೆಲದ ಮೇಲೆ ಕೂರುವುದಾಗಲಿ ಅಥವಾ ದೇಹವನ್ನು ನೇರವಾಗಿಟ್ಟು ಬಗ್ಗುವುದಾಗಲಿ ಮಾಡಲು ಸಾಧ್ಯವೆನಿಸದಿರಬಹುದು. ಹಾಗೆಂದ ಮಾತ್ರಕ್ಕೆ ಅವರು ಯಾವುದೇ ವ್ಯಾಯಾಮವನ್ನು ಮಾಡುವಂತಿಲ್ಲ ಎಂದಲ್ಲ. ಅಂತಹವರೂ ಮಾಡಬಹುದಾದ ಸರಳ ವ್ಯಾಯಾಮಗಳಿರುತ್ತವೆ. ಆದರೆ ಆ ಬಗ್ಗೆ ತಿಳಿದಿರಬೇಕಷ್ಟೆ.

ನಿಂತು ಮಾಡಬಹುದಾದ ವ್ಯಾಯಾಮಗಳಾವುವು?

- ಕುತ್ತಿಗೆಯನ್ನು ಮೇಲೆ-ಕೆಳಗೆ ಮತ್ತು ಎಡ-ಬಲಕ್ಕೆ ತಿರುಗಿಸುವುದು.
- ಕೈಗಳನ್ನು ಹಿಂದಕ್ಕೆ ಮುಂದಕ್ಕೆ ಬಿರುಸಾಗಿ ಚಲಿಸುವುದು.
- ಎರಡೂ ಭುಜಗಳನ್ನು ವೃತ್ತಾಕಾರವಾಗಿ ಚಲಿಸುವುದು.
- ಕೈಗಳನ್ನು ಮೇಲಕ್ಕೆ ಎತ್ತಿ ಜೋಡಿಸಿ, ಚಪ್ಪಾಳೆ ತಟ್ಟುವುದು. ಹಾಗೆಯೇ ಮುಂದಕ್ಕೆ ಚಾಚಿ ಕೂಡಿಸಿ ಚಪ್ಪಾಳೆ ತಟ್ಟುವುದು.
- ಮನೆಯ ಒಳಗೆ ಮೂವತ್ತು ನಿಮಿಷಗಳ ಕಾಲ ನಿಧಾನವಾಗಿಯೇ ವಾಕಿಂಗ್ ಮಾಡುವುದು.

ಕಾರಣಾಂತರಗಳಿಂದ ನಿಲ್ಲಲು ಅಥವಾ ನಡೆದಾಡಲು ಸಾಧ್ಯವಾಗದೆ ಕುರ್ಚಿಯಲ್ಲಿ ಮಾತ್ರವೇ ಕುಳಿತುಕೊಳ್ಳಲು ಸಮರ್ಥರಾದವರೂ ಸರಳ ವ್ಯಾಯಾಮಗಳನ್ನು ನಿತ್ಯವೂ ಐದರಿಂದ ಆರು ಬಾರಿ ಕಡ್ಡಾಯವಾಗಿ ಮಾಡಬೇಕು.

ಕುರ್ಚಿಯಲ್ಲಿ ಕುಳಿತು ಮಾಡಬಹುದಾದ ದೈಹಿಕ ಚಲನೆಗಳಾವುವು?

- ಮೇಲೆ ತಿಳಿಸಿದ ಕೈಗಳ ಎಲ್ಲ ಚಲನೆಗಳು.
- ಕಾಲುಗಳನ್ನು ಒಂದಾದ ಮೇಲೊಂದರಂತೆ ಮಂಡಿಯನ್ನು ನೇರ ಮಾಡಿ ಮುಂದಕ್ಕೆ ಚಾಚುವುದು ಮತ್ತು ಆ ಸ್ಥಿತಿಯಲ್ಲಿ ಕೆಲವು ಸೆಕೆಂಡುಗಳ ಕಾಲ ಕಾಲುಗಳನ್ನು ಹಾಗೆಯೇ ಇಟ್ಟುಕೊಳ್ಳಲು ಯತ್ನಿಸುವುದು.
- ಪಾದಗಳನ್ನು ಒಂದಾದ ಮೇಲೊಂದರಂತೆ ಮೇಲಕ್ಕೂ ಕೆಳಕ್ಕೂ ಚಲಿಸುವುದು.
- ಪಾದಗಳನ್ನು ಒಳಮುಖವಾಗಿ ಮತ್ತು ಹೊರ ಮುಖವಾಗಿ ತಿರುಗಿಸುವುದು.
- ಪಾದದ ಬೆರಳುಗಳನ್ನು ಹರಡುವುದು ಮತ್ತು ಒಟ್ಟಾಗಿಸುವುದು.

ಪಾರ್ಶ್ವವಾಯು ಮತ್ತಿತರ ಆರೋಗ್ಯಸಮಸ್ಯೆಗಳಲ್ಲಿ ಕಾಲುಗಳ ಸ್ನಾಯುಗಳು ಸಂಪೂರ್ಣವಾಗಿ ದುರ್ಬಲವಾದಾಗ ವ್ಯಕ್ತಿ ತಾನಾಗಿಯೇ ನಿಲ್ಲಲು ಅಥವಾ ಕುಳಿತುಕೊಳ್ಳಲು ಅಸಮರ್ಥನಾಗಿ ಸದಾ ಹಾಸಿಗೆಯ ಮೇಲೆಯೇ ಇರಬೇಕಾದ ಸ್ಥಿತಿಯಿರಬಹುದು. ಅಂತಹ ಸಂದರ್ಭಗಳಲ್ಲಿಯೂ ಸಾಧ್ಯವಾಗುವ ಕೈಕಾಲುಗಳ ಚಲನೆ ವ್ಯಕ್ತಿಯ ಶರೀರದ ರಕ್ತಪರಿಚಲನೆಯಲ್ಲಿ ಸುಧಾರಣೆಯನ್ನು ತರಬಹುದು ಮತ್ತು ಮಿದುಳನ್ನು ಪ್ರಚೋದಿಸಬಲ್ಲದು.

ಹಾಸಿಗೆಯಲ್ಲಿ ಮಲಗಿಯೇ ಮಾಡಬಹುದಾದ ಚಲನೆಗಳಾವುವು?

- ಕೈಗಳನ್ನು ಪಕ್ಕಕ್ಕೂ ಮೇಲಕ್ಕೂ ಹತ್ತು ಬಾರಿ ಚಾಚುವುದು. ಈ ರೀತಿ ದಿನದಲ್ಲಿ ಕನಿಷ್ಠ ಆರು ಬಾರಿಯಾದರೂ ಮಾಡಬೇಕು.
- ಕಾಲುಗಳನ್ನು ಮಡಿಯ ಭಾಗದಲ್ಲಿ ಹಾಸಿಗೆಗೆ ಒತ್ತಿ ಕೆಲವು ಸೆಕೆಂಡುಗಳ ಕಾಲ ಹಿಡಿದಿಡಲು ಪ್ರಯತ್ನಿಸುವುದು.
- ಪಾದಗಳಿಂದ ಮಂಚದ ಸರಳುಗಳನ್ನು ಆದಷ್ಟು ಶಕ್ತಿ ಬಿಟ್ಟು ಒತ್ತುವುದು. ಈ ಚಲನೆಯನ್ನೂ ಆರರಿಂದ ಎಂಟು ಬಾರಿ ಮಾಡಿದರೆ ಉತ್ತಮ.
- ಕೈಗಳಿಂದ ಚಪ್ಪಾಳೆ ತಟ್ಟುವುದು, ಅಂಗಿಯ ಗುಂಡಿಗಳನ್ನು ಹಾಕಿ, ತೆಗೆಯುವುದು.
- ಬಾಚಣಿಗೆಯನ್ನು ಕೈಗಳಲ್ಲಿ ಹಿಡಿದು ನೆತ್ತಿಯ ಕೂದಲನ್ನು ಬಾಚಿಕೊಳ್ಳುವುದು.
- ಹೊಟ್ಟೆಯ ಭಾಗವನ್ನು ಒಳಕ್ಕೆ ಗಟ್ಟಿಯಾಗಿ ಒತ್ತಿಕೊಳ್ಳುವುದು ಮತ್ತು ಸಡಿಲಗೊಳಿಸುವುದು.

ಹೀಗೆ ಮನೆಯಿಂದ ಹೊರಗೆ ಹೋಗಲು ಅಸಮರ್ಥರಾದ ಹಿರಿಯರನ್ನು ಒಂದಲ್ಲ ಒಂದು ಬಗೆಯ ಸರಳ ವ್ಯಾಯಾಮಗಳನ್ನು ಮಾಡಲು ಮನೆಯ ಇತರ ಸದಸ್ಯರು ಪ್ರೋತ್ಸಾಹಿಸಬೇಕು ಅಥವಾ ಆರೈಕೆಗೆಂದು ನೇಮಕ ಮಾಡಿದ ಶುಶ್ರೂಷಕರಿಗೆ ತಿಳಿಸಿ ಹೇಳಬೇಕು.

ಮಿದುಳು, ಮನಸ್ಸಿಗೂ ವ್ಯಾಯಾಮ!

- ಪುಸ್ತಕಗಳನ್ನು, ದಿನಪತ್ರಿಕೆಗಳನ್ನು ಓದಲು ಅದರಲ್ಲಿ ಬಿತ್ತರವಾದ ವಿವಿಧ ವಿಚಾರಗಳ ಬಗ್ಗೆ ಮಾತಿನಲ್ಲಿ ತೊಡಗಿಸಿಕೊಳ್ಳಬೇಕು. ಒಂದು ವೇಳೆ ಅವರು ಓದಲು ಕಷ್ಟ ಪಡುತ್ತಿದ್ದರೆ ಜೊತೆಯಲ್ಲಿದ್ದವರು ಜೋರಾಗಿ ಓದಿ ಹೇಳುವುದನ್ನೂ ಮಾಡಬಹುದು.
- ಒಳ್ಳೆಯ ಹಾಡು, ದೇವರ ನಾಮ, ಭಜನೆಗಳನ್ನು ದಿನವೂ ಕೇಳಿಸುವ ಅಭ್ಯಾಸ ಕೂಡ ಮನಸ್ಸಿನಲ್ಲಿ ಸಕಾರಾತ್ಮಕತೆಯನ್ನು ತುಂಬಿ ಪ್ರಶಾಂತಗೊಳಿಸಬಹುದು.
- ದೂರದರ್ಶನದಲ್ಲಿ ಬಿತ್ತರವಾಗುವ ವಾರ್ತೆಗಳು ಮತ್ತು ಇತರ ಒಳ್ಳೆಯ ಕಾರ್ಯಕ್ರಮಗಳನ್ನು ನೋಡಲು ಅವಕಾಶ ಮಾಡಿಕೊಡಬೇಕು. ಇದು ಅವರ ನರಮಂಡಲವನ್ನು ಪ್ರಚೋದಿಸುತ್ತಾ, ಇದ್ದುದರಲ್ಲಿಯೇ ಕ್ರಿಯಾಶೀಲತೆಯನ್ನು ಕಾಪಾಡಲು ನೆರವಾಗುತ್ತದೆ.
- ಬರೆಯಲು ಸಮರ್ಥರಾದ ಹಿರಿಯರಿಗೆ ನಿತ್ಯವೂ ಡೈರಿ ಬರೆಯುವ ರೂಢಿ ಮಾಡುವುದು ಕೂಡ ಮಿದುಳನ್ನು ಚುರುಕಾಗಿಡುತ್ತದೆ; ಆ ಮೂಲಕ ನೆನಪಿನ ಶಕ್ತಿಯನ್ನು ಉತ್ತಮಗೊಳಿಸಲು ಒಳ್ಳೆಯ ಮಾರ್ಗವೆನಿಸುತ್ತದೆ.
- ಸ್ನೇಹಿತರು ಮತ್ತು ಸಂಬಂಧಿಗಳೊಂದಿಗೆ ಭೇಟಿ, ಮಾತು ಮೊದಲಾದುವು ಹಿರಿಯರನ್ನು ಸಂತೋಷವಾಗಿಯೂ ಕ್ರಿಯಾಶೀಲರನ್ನಾಗಿಯೂ ಇಡಲು ಮುಖ್ಯವೆನಿಸುತ್ತವೆ. ❖

ನೆನಪುಗಳ ಮಾತು ಮಧುರ

ಡಾ. ಕುಶ್ವಂತ್ ಕೋಳಿಬೈಲು

ಉತ್ತಮವಾದ ಜ್ಞಾಪಕ ಶಕ್ತಿಯು ಮಕ್ಕಳಿಗೆ ಶೈಕ್ಷಣಿಕವಾಗಿ ಹೆಚ್ಚು ಸಾಧನೆ ಮಾಡಲು ಸಹಕಾರಿಯಾಗುತ್ತದೆಯೆಂಬುದು ಎಲ್ಲರೂ ಒಪ್ಪುವಂತಹ ವಿಚಾರವಾಗಿದೆ. ಸ್ಥಳ ಮತ್ತು ವ್ಯಕ್ತಿಗಳ ಹೆಸರುಗಳನ್ನು, ಇಸವಿ ಮತ್ತು ದಿನಾಂಕಗಳ ಅಂಕಿ–ಅಂಶಗಳನ್ನು ಅಥವಾ ಘಟನೆಗಳ ವಿವರವನ್ನು ನೆನಪಿಟ್ಟುಕೊಳ್ಳುವ ಸಾಮರ್ಥ್ಯ ಎಲ್ಲಾ ಮಕ್ಕಳಲ್ಲಿ ಒಂದೇ ರೀತಿಯಲ್ಲಿರುವುದಿಲ್ಲ. ಮಕ್ಕಳ ಜ್ಞಾಪಕಶಕ್ತಿಯನ್ನು ಹೆಚ್ಚು ಮಾಡುವುದರ ಕಡೆಗೆ ಪೋಷಕರು ಮತ್ತು ಶಿಕ್ಷಕರು ಒತ್ತು ಕೊಡುವುದು ಸಹಜ. ತಾರ್ಕಿಕವಾಗಿ ಮತ್ತು ವಿಮರ್ಶಾತ್ಮಕವಾಗಿ ಉತ್ತಮ ರೀತಿಯಲ್ಲಿ ಯೋಚಿಸಬಲ್ಲ ಮಗುವು ಅಂಕಿ–ಅಂಶಗಳನ್ನು ಮತ್ತು ಹೆಸರುಗಳನ್ನು ನೆನಪಿಟ್ಟುಕೊಳ್ಳುವಲ್ಲಿ ಎಡವಬಹುದು. ಮಗುವಿನ ಬೌದ್ಧಿಕ ಸಾಮರ್ಥ್ಯವನ್ನು ಅಂಕಗಳ ಆಧಾರದಲ್ಲಿ ಅಳೆಯುವ ಈಗಿನ ಶಿಕ್ಷಣ ವ್ಯವಸ್ಥೆಯು ಅಂತಹ ಮಕ್ಕಳ ಸಾಮರ್ಥ್ಯವನ್ನು ಅಳೆಯುವಲ್ಲಿ ಸೋಲಬಹುದು.

ಲಕ್ಷಾಂತರ ವರ್ಷಗಳ ವಿಕಸನ ಪ್ರಕ್ರಿಯೆಯಲ್ಲಿ ಮಾನವನ ಮಿದುಳಿನಲ್ಲಿ ನಿಯೋಕೋರ್ಟೆಕ್ಸ್ ಮುಂತಾದ ಭಾಗಗಳು ವಿಕಸನವನ್ನು ಹೊಂದಿವೆ. ಅವು ಮನುಷ್ಯನು ಹೆಚ್ಚು ತಾರ್ಕಿಕವಾಗಿ ಯೋಚಿಸುವುದರ ಜೊತೆಗೆ ತನಗೆ ಅಗತ್ಯ ಮಾಹಿತಿಗಳನ್ನು ಜ್ಞಾಪಕವಿಟ್ಟುಕೊಳ್ಳುವುದಕ್ಕೆ ಸಹಕಾರಿಯಾಗಿವೆ. ಕೆಲವು ವಿವರಗಳನ್ನು ಮನುಷ್ಯ ಅಲ್ಪಾವಧಿಗೆ ಜ್ಞಾಪಕದಲ್ಲಿಟ್ಟುಕೊಂಡರೆ ಕೆಲವು ವಿವರಗಳನ್ನು ಮಿದುಳು ದೀರ್ಘಕಾಲದ ತನಕ ನೆನಪಿನಲ್ಲಿಟ್ಟುಕೊಳ್ಳುತ್ತದೆ. ಘಟನೆಗಳಿಗೆ ನಮ್ಮ ಮೆದುಳು ನೀಡುವ ಪ್ರಾಮುಖ್ಯದ ಮೇಲೆ ಯಾವುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಮತ್ತು ಯಾವ ವಿವರಗಳು ನೆನಪಿನಲ್ಲಿಟ್ಟುಕೊಳ್ಳಲು ಯೋಗ್ಯವಲ್ಲವೆಂಬುವಲ್ಲ ಎಂಬುದು ನಿರ್ಧಾರವಾಗುತ್ತದೆ.

ಹೊಸ ವಿಚಾರವನ್ನು ಗ್ರಹಿಸುವಾಗ ಮಕ್ಕಳು ತಮ್ಮ ಏಕಾಗ್ರತೆಯನ್ನು ಉನ್ನತ ಮಟ್ಟದಲ್ಲಿಟ್ಟುಕೊಳ್ಳಬೇಕು

ಮನುಷ್ಯರಲ್ಲಿ ಶೇ 90ರಷ್ಟು ಮಿದುಳು ಮೊದಲ ಐದು ವರ್ಷಗಳಲ್ಲಿ ಬೆಳೆಯುವ ಮತ್ತು ವಿಕಸನ ಹೊಂದುವ ಕಾರಣದಿಂದ ಬಾಲ್ಯದಲ್ಲಿ ಮಕ್ಕಳು ಸಕಾರಾತ್ಮಕ ವಾತಾವರಣದಲ್ಲಿ ಬೆಳೆಯುವಂತೆ ನೋಡಿಕೊಳ್ಳುವುದು ಅತ್ಯಗತ್ಯವಾಗಿದೆ. ಸಕಾರಾತ್ಮಕ ವಾತಾವರಣದ ಜತೆಗೆ ಉತ್ತಮ ಆಹಾರ, ವ್ಯಾಯಾಮ ಮತ್ತು ನಿದ್ದೆಯು ಮಿದುಳಿನ ವಿಕಸನದಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ. ದೊಡ್ಡವರಿಗೆ ದಿನಕ್ಕೆ ಏಳರಿಂದ ಎಂಟು ಗಂಟೆಗಳಷ್ಟು ನಿದ್ದೆಯ ಅವಶ್ಯಕತೆಯಿದ್ದರೆ, ಮಕ್ಕಳು ಸುಮಾರು ಹತ್ತರಿಂದ ಹನ್ನೆರಡು ಗಂಟೆಗಳ ಕಾಲ ಮಲಗುತ್ತಾರೆ. ಮಕ್ಕಳಲ್ಲಿ ವೇಗವಾಗಿ ಬೆಳೆಯುತ್ತಿರುವ ನರಮಂಡಲಗಳಿಗೆ ಅಷ್ಟು ವಿಶ್ರಾಂತಿಯ ಅವಶ್ಯಕತೆಯಿರುತ್ತದೆ. ಐದರಿಂದ ಹನ್ನೆರಡು ವರ್ಷಗಳ ವಯಸ್ಸಿನ ಮಕ್ಕಳಿಗೆ ನಿದ್ರಾಹೀನತೆಯುಂಟಾದಲ್ಲಿ ಅದು ಅವರ ಜ್ಞಾಪಕಶಕ್ತಿ ಮತ್ತು ಕಲಿಯುವ ಸಾಮರ್ಥ್ಯವನ್ನು ಕುಗ್ಗಿಸಬಲ್ಲದು. ಅಲ್ಪಾವಧಿಯ ನೆನಪುಗಳನ್ನು ದೀರ್ಘಕಾಲದ ನೆನಪುಗಳಾಗಿ ಪರಿವರ್ತಿಸುವ ಕ್ರಿಯೆಯನ್ನು ಮನುಷ್ಯ ನಿದ್ರಿಸುವ ಅವಧಿಯಲ್ಲಿ ಮಿದುಳು ಪೂರ್ಣಗೊಳಿಸುತ್ತದೆ. ಅಂಕಿ–ಅಂಶ ಮತ್ತು ಹೆಸರುಗಳನ್ನು ಮಿದುಳು ಒಂದು ಕಡೆ ಸಂಗ್ರಹಿಸಿಟ್ಟುಕೊಂಡರೆ ಮಗುವು ಕಲಿಯುವ ದೈಹಿಕ ಚಟುವಟಿಕೆಗಳ ಸ್ನಾಯು ಸ್ಮರಣೆಯು ಮಿದುಳಿನ ಇನ್ನೊಂದು ಕಡೆಯಲ್ಲಿ ಸಂಗ್ರಹವಾಗಿರುತ್ತದೆ. ಹಾಗಾಗಿ ಬಾಲ್ಯದಲ್ಲಿ ಕಲಿತ ಈಜು ಅಥವಾ ಸೈಕಲ್ ಸವಾರಿಯನ್ನು ಹಲವು ವರ್ಷಗಳ ವಿರಾಮದ ಬಳಿಕವೂ ಮನುಷ್ಯ ಮತ್ತೆ ಮಾಡಬಲ್ಲವನಾಗಿರುತ್ತಾನೆ.

ದೈನಂದಿನ ಜೀವನದಲ್ಲಿ ಮಕ್ಕಳು ತಮ್ಮ ಶೈಕ್ಷಣಿಕ ಕಾರಣಕ್ಕಾಗಿ ಜ್ಞಾಪಕ ಶಕ್ತಿಯನ್ನು ಚುರುಕಾಗಿಟ್ಟುಕೊಳ್ಳುವುದು ಅನಿವಾರ್ಯ. ಹೊಸ ವಿಚಾರವನ್ನು ಗ್ರಹಿಸುವಾಗ ಮಕ್ಕಳು ತಮ್ಮ ಏಕಾಗ್ರತೆಯನ್ನು ಉನ್ನತ ಮಟ್ಟದಲ್ಲಿಟ್ಟುಕೊಳ್ಳಬೇಕು. ದೇಹವು ತರಗತಿಯಲ್ಲಿದ್ದು ಮನಸ್ಸು ಆಟದ ಮೈದಾನದಲ್ಲಿ ಓಡಾಡುತ್ತಿದ್ದರೆ ಕಿವಿಯ ಮೂಲಕ ಹರಿದು ಬರುತ್ತಿರುವ ಮಾಹಿತಿಯನ್ನು ಮಿದುಳು ಹಿಡಿದಿಟ್ಟುಕೊಳ್ಳುವಲ್ಲಿ ಸೋಲಬಹುದು. ಒಂದು ವಿಚಾರವನ್ನು ಮಿದುಳು ತನ್ನೊಳಗೆ ಹೊಸ ನರಕೋಶವನ್ನು (synapse) ನಿರ್ಮಿಸುವುದರ ಮೂಲಕ ಸಂಗ್ರಹ ಮಾಡುತ್ತದೆ. ಅದೇ ವಿಚಾರವನ್ನು ಒಂದೆರಡು ಬಾರಿ ಮತ್ತೆ ಮತ್ತೆ ಮನನ ಮಾಡಿದರೆ ಆ ನರಕೋಶ ಹೆಚ್ಚು ಬಲಿಷ್ಠವಾಗುತ್ತದೆ. ತಾವು ನೆನಪಿಟ್ಟುಕೊಳ್ಳಲು ಬಯಸುವ ಹೆಸರು ಅಥವಾ ದಿನಾಂಕಗಳನ್ನು ಒಮ್ಮೆ ಓದಿದ ಬಳಿಕ ಸ್ವಲ ಸಮಯದ ನಂತರ ಮತ್ತೆ ಜ್ಞಾಪಿಸಿಕೊಳ್ಳಲು ಪ್ರಯತ್ನಿಸಬೇಕು. ಹೀಗೆ ಹಲವು ಬಾರಿ ಪರಿಷ್ಕರಣೆ ಮಾಡಿದಾಗ ನರಕೋಶಗಳು ಸದೃಢವಾಗಿ ಅಲ್ಪಾವಧಿಯ ನೆನಪು ದೀರ್ಘಕಾಲದ ನೆನಪಾಗಿ ಪರಿವರ್ತನೆಯಾಗುತ್ತದೆ.

ಮನುಷ್ಯರಿಗೆ ವಿವಿಧ ಕ್ಷೇತ್ರಗಳಲ್ಲಿ ಇರುವ ವಿಭಿನ್ನ ಸಾಮರ್ಥ್ಯವು ಅವರ ಮೆದುಳಿನ ನೈಸರ್ಗಿಕ ಶಕ್ತಿಯ ಮೇಲೆ ಅವಲಂಬಿತವಾಗಿರುತ್ತದೆ. ಕೆಲವರಲ್ಲಿ ಭಾಷಾಕೌಶಲ ಹೆಚ್ಚಿದ್ದರೆ, ಕೆಲವರು ಅಂಕೆಗಳನ್ನು ಮತ್ತು ಚಿತ್ರಗಳನ್ನು ಸುಲಭವಾಗಿ ನೆನಪಿಟ್ಟುಕೊಳ್ಳಬಲ್ಲರು. ಕೆಲವರು ಕೇಳಿದ್ದನ್ನು ಹೆಚ್ಚು ಚೆನ್ನಾಗಿ ನೆನಪಿಟ್ಟುಕೊಳ್ಳಬಲ್ಲವರಾದರೆ, ಕೆಲವರು ನೋಡಿದನ್ನು ಅಷ್ಟು ಸುಲಭದಲ್ಲಿ ಮರೆಯಲಾರರು. ಈ ಕಾರಣದಿಂದಾಗಿ ಮಕ್ಕಳಿಗೆ ಹೊಸ ವ್ಯಕ್ತಿಯ, ವಸ್ತು ಅಥವಾ ಸ್ಥಳದ ಕುರಿತು ಮಾಹಿತಿ ನೀಡುವ ಸಮಯದಲ್ಲಿ ಅದರ ಚಿತ್ರವನ್ನು ತೋರಿಸಿದಾಗ ಅವರು ಅದನ್ನು ನೆನಪಿನಲ್ಲಿಟ್ಟುಕೊಳ್ಳುವ ಸಂಭವ ಜಾಸ್ತಿಯಾಗಿರುತ್ತದೆ. ಮಕ್ಕಳು ತಮ್ಮ ಪಂಚೇಂದ್ರಿಗಳನ್ನು ಬಳಸಿಕೊಂಡು ಒಂದು ವಿಚಾರ ಅಥವಾ ವಸ್ತುವನ್ನು ಗ್ರಹಿಸಲು ಪ್ರಯತ್ನಿಸಿದಾಗ ಅವರು ಅದನ್ನು ಮರೆಯಲಾರರು. ಉದಾಹರಣೆಗೆ, ನೀವು ಮಕ್ಕಳಿಗೆ ವಿವಿಧ ಪ್ರಾಣಿಗಳ ಹೆಸರನ್ನು ಹೇಳಿ ಅದರ ಚಿತ್ರವನ್ನು ತೋರಿಸಿದಾಗಲೂ ಅವರು ಆ ವಿವರಗಳನ್ನು ಸ್ವಲ್ಪಕಾಲದ ಬಳಿಕ ಮರೆತುಬಿಡಬಹುದು ಆದರೆ ಒಂದು ದಿನದ ಮೃಗಾಲಯದ ಪ್ರವಾಸದಲ್ಲಿ ಅವರು ನೋಡಿದ ಪ್ರಾಣಿಗಳ ಹೆಸರು ಮತ್ತು ವಿವರಗಳು ಹೆಚ್ಚು ಕಾಲ ನೆನಪಿನಲ್ಲಿ ಉಳಿಸಿಕೊಳ್ಳಬಲ್ಲರು. ಸತ್ಯಾಂಶಗಳನ್ನು ಮಕ್ಕಳ ಮಿದುಳು ಗ್ರಹಿಸುವಾಗ ಅವುಗಳು ಮಕ್ಕಳ ಮನಸ್ಸಿನಲ್ಲಿ ವಿವಿಧ ಭಾವನೆಗಳನ್ನು ಕಲಕಿದರೆ ಅವುಗಳು ಹೆಚ್ಚು ಕಾಲ ನೆನಪಿನಲ್ಲಿ ಉಳಿಯಬಲ್ಲವು. ಚಂದಿರನನ್ನು ಉಪಗ್ರಹವಾಗಿ ಮಕ್ಕಳಿಗೆ ಪರಿಚಯಿಸುವುದಕ್ಕಿಂತ ಚಂದಿರನನ್ನು ಚಂದಮಾಮನ ರೂಪದಲ್ಲಿ ತಿಳಿಸುವುದು ಉತ್ತಮ. ಒಂದು ಸಂಕೀರ್ಣ ಸನ್ನಿವೇಶದ ವಿವರವನ್ನು ಪ್ರಬಂಧದ ರೂಪದಲ್ಲಿ ಮಕ್ಕಳ ಮುಂದಿಡುವುದಕ್ಕಿಂತ ಕಥೆಯ ರೂಪದಲ್ಲಿ ಪ್ರಸ್ತುತ ಪಡಿಸುವುದು ಹೆಚ್ಚು ಸೂಕ್ತ. ವಾಸ್ತವಿಕ ವಿವರ ಅಥವಾ ಅಂಕಿ–ಅಂಶಗಳನ್ನು ಮಕ್ಕಳ ಮುಂದಿಡುವಾಗ ಅವುಗಳಿಗೆ ಭಾವನೆಗಳ ಹೊದಿಕೆ ಹೊದಿಸಿದರೆ ಅವುಗಳನ್ನು ಮಕ್ಕಳು ಹೆಚ್ಚು ಕಾಲ ನೆನಪಿನಲ್ಲಿಟ್ಟುಕೊಳ್ಳಬಲ್ಲರು. ನೈತಿಕ ಶಿಕ್ಷಣದ ಪಾಠಗಳನ್ನು ನೀತಿಕಥೆಗಳ ಮೂಲಕ ಅಥವಾ ರಾಮಾಯಣ–ಮಹಾಭಾರತಗಳ ಪಾತ್ರಗಳ ಮೂಲಕ ಹೇಳುವುದು ಹೆಚ್ಚು ಪರಿಣಾಮವನ್ನು ಬೀರಬಲ್ಲದು ❖



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ


ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

11) ಚಿತ್ರ ದಲ್ಲಿ AD ಯು ΔABCಯ ಮಧ್ಯರೇಖೆಯಾಗಿದೆ. $AM \perp BC$ ಆಗಿದೆ.

ಈಗ(i) $AC^2 = AD^2 + BC.DM + 2(BC/2)^2$

(ii) $AB^2 = AD^2 - BC.DM + (BC/2)^2$ ಎಂದು ಸಾಧಿಸಿ.



ಪರಿಹಾರ:–

(i) ΔAMD ದಲ್ಲಿ ಪೈಥಾಗೋರಸ್ ಪ್ರಮೇಯದ ಪ್ರಕಾರ

$AM^2 + MD^2 = AD^2$ .... (i)

ΔAMC, ದಲ್ಲಿ ಪೈಥಾಗೋರಸ್ ಪ್ರಮೇಯದ ಪ್ರಕಾರ

$AM^2 + MC^2 = AC^2$

$AM^2 + (MD + DC)^2 = AC^2$

$(AM^2 + MD^2) + DC^2 + 2MD.DC = AC^2$

ಸಮೀಕರಣ (i) ರಿಂದ,

$AD^2 + DC^2 + 2MD.DC = AC^2$

$DC = BC/2$,

$AD^2 + (BC/2)^2 + 2MD.(BC/2)^2 = AC^2$

$AD^2 + (BC/2)^2 + 2MD \times BC = AC^2$

$\mathbf{AC^2 = AD^2 + BC.DM + 2(BC/2)^2}$ ಸಾಧಿಸಿದೆ

(ii) ΔABM, ದಲ್ಲಿ ಪೈಥಾಗೋರಸ್ ಪ್ರಮೇಯದ ಪ್ರಕಾರ

$AB^2 = AM^2 + MB^2$

$= (AD^2 - DM^2) + MB^2$

$= (AD^2 - DM^2) + (BD - MD)^2$

$= AD^2 - DM^2 + BD^2 + MD^2 - 2BD \times MD$

$= AD^2 + BD^2 - 2BD \times MD$

$= AD^2 + (BC/2)^2 - 2(BC/2) MD$

$= AD^2 + (BC/2)^2 - BC.MD$

ಸಾಧಿಸಿದೆ

12). ಅಪವರ್ತನ ವಿಧಾನದಿಂದ ಕೆಳಗಿನ ವರ್ಗ ಸಮೀಕರಣಗಳ ಮೂಲಗಳನ್ನು ಕಂಡುಹಿಡಿಯಿರಿ.

(i) $x^2 - 3x - 10 = 0$ (ii) $2x^2 + x - 6 = 0$

ಪರಿಹಾರ:–

(i) $x^2 - 3x - 10 = 0$

$x^2 - 5x + 2x - 10 = 0$

$x(x-5) + 2(x-5) = 0$

$(x - 5)(x + 2) = 0$

$x - 5 = 0$ ಅಥವಾ $x + 2$

$x = 5$ ಅಥವಾ $x = -2$

$x^2 - 3x - 10 = 0$ ವರ್ಗ ಸಮೀಕರಣದ ಮೂಲ 5 ಮತ್ತು –2

(ii) $2x^2 + x - 6 = 0$

$2x^2 + x - 6 = 0$

$2x^2 + 4x - 3x - 6 = 0$

$2x(x+2) - 3(x+2) = 0$

$(x + 2)(2x - 3) = 0$

$x + 2 = 0$ ಅಥವಾ $2x - 3 = 0$

$x = -2$ ಅಥವಾ $x = 3/2$

$2x^2 + x - 6 = 0$ ವರ್ಗ ಸಮೀಕರಣದ ಮೂಲ –2 ಮತ್ತು 3/2

13) ಒಂದು ಸಮಾಂತರ ಶ್ರೇಢಿಯಲ್ಲಿ $d = 7$ ಮತ್ತು 22ನೇ ಪದ 149 ಆದರೆ 22 ಪದಗಳವರೆಗಿನ ಮೊತ್ತವೇನು?

ಪರಿಹಾರ: ಇಲ್ಲಿ $a_{22} = 149$ $d = 7$

ನಮಗೆ ಗೊತ್ತಿರುವಂತೆ $a_n = a + (n-1)d$

$a_{22} = a + (22 - 1)d$

$a_{22} = a + 21d$

$149 = a + (21)(7)$

$a + 147 = 149$

$a = 149 - 147$

$= 2$

ನಮಗೆ ಗೊತ್ತಿರುವಂತೆ

$$S_n = \frac{n}{2}[2a + (n-1)d]$$

$$S_{22} = \frac{22}{2}[2(2) + (22-1)7]$$


$$S_{22} = (11)(4 + 147)$$

$$S_{22} = (11)(151)$$

$$S_{22} = 1661$$

ಒಂದು ಸಮಾಂತರ ಶ್ರೇಢಿಯಲ್ಲಿ $d = 7$ ಮತ್ತು 22ನೇ ಪದ 149 ಆದರೆ 22 ಪದಗಳವರೆಗಿನ ಮೊತ್ತ 1661

14) ಕೊಟ್ಟಿರುವ ನಕ್ಷೆಯು $y = p(x)$ ಬಹುಪದೋಕ್ತಿಯನ್ನು ಸೂಚಿಸುತ್ತದೆ. p(x) ಹೊಂದಿರುವ ಶೂನ್ಯತೆಗಳ ಸಂಖ್ಯೆ ಬರೆಯಿರಿ (ಮಾರ್ಚ್–2020)



ಉತ್ತರ:– p(x) ಹೊಂದಿರುವ ಶೂನ್ಯತೆಗಳ ಸಂಖ್ಯೆ= 3

16) $5x^2 = 2(2x+3)$ ವರ್ಗ ಸಮೀಕರಣವನ್ನು ಆದರ್ಶರೂಪದಲ್ಲಿ ಬರೆದಾಗ ದೊರಕುವ ಸ್ಥಿರಾಂಕ.........


ಉತ್ತರ:– $5x^2 = 2(2x+3)$

$5x^2 == 4x + 6)$

$5x^2 = -4x - 6$

ಆದ್ದರಿಂದ ಸ್ಥಿರಾಂಕ = –6

15) ಚಿತ್ರದಲ್ಲಿ AB ಮತ್ತು ACಗಳು O ಕೇಂದ್ರವಿರುವ ವೃತ್ತಕ್ಕೆ A ಬಿಂದುವಿನಿಂದ ಸ್ಪರ್ಶಕಗಳು $\angle BOC$ ಆದರೆ $\angle BAC$ಯನ್ನು ಕಂಡುಹಿಡಿಯಿರಿ



ಪರಿಹಾರ:– $\angle BAC = 180^0 - 13^0 = 50^0$

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CHEMISTRY

REVISION and MODEL QUESTIONS

III. Answer any three of the following. Each question carries two marks.

21. How does the boiling point of solvent varies, when a non-volatile solute is dissolved in it? Give reason.

Ans:- *(........Contd)*

The magnitude of the increase in boiling point is proportional to the concentration of the solute. This is because the more solute particles there are in the solution, the more they will interfere with the ability of the solvent particles to escape.

The increase in boiling point is also affected by the nature of the solute. Non-volatile solutes, such as salt and sugar, have a greater effect on the boiling point than volatile solutes, such as alcohol and acetone. This is because non-volatile solutes do not evaporate, so they remain in the solution and continue to interfere with the ability of the solvent particles to escape.

The boiling point of a solution can be used to determine the concentration of the solute. This is done by comparing the boiling point of the solution to the boiling point of the pure solvent. The greater the difference in boiling point, the more concentrated the solution.

22. Define order of a reaction. For which order reaction the unit of rate of reaction and rate constant is same?

Ans:- The order of a reaction is defined as the sum of the powers of the concentration terms of the reactants in the experimentally determined rate equation for the reaction

Zero order reaction has same unit of rate constant as rate of reaction.

(ii) $A + H_2O \rightarrow B$

Rate $\alpha [A]$

Order = 1^{st} order since rate is proportional to concentration of one reactant.

23. What are chelate ligands? Give an example

Ans:- Ligands with multiple donor sites that are able to form five to six membered stable rings with metals are called chelating ligands.

Some common chelating ligands include ethylenediamine(en), acetylacetone (acac), and ethylenediaminetetraacetic acid (EDTA)

24. a) i) $C_6H_5CONH_2 \xrightarrow{Br_2/NaOH} X$

ii) $X \xrightarrow[0^0C]{NaNO_2, HCl} Y$

What are X and Y? and

Name the reaction occurring in step (i).

b) Arrange the following in the increasing order of their base strengths in the aqueous medium:

$(CH_3)_3N$, CH_3NH_2, $(CH_3)_2NH$.

Give one reason for the trend observed.

Ans:- a) i) $C_6H_5NH_2$ ii) $C_6H_5N_2Cl$

The reaction occurring in step (i) is Hoffmann's bromamide degradation reaction.

b) $(CH_3)_2NH > CH_3NH_2 > (CH_3)_3N$

The Inductive effect or solvation effect or steric hindrance.

25. (a) Mention two differences in the structure of starch and cellulose. Write the Haworth's structure of the monomer in cellulose.

b) Give an example each for –

i) acidic -amino acid


ii) fibrous protein.

Ans:-(a) Differences in the structure of starch and cellulose.

	Starch	*Cellulose*
1	Made up of α – D (+) glucose units.	Made up of β – D (+) glucose units.
2	Has α –glycosidic linkage.	Has β – glycosidic linkage.
3	Has $C_1 - C_4$ and $C_1 - C_6$ linkages.	Has only $C_1 - C_4$ linkages.
4	Has linear and branched polymeric chains.	It is a linear polymer.

(Note – any two differences)

The Haworth's structure of the monomer in cellulose –



b) An example each for –

i) acidic -amino acid is Asparatic acid (or) glutamic acid.

ii) fibrous protein is Keratin (or) myosin.

26. (a) What is condensation polymerisation?

b) With respect to natural rubber:

i) name its monomer

ii) name the element used for vulcanization.

Ans:- a) Condensation polymerization –

It is a type of polymerisation which involves repeated condensation reaction between two different bifunctional monomeric units.

b) With respect to natural rubber:

i) Its monomer is Isoprene (or) 2-methyl-1, 3- butadiene.

ii) The element used for vulcanization is Sulphur

(Contd.......)





'ದೆಹಲಿ ಚಲೋ' ಅಂಗವಾಗಿ ಮಂಗಳವಾರ ರಾಜಧಾನಿಗೆ ಬರಲಿರುವ ರೈತರನ್ನು ಗಡಿಗಳಲ್ಲಿಯೇ ತಡೆಯಲು ಪೊಲೀಸರು ಸಿಂಘು ಗಡಿಯಲ್ಲಿ ಬಹು ಹಂತದ ಕೃತಕ ತಡೆ ನಿರ್ಮಿಸಿದ್ದಾರೆ (ಮೊದಲ ಚಿತ್ರ). ಇನ್ನೊಂದೆಡೆ, ಬೃಹತ್ತಾದ ಸಿಮೆಂಟ್ ಬ್ಲಾಕ್‌ಗಳನ್ನು ಜೋಡಿಸಿರುವುದು —ಪಿಟಿಐ ಚಿತ್ರ

ದೆಹಲಿಯ ಗಡಿಗಳಲ್ಲಿ ಹಲವು ಹಂತದ ಬ್ಯಾರಿಕೇಡ್, ಮುಳ್ಳಿನ ಬೇಲಿ, ಡ್ರೋನ್ ಕಣ್ಗಾವಲು

'ದೆಹಲಿ ಚಲೋ': ರೈತರಿಗೆ ಅಡ್ಡಿ

ನವದೆಹಲಿ (ಪಿಟಿಐ): ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಖಾತರಿ ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸುಮಾರು 200 ರೈತ ಸಂಘಟನೆಗಳು ಮಂಗಳವಾರ (ಫೆ.13) 'ದೆಹಲಿ ಚಲೋ' ಹಮ್ಮಿಕೊಂಡಿವೆ. ಆದರೆ, ಅನ್ನದಾತರ ಪ್ರತಿಭಟನೆ ತಡೆಯಲು ಸರ್ಕಾರಗಳು ಶತ ಪ್ರಯತ್ನ ಮಾಡಿವೆ.

ಉತ್ತರ ಪ್ರದೇಶ, ಹರಿಯಾಣ ಮತ್ತು ಪಂಜಾಬ್ ಭಾಗಗಳಿಂದ ಭಾರಿ ಸಂಖ್ಯೆಯ ರೈತರು ದೆಹಲಿಯತ್ತ ಧಾವಿಸಲು ಮುಂದಾಗಿದ್ದಾರೆ. ಆದರೆ ಅವರು ರಾಷ್ಟ್ರ ರಾಜಧಾನಿಯನ್ನು ಪ್ರವೇಶಿಸದಂತೆ ತಡೆಯಲು ಸಿಂಘು, ಟಿಕ್ರಿ, ಗಾಜೀಪುರ ಗಡಿಯಲ್ಲಿ ಹಲವು ಹಂತಗಳಲ್ಲಿ ಬ್ಯಾರಿಕೇಡ್‌ಗಳನ್ನು ಹಾಕಲಾಗಿದೆ. ರಸ್ತೆಗಳಿಗೆ ಅಡ್ಡಲಾಗಿ ಮುಳ್ಳು ತಂತಿ, ಮೊಳೆಗಳ ಪಟ್ಟಿ, ಸಿಮೆಂಟ್ ಇಟ್ಟಿಗೆ ಮತ್ತು ಕಂಟೈನರ್‌ಗಳನ್ನು ಇಡಲಾಗಿದೆ. ಜೊತೆಗೆ ಬೃಹತ್ ಸಂಖ್ಯೆಯ ಪೊಲೀಸ್ ಮತ್ತು ಅರೆಸೇನಾಪಡೆಯ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಹಲವು ಅಹವಾಲುಗಳನ್ನು ಹೊತ್ತ ಅನ್ನದಾತರ ಪ್ರತಿಭಟನೆಗೆ ಭಾರಿ ಅಡ್ಡಿಗಳು ಎದುರಾಗಿದ್ದು, 2020ರಲ್ಲಿ ನಡೆದಿದ್ದ 'ರೈತರ ಆಂದೋಲನ'ವನ್ನು ನೆನಪಿಸುವಂತಿದೆ.

'ಗಡಿಗಳಲ್ಲಿ ಡ್ರೋನ್ ಕಣ್ಗಾವಲಿಡಲಾಗಿದೆ. ಯಾವುದೇ ರೀತಿಯ ಪರಿಸ್ಥಿತಿ ಎದುರಿಸಲು ಪೊಲೀಸರು ಸಿದ್ಧರಾಗಿದ್ದಾರೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು. ಚಂಡೀಗಢ ಮತ್ತು ಪಂಜಾಬ್‌ನ ಗಡಿಗಳಲ್ಲಿ ವಾಹನಗಳ ಸಂಚಾರಕ್ಕೆ ಪ್ರತ್ಯೇಕ ಮಾರ್ಗಸೂಚಿಯನ್ನು ಬಿಡುಗಡೆ ಮಾಡಲಾಗಿದೆ.

ಸಿಂಘು ಗಡಿಯಲ್ಲಿ ಸೋಮವಾರ ದಿಂದಲೇ ವಾಣಿಜ್ಯ ವಾಹನಗಳ ಸಂಚಾರಕ್ಕೆ ನಿರ್ಬಂಧ ಹೇರಲಾಗಿದೆ. ಮಂಗಳವಾರದ ನಂತರ ಎಲ್ಲಾ ರೀತಿಯ ವಾಹನಗಳಿಗೆ ನಿರ್ಬಂಧ ಹೇರಲಾಗುತ್ತದೆ ಎಂದು ಮಾರ್ಗ ಸೂಚಿಯಲ್ಲಿ ತಿಳಿಸಲಾಗಿದೆ. ಹರಿಯಾಣ ಅಧಿಕಾರಿಗಳು ಅಂಬಾಲಾ, ಜಿಂದ್, ಫತೇಹಾಬಾದ್ ಮತ್ತು ಕುರುಕ್ಷೇತ್ರದಲ್ಲಿ ಗಡಿಗಳಲ್ಲಿ ಸಿಮೆಂಟ್ ಇಟ್ಟಿಗೆ, ಕಬ್ಬಿಣದ ಮೊಳೆಗಳ ಪಟ್ಟಿಗಳನ್ನು ಅಡ್ಡಲಾಗಿ ಇರಿಸುವ ಮೂಲಕ ಮೂಲಕ ನಿರ್ಬಂಧಿಸಿದ್ದಾರೆ. ಅಲ್ಲದೆ ರಾಜ್ಯದ 15 ಜಿಲ್ಲೆಗಳಲ್ಲಿ ಸೆಕ್ಷನ್ 144ರ ಅಡಿಯಲ್ಲಿ ನಿಷೇಧಾಜ್ಞೆ ಜಾರಿ ಮಾಡಲಾಗಿದೆ.

ಅಂಬಾಲಾ, ಕುರುಕ್ಷೇತ್ರ, ಕೈತಾಲ್, ಜಿಂದ್, ಹಿಸಾರ್, ಫತೇಹಾಬಾದ್ ಮತ್ತು ಸಿರ್ಸಾದಲ್ಲಿ ಫೆ.13ರವರೆಗೆ ಇಂಟರ್ನೆಟ್ ಮತ್ತು ಎಸ್‌ಎಂಎಸ್ ಸೇವೆಯನ್ನು ಸ್ಥಗಿತಗೊಳಿಸಲಾಗಿದೆ. ಹರಿಯಾಣದ ಗಡಿ ಗ್ರಾಮಗಳ ರಸ್ತೆಗಳನ್ನೂ ಮುಚ್ಚಲಾಗಿದೆ. ದೆಹಲಿ–ರೋಹ್ಟಕ್ ಮತ್ತು ದೆಹಲಿ–ಬಹದೂರ್‌ಗಢ ರಸ್ತೆಗಳಲ್ಲಿ ಅರೆಸೇನಾ ಪಡೆಯ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

2020ರಲ್ಲಿ ಏನಾಗಿತ್ತು?: ಕೇಂದ್ರ ಸರ್ಕಾರ ಜಾರಿ ತಂದಿದ್ದ, ಸದ್ಯ ವಾಪಸ್ ಪಡೆದಿರುವ ಮೂರು ಕೃಷಿ ಕಾಯ್ದೆ ವಿರೋಧಿಸಿ, 2020ರಲ್ಲಿ ಪಂಜಾಬ್ ಮತ್ತು ಹರಿಯಾಣ ಮತ್ತು ಉತ್ತರ ಪ್ರದೇಶದ ಅಪಾರ ಸಂಖ್ಯೆಯ ರೈತರು ದೆಹಲಿಯತ್ತ ಹೊರಟಿದ್ದರು. ಆದರೆ ಪ್ರವೇಶಕ್ಕೆ ತಡೆಯೊಡ್ಡಿದ್ದರಿಂದ ರೈತರು ದೆಹಲಿಯ ಸಿಂಘು, ಟಿಕ್ರಿ ಮತ್ತು ಗಾಜೀಪುರ ಗಡಿಯಲ್ಲಿಯೇ ಸುದೀರ್ಘ ಒಂದು ವರ್ಷ ಪ್ರತಿಭಟನೆ ನಡೆಸಿದ್ದರು. ಚಳಿ, ಮಳೆಗೂ ಬಗ್ಗದೆ ನಡೆಸಿದ್ದ ಆಂದೋಲನಕ್ಕೆ ಮಣಿದ ಕೇಂದ್ರ ಸರ್ಕಾರ 2021ರ ನವೆಂಬರ್‌ನಲ್ಲಿ ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ಪಡೆದು, ಕನಿಷ್ಠ ಬೆಂಬಲ ಬೆಲೆ ನಿಗದಿಗೆ ಕಾಯ್ದೆಯ ಬಲ ನೀಡುವ ಭರವಸೆ ನೀಡಿತ್ತು. ಈ ದಿಸೆಯಲ್ಲಿ ಕೆಲಸ ಮಾಡಲು ಸಮಿತಿಯೊಂದನ್ನು ರಚಿಸುವುದರ ಕುರಿತು ಕೃಷಿ ಸಚಿವಾಲಯವು 2022ರಲ್ಲಿ ಅಧಿಸೂಚನೆಯನ್ನೂ ಹೊರಡಿಸಿತ್ತು. ಆದರೆ ಭರವಸೆಯನ್ನು ಈವರೆಗೆ ಕಾರ್ಯರೂಪಕ್ಕೆ ತಂದಿಲ್ಲ.



ಸಿಂಘು ಗಡಿ ಸಮೀಪದ ರಾಷ್ಟ್ರೀಯ ಹೆದ್ದಾರಿಯನ್ನು ಮುಚ್ಚಲು ಕಂಟೈನರ್‌ಗಳನ್ನು ಸಾಗಿಸಲಾಯಿತು —ಪಿಟಿಐ ಚಿತ್ರ

ರೈತರ ಬೇಡಿಕೆ ಏನು?

- ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಖಾತರಿಪಡಿಸಲು ಕಾನೂನು ರೂಪಿಸಬೇಕು
- ಸ್ವಾಮಿನಾಥನ್ ಆಯೋಗದ ವರದಿ ಅನುಷ್ಠಾನ ಮಾಡಬೇಕು
- ರೈತರು ಮತ್ತು ಕೂಲಿ ಕಾರ್ಮಿಕರಿಗೆ ಪಿಂಚಣಿ ನೀಡಬೇಕು
- ಕೃಷಿ ಸಾಲ ಮನ್ನಾ ಮಾಡಬೇಕು
- ರೈತರ ವಿರುದ್ಧ ದಾಖಲಾಗಿರುವ ಎಲ್ಲಾ ಪ್ರಕರಣಗಳನ್ನು ಹಿಂಪಡೆಯಬೇಕು
- ಲಖೀಂಪುರ ಖೀರಿ ಹಿಂಸಾಚಾರ ಪ್ರಕರಣದ ಸಂತ್ರಸ್ತರಿಗೆ 'ನ್ಯಾಯ' ದೊರಕಿಸಿಕೊಡಬೇಕು

ಹೈಕೋರ್ಟ್‌ಗೆ ಮೊರೆ

ಚಂಡೀಗಢ: ರೈತರ ಪ್ರತಿಭಟನಾ ರ‍್ಯಾಲಿ ತಡೆಯಲು ಹರಿಯಾಣ ಸರ್ಕಾರ ಗಡಿಗಳನ್ನು ಮುಚ್ಚಿರುವುದು ಮತ್ತು ಇಂಟರ್‌ನೆಟ್ ಸೇವೆ ಸ್ಥಗಿತ ಮಾಡಿರುವುದನ್ನು ಪ್ರಶ್ನಿಸಿ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನಲ್ಲಿ ಸೋಮವಾರ ಅರ್ಜಿ ಸಲ್ಲಿಸಲಾಗಿದೆ.

ರೈತರ ಪ್ರತಿಭಟನೆ ವಿರುದ್ಧ ಪಂಜಾಬ್, ಹರಿಯಾಣ ಮತ್ತು ಕೇಂದ್ರ ಸರ್ಕಾರಗಳು ಕೈಗೊಂಡಿರುವ ಕ್ರಮಗಳನ್ನು ರದ್ದು ಮಾಡಲು ನಿರ್ದೇಶನ ನೀಡಬೇಕು ಎಂದು ಅರ್ಜಿದಾರ ಉದಯ್ ಪ್ರತಾಪ್ ಸಿಂಗ್ ಮನವಿ ಮಾಡಿದ್ದಾರೆ.

ಕರ್ನಾಟಕ ರೈತರಿಗೆ ಭೋಪಾಲ್‌ನಲ್ಲಿ ತಡೆ

ಭೋಪಾಲ್: ಪ್ರತಿಭಟನಾ ಮೆರವಣಿಗೆಯಲ್ಲಿ ಪಾಲ್ಗೊಳ್ಳಲು ದೆಹಲಿಯತ್ತ ಹೊರಟಿದ್ದ ಕರ್ನಾಟಕದ ಸುಮಾರು 70 ರೈತರನ್ನು ಭೋಪಾಲ್ ರೈಲು ನಿಲ್ದಾಣದಲ್ಲಿ ಮಧ್ಯಪ್ರದೇಶದ ರೈಲ್ವೆ ಪೊಲೀಸರು ಸೋಮವಾರ ಮುಂಜಾನೆ ಬಂಧಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ರೈಲಿನಿಂದ ಇಳಿಯುವಂತೆ ಪೊಲೀಸರು ಒತ್ತಾಯಿಸಿದ ನಂತರ ರೈತರು ಧರಣಿ ಕುಳಿತು, ಘೋಷಣೆ ಕೂಗಿದರು ಎಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದರು. ರೈತರನ್ನು 'ಸಂಪರ್ಕ ಕ್ರಾಂತಿ ಎಕ್ಸ್‌ಪ್ರೆಸ್' ರೈಲಿನಿಂದ ಇಳಿಸಿ ಜಿಲ್ಲಾಧಿಕಾರಿಗಳ ವಶಕ್ಕೆ ನೀಡಲಾಯಿತು ಎಂದು ಅಧಿಕಾರಿಗಳು ತಿಳಿಸಿದರು.

ರೈತರ ಬಿಡುಗಡೆಗೆ ಆಗ್ರಹ: ಬಂಧಿತ ರೈತರನ್ನು ಕೂಡಲೇ ಅವರನ್ನು ಬಿಡುಗಡೆ ಮಾಡಬೇಕು ಎಂದು ರೈತ ನಾಯಕ ಜಗಜೀತ್ ಸಿಂಗ್ ಡಲ್ಲೇವಾಲ್ ಆಗ್ರಹಿಸಿದ್ದಾರೆ

ಕುರುಬೂರು ಆಕ್ರೋಶ

ನವದೆಹಲಿ: 'ದೆಹಲಿ ಚಲೋ ಅಭಿಯಾನಕ್ಕೆ ಬರುತ್ತಿದ್ದ ಕರ್ನಾಟಕದ ರೈತರ ಮೇಲೆ ಭೋಪಾಲ್ ಬಳಿ ದೌರ್ಜನ್ಯ ನಡೆಸಿ ಬಂಧಿಸಲಾಗಿದೆ. ಇದು ರಾಕ್ಷಸಿ ಕೃತ್ಯ' ಎಂದು ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

'ದೆಹಲಿ ಚಲೋದಲ್ಲಿ ಭಾಗಿಯಾಗಲು ರಾಜ್ಯದ ನೂರಾರು ರೈತರು ಹೊರಟಿದ್ದರು. ಅವರನ್ನು ಭೋಪಾಲ್ ಬಳಿ ರೈಲಿನಲ್ಲಿ ಮಧ್ಯರಾತ್ರಿ ಹೊತ್ತಿನಲ್ಲಿ ಎಳೆದಾಡಲಾಗಿದೆ. ಈ ವೇಳೆ, ಕೆಲವು ಮಹಿಳೆಯರಿಗೆ ಗಾಯಗಳಾಗಿವೆ. ರೈತರ ಚಳವಳಿ ಹತ್ತಿಕ್ಕಲು ಕೇಂದ್ರ ಸರ್ಕಾರ ಪೊಲೀಸ್ ಬಲವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ. ಇದು ಪೊಲೀಸರು ಗೂಂಡಾಗಿರಿ' ಎಂದು ಕಿಡಿಕಾರಿದರು.

ನಾನು ಮುಖ್ಯಮಂತ್ರಿಯಾಗಿದ್ದಾಗ ₹2 ಲಕ್ಷದ ವರೆಗೆ ರೈತರ ಸಾಲ ಮನ್ನಾ ಮಾಡಿದ್ದೆ. ಹಾಗಿದ್ದಾಗ 10 ವರ್ಷಗಳಿಂದ ಅಧಿಕಾರದಲ್ಲಿ ಇರುವ ಬಿಜೆಪಿ ಸರ್ಕಾರಕ್ಕೆ ರೈತರ ಸಾಲಮನ್ನಾ ಮಾಡಲು ಏಕೆ ಸಾಧ್ಯವಿಲ್ಲ?
ಉದ್ಧವ್ ಠಾಕ್ರೆ, ಶಿವಸೇನಾ (ಉದ್ಧವ್ ಬಣ) ನಾಯಕ

ರೈತರ ಪ್ರತಿಭಟನಾ ಮೆರವಣಿಗೆ ಹತ್ತಿಕ್ಕಲು ಸರ್ಕಾರ ಕೈಗೊಂಡಿರುವ ಕ್ರಮಗಳು ವಸಾಹತುಶಾಹಿ ಕಾಲಕ್ಕಿಂತ ಉಗ್ರವಾಗಿವೆ. ಸರ್ಕಾರ ಮಾತುಕತೆ ಮೂಲಕ ಸಮಸ್ಯೆ ಇತ್ಯರ್ಥಪಡಿಸಲಿ.
ಗೋಪಾಲ್ ರಾಯ್, ಎಎಪಿಯ ದೆಹಲಿ ಸಂಚಾಲಕ

ಸಹಜ ಸ್ಥಿತಿಯತ್ತ ಹಲ್ದ್ವಾನಿ

ಹಲ್ದ್ವಾನಿ (ಉತ್ತರಾಖಂಡ) (ಪಿಟಿಐ): ಹಿಂಸಾಚಾರ ಪೀಡಿತ ಬನ್‌ಭೂಲ್‌ಪುರ ಪ್ರದೇಶದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಅರೆಸೇನಾ ಪಡೆಯ ಹೆಚ್ಚುವರಿ ತುಕಡಿಗಳನ್ನು ನಿಯೋಜಿಸಲಾಗಿದ್ದು, ಸೋಮವಾರ ಪರಿಸ್ಥಿತಿ ಸಹಜ ಸ್ಥಿತಿಯಲ್ಲಿ ಇತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಕರ್ಫ್ಯೂ ವಿಧಿಸಿರುವ ಪ್ರದೇಶದ ನಿವಾಸಿಗಳಿಗೆ ಅಗತ್ಯ ವಸ್ತುಗಳನ್ನು ಪೂರೈಸಲಾಗುತ್ತಿದೆ. ಹೆಚ್ಚಿನ ಸೌಲಭ್ಯಗಳನ್ನು ಶೀಘ್ರದಲ್ಲೇ ಒದಗಿಸಲಾಗುವುದು' ಎಂದು ನೈನಿತಾಲ್‌ನ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಪ್ರಹ್ಲಾದ್ ಮೀನಾ ಹೇಳಿದ್ದಾರೆ.

'ಕಾನೂನು ಸುವ್ಯವಸ್ಥೆ ಕಾಪಾಡಲು ಬನ್‌ಭೂಲ್‌ಪುರದ ಸೂಕ್ಷ್ಮ ಪ್ರದೇಶದಲ್ಲಿ ಅರೆಸೇನಾ ಪಡೆಯ ಒಂದು ಸಾವಿರಕ್ಕೂ ಹೆಚ್ಚು ಯೋಧರನ್ನು ನಿಯೋಜಿಸಲಾಗಿದೆ' ಎಂದು ಅವರು ತಿಳಿಸಿದ್ದಾರೆ. 'ಫೆ. 8ರಂದು ನಡೆದ ಗಲಭೆಯಲ್ಲಿ ಭಾಗಿಯಾಗಿದ್ದವರನ್ನು ಪತ್ತೆಹಚ್ಚಲು ಪೊಲೀಸರು ಪ್ರಯತ್ನ ನಡೆಸಿದ್ದಾರೆ. ಹಲ್ದ್ವಾನಿ ಸಹಜ ಸ್ಥಿತಿಗೆ ಮರಳಿದೆ. ಬನ್‌ಭೂಲ್‌ಪುರದಲ್ಲಿ 120 ಶಸ್ತ್ರಾಸ್ತ್ರ ಪರವಾನಗಿಗಳನ್ನು ರದ್ದುಗೊಳಿಸಲಾಗಿದೆ' ಎಂದು ನೈನಿತಾಲ್ ಜಿಲ್ಲಾಧಿಕಾರಿ ವಂದನಾ ಸಿಂಗ್ ಹೇಳಿದ್ದಾರೆ.

ಪೊಲೀಸ್ ಠಾಣೆ ನಿರ್ಮಾಣ– ಧಾಮಿ: 'ಅಕ್ರಮವಾಗಿ ನಿರ್ಮಾಣಗೊಂಡಿದ್ದ ಮದರಸಾವನ್ನು ನೆಲಸಮಗೊಳಿಸಿದ ಸ್ಥಳದಲ್ಲೇ ಪೊಲೀಸ್ ಠಾಣೆ ನಿರ್ಮಿಸಲಾಗುವುದು' ಎಂದು ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್‌ಸಿಂಗ್ ಧಾಮಿ ಸೋಮವಾರ ಹೇಳಿದ್ದಾರೆ. ನಾರಿಶಕ್ತಿ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಇಲ್ಲಿಗೆ ಬಂದಿದ್ದ ಅವರು 'ಬನ್‌ಭೂಲ್‌ಪುರದ ಮಲಿಕ್ ಕಾ ಬಾಗಿಚಾ ಪ್ರದೇಶದಲ್ಲಿ ಅತಿಕ್ರಮಣಕ್ಕೊಳಗಾಗಿದ್ದ ಜಾಗನ್ನು ತೆರವುಗೊಳಿಸಲಾಗಿದೆ' ಎಂದರು.

ಪ್ರಜಾವಾಣಿ ಜಾಲತಾಣಕ್ಕೆ 'ಅತ್ಯುತ್ತಮ ಸುದ್ದಿ ವೆಬ್‌ಸೈಟ್' ರಜತ ಪ್ರಶಸ್ತಿ

ಒಂದನೇ ಪುಟದಿಂದ...

ಪರಿಷ್ಕೃತ ವಿನ್ಯಾಸ ಮತ್ತು ವ್ಯವಸ್ಥೆಯಿಂದಾಗಿ, ಆಕರ್ಷಕ ಮುಖಪುಟ, ತಾಜಾ ಸುದ್ದಿಗಳ ನಿರಂತರ ಮತ್ತು ತ್ವರಿತ ಅಪ್‌ಡೇಟ್ಸ್, ಓದುಗರಿಗೆ ಅನುಕೂಲಕರವಾದ ನ್ಯಾವಿಗೇಶನ್, ಪುಟ ತೆರೆಯುವಿಕೆಯಲ್ಲಿನ ವೇಗ - ಹೀಗೆ ಯೂಸರ್ ಇಂಟರ್‌ಫೇಸ್ (ಯುಐ) ಮತ್ತು ಯೂಸರ್ ಎಕ್ಸ್‌ಪೀರಿಯನ್ಸ್ (ಯುಎಕ್ಸ್) - ಎರಡರಲ್ಲಿಯೂ ಅದ್ಭುತವಾದ ಸುಧಾರಣೆಯಾಗಿದೆ.

ಜೊತೆಗೆ, ಅತ್ಯಾಧುನಿಕವಾದ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನವನ್ನೂ ಅಳವಡಿಸಲಾಗಿದ್ದು, ತನ್ನದೇ ಆದ ಯೂನಿಕೋಡ್ ಅಕ್ಷರ ವಿನ್ಯಾಸ, ವೈವಿಧ್ಯಮಯ ಟೆಂಪ್ಲೆಟ್‌ಗಳು ಪ್ರಜಾವಾಣಿ ಜಾಲತಾಣದ ಜನಪ್ರಿಯತೆಗೆ ಕಾರಣವಾಗಿವೆ. ಈ ಎಲ್ಲ ಅಂಶಗಳೂ 'ಬೆಸ್ಟ್ ನ್ಯೂಸ್ ವೆಬ್‌ಸೈಟ್' ಪುರಸ್ಕಾರಕ್ಕೆ ಪರಿಗಣನೆಯಾಗಿವೆ.

'ವಾನ್-ಇಫ್ರಾ'ದಿಂದ ಹಲವಾರು ವಿಭಾಗಗಳಲ್ಲಿ ಪ್ರಶಸ್ತಿ ಘೋಷಿಸಲಾಗಿದ್ದು, ಅತ್ಯುತ್ತಮ ಸುದ್ದಿ ವೆಬ್‌ಸೈಟ್ ವಿಭಾಗದಲ್ಲಿ ಮೊದಲ ಸ್ಥಾನ (ಚಿನ್ನ) 'ದಿ ಕ್ವಿಂಟ್' ಹಾಗೂ ತೃತೀಯ (ಕಂಚು) ಸ್ಥಾನ 'ಲೈವ್ ಮಿಂಟ್'ಗೆ ಘೋಷಣೆಯಾಗಿದ್ದು, ಇವೆರಡೂ ಇಂಗ್ಲಿಷ್ ಭಾಷೆಯ ಜಾಲತಾಣಗಳು. ವಿಭಿನ್ನ ವಿಭಾಗಗಳಲ್ಲಿ ಆಂಗ್ಲ ಡಿಜಿಟಲ್ ಮಾಧ್ಯಮ ಸಂಸ್ಥೆಗಳೇ ಹೆಚ್ಚು ಪ್ರಶಸ್ತಿಗಳನ್ನು ಪಡೆದಿವೆ.

ಇಂಗ್ಲಿಷ್ ಹೊರತಾಗಿ, ಭಾರತೀಯ ಭಾಷೆಗಳಲ್ಲಿ ಹಿಂದಿಯ 'ಅಮರ್ ಉಜಾಲ' ಹಾಗೂ ಬಂಗಾಳಿಯ 'ಪ್ರಥಮ್ ಅಲೊ' ಜಾಲತಾಣಗಳು ಅನ್ಯ ವಿಭಾಗಗಳಲ್ಲಿ ಪ್ರಶಸ್ತಿ ಪಡೆದಿವೆ. ಅಂತರರಾಷ್ಟ್ರೀಯ ತೀರ್ಪುಗಾರರ ತಂಡವು ಪ್ರಶಸ್ತಿ ಆಯ್ಕೆ ಪ್ರಕ್ರಿಯೆ ನೆರವೇರಿಸಿತ್ತು. ಮಾರ್ಚ್ 13-14ರಂದು ನವದೆಹಲಿಯಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಹಿಂದಿನ ಆರ್‌ಜೆಡಿ ಸರ್ಕಾರದ ಭ್ರಷ್ಟಾಚಾರ ಕುರಿತು ತನಿಖೆ –ಸಿ.ಎಂ

ವಿಶ್ವಾಸಮತ ಗೆದ್ದ ನಿತೀಶ್ ಕುಮಾರ್ ಸರ್ಕಾರ

ಪಟ್ನಾ (ಪಿಟಿಐ): ಬಿಹಾರದಲ್ಲಿ ಮೈತ್ರಿಯನ್ನು ಬದಲಿಸಿ, ಮತ್ತೆ ಎನ್‌ಡಿಎ ಜೊತೆ ಕೈಜೋಡಿಸಿದ್ದ ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದ ನೂತನ ಸರ್ಕಾರ ಸೋಮವಾರ ಸದನದಲ್ಲಿ ವಿಶ್ವಾಸಮತ ಸಾಬೀತುಪಡಿಸಿತು.

243 ಸದಸ್ಯ ಬಲದ ವಿಧಾನಸಭೆಯಲ್ಲಿ 129 ಸದಸ್ಯರು ವಿಶ್ವಾಸಮತ ನಿರ್ಣಯದ ಪರವಾಗಿ ನಿಂತರು. ಸ್ಪೀಕರ್ ಸ್ಥಾನದಲ್ಲಿದ್ದ ಉಪಾಧ್ಯಕ್ಷ ಮಹೇಶ್ವರ್ ಹಜಾರಿ, ಕಲಾಪ ನಡೆಸಿಕೊಟ್ಟರು. ಹಿಂದೆ 'ಮಹಾಘಟಬಂಧನ್' ಸರ್ಕಾರದ ಭಾಗವಾಗಿದ್ದ ಆರ್‌ಜೆಡಿ ಸದಸ್ಯರು ಸಭಾತ್ಯಾಗ ಮಾಡಿದ್ದು, ಮತದಾನ ಪ್ರಕ್ರಿಯೆಯಿಂದ ದೂರ ಉಳಿದರು.

ಮೊದಲಿಗೆ ನಿರ್ಣಯ ಧ್ವನಿಮತದಿಂದ ಅಂಗೀಕಾರವಾಗಿದೆ ಎಂದು ಹಜಾರಿ ಪ್ರಕಟಿಸಿದರು. ಆದರೆ, ಸಂಸದೀಯ ವ್ಯವಹಾರಗಳ ಸಚಿವ ವಿಜಯ ಕುಮಾರ್ ಚೌಧರಿ ಅವರು ಸದಸ್ಯರ ತಲೆ ಎಣಿಕೆಗೆ ಮನವಿ ಮಾಡಿದರು. ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರೂ ಇದನ್ನು ಅನುಮೋದಿಸಿದರು.

129 ಸದಸ್ಯರು ನಿರ್ಣಯದ ಪರ ಮತ ಚಲಾಯಿಸಿದರು. ನಿತೀಶ್ ಕುಮಾರ್ ಅವರು, ಸ್ಪೀಕರ್ ಸ್ಥಾನದಲ್ಲಿದ್ದ ಉಪಾಧ್ಯಕ್ಷ, ಜೆಡಿಯುನ ಮಹೇಶ್ವರ್ ಹಜಾರಿ ಮತವನ್ನು ಗಣನೆಗೆ ತೆಗೆದುಕೊಳ್ಳಲು ಸಲಹೆ ಮಾಡಿದರು. ಸಾಮಾನ್ಯವಾಗಿ ಟೈ ಆದ ಸಂದರ್ಭ ಹೊರತುಪಡಿಸಿ ಸ್ಪೀಕರ್ ಅವರ ಮತ ಪರಿಗಣಿಸುವುದಿಲ್ಲ.

ನೂತನ ಸರ್ಕಾರದ ನೇತೃತ್ವ ವಹಿಸಿರುವ ನಿತೀಶ್ ಕುಮಾರ್ ಪರವಾಗಿ ಜೆಡಿಯು, ಬಿಜೆಪಿ ಹಾಗೂ ಮಾಜಿ ಮುಖ್ಯಮಂತ್ರಿ ಜೀತನ್ ರಾಮ್ ಮಾಂಝಿ ಅವರ ಎಚ್‌ಎಎಂ ಮತ್ತು ಒಬ್ಬ ಪಕ್ಷೇತರ ಸದಸ್ಯ ಇದ್ದಾರೆ. ಇದರ ಜೊತೆಗೆ ಸೋಮವಾರ ಆರ್‌ಜೆಡಿಯ ಮೂವರು ಸದಸ್ಯರು ಆಡಳಿತ ಪಕ್ಷದ ಜೊತೆಗೆ ಕಾಣಿಸಿಕೊಂಡರು.

ಆರ್‌ಜೆಡಿ ಅಕ್ರಮದ ವಿರುದ್ಧ ತನಿಖೆ: ಇದಕ್ಕೂ ಮುನ್ನ ನಿರ್ಣಯವನ್ನು ಮಂಡಿಸಿ ಮಾತನಾಡಿದ ಜೆಡಿಯು ನಾಯಕ, ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು, ಹಿಂದಿನ ಸರ್ಕಾರದಲ್ಲಿ ಮೈತ್ರಿಯ ಭಾಗವಾಗಿದ್ದ ಆರ್‌ಜೆಡಿ ವಿರುದ್ಧ ಭ್ರಷ್ಟಾಚಾರ ಆರೋಪ ಮಾಡಿದರು.

'2005ರಲ್ಲಿ ಅಧಿಕಾರದಲ್ಲಿದ್ದ ಆರ್‌ಜೆಡಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಭ್ರಷ್ಟಾಚಾರ ನಡೆದಿದೆ. ಎನ್‌ಡಿಎ ನೇತೃತ್ವದ ಸರ್ಕಾರ ಈ ಕುರಿತು ತನಿಖೆ ನಡೆಸಲಿದೆ' ಎಂದು ನಿತೀಶ್ ಕುಮಾರ್ ಸದನದಲ್ಲಿ ಪ್ರಕಟಿಸಿದರು.

'ಅಲ್ಲದೆ, ಆರ್‌ಜೆಡಿ ಸರ್ಕಾರದ ಅವಧಿಯಲ್ಲಿ ಹಲವು ಕೋಮು ಗಲಭೆಗಳೂ ನಡೆದವು. ಕಾನೂನು ಸುವ್ಯವಸ್ಥೆಯು ಸುಸ್ಥಿತಿಯಲ್ಲಿ ಇರಲಿಲ್ಲ. ಈ ಬಗ್ಗೆಯೂ ತನಿಖೆ ನಡೆಯಲಿದೆ' ಎಂದು ಹೇಳಿದರು.

ತೇಜಸ್ವಿ ಯಾದವ್ ಟೀಕೆ: 'ನಿತೀಶ್ ಅವರನ್ನು ತಂದೆಯ ಸ್ಥಾನದಲ್ಲೇ ನೋಡುತ್ತಿದ್ದೆ. ಅವರು ಮತ್ತೆ ಎನ್‌ಡಿಎ ಜೊತೆ ಮೈತ್ರಿ ಹೊಂದಲು ಏನು ಕಾರಣವೊ ತಿಳಿದಿಲ್ಲ' ಎಂದು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಹೇಳಿದರು.



ಸೋಮವಾರ ವಿಧಾನಸಭೆಯಲ್ಲಿ ವಿಶ್ವಾಸಮತ ಗೆದ್ದ ಮುಖ್ಯಮಂತ್ರಿ ನಿತೀಶ್ ಕುಮಾರ್, ಸದನದಿಂದ ಹೊರಬಂದು ಬೆಂಬಲಿಗರತ್ತ ಕೈಬೀಸಿದರು —ಪಿಟಿಐ ಚಿತ್ರ

ಅವಿಶ್ವಾಸ: ಸ್ಪೀಕರ್ ಪದಚ್ಯುತಿ

ಪಟ್ನಾ (ಪಿಟಿಐ): ಬಿಹಾರ ವಿಧಾನಸಭೆ ಸ್ಪೀಕರ್, ಆರ್‌ಜೆಡಿ ನಾಯಕ ಅವಧ್ ಬಿಹಾರಿ ಚೌಧರಿ ಅವರ ಪದಚ್ಯುತಿಗಾಗಿ ಅವಿಶ್ವಾಸ ನಿರ್ಣಯವನ್ನು ವಿಧಾನಸಭೆಯಲ್ಲಿ ಅಂಗೀಕರಿಸಲಾಯಿತು.

ಆರ್‌ಜೆಡಿ ಅಧಿಕಾರ ಕಳೆದುಕೊಂಡಿದ್ದರೂ ಸ್ಪೀಕರ್ ಸ್ಥಾನಕ್ಕೆ ರಾಜೀನಾಮೆ ನೀಡಲು ಚೌಧರಿ ನಿರಾಕರಿಸಿದ್ದರು. ಹೀಗಾಗಿ, ಅವಿಶ್ವಾಸ ನಿರ್ಣಯ ಮಂಡಿಸಲಾಗಿತ್ತು. ಸದನದ 245 ಸದಸ್ಯರಲ್ಲಿ ಅವಿಶ್ವಾಸ ನಿರ್ಣಯದ ಪರ 125, ವಿರುದ್ಧವಾಗಿ 112 ಸದಸ್ಯರು ಮತ ಚಲಾಯಿಸಿದರು.

ಎನ್‌ಡಿಎ ಸಾಲಿನಲ್ಲಿ ಆರ್‌ಜೆಡಿ ಶಾಸಕರು

ಬಿಹಾರದಲ್ಲಿ ಮೈತ್ರಿ ಸರ್ಕಾರದಿಂದ ಹೊರಬಿದ್ದಿರುವ ಆರ್‌ಜೆಡಿಯ ಮೂವರು ಶಾಸಕರು, ಸೋಮವಾರ ಅಧಿವೇಶದನದಲ್ಲಿ ಆಡಳಿತ ಪಕ್ಷದ ಸಾಲಿನಲ್ಲಿ ಆಸೀನರಾಗಿದ್ದರು.

ಪಕ್ಷದ ಸದಸ್ಯರಾದ ಚೇತನ್ ಆನಂದ್, ನೀಲಂ ದೇವಿ ಮತ್ತು ಪ್ರಹ್ಲಾದ್ ಯಾದವ್ ಅವರ ಈ ನಡೆಗೆ ಪಕ್ಷದ ನಾಯಕ ತೇಜಸ್ವಿ ಯಾದವ್ ಆಕ್ಷೇಪಿಸಿದ್ದು, ಕ್ರಿಯಾಲೋಪವನ್ನು ಎತ್ತಿದರು.

ಆದರೆ, ಸ್ಪೀಕರ್ ಸ್ಥಾನದಲ್ಲಿದ್ದ ಉಪಾಧ್ಯಕ್ಷ ಮಹೇಶ್ವರ್ ಹಜಾರಿ ಈ ಸಂಬಂಧ ಯಾವುದೇ ರೂಲಿಂಗ್ ನೀಡಲಿಲ್ಲ.

ರಾಷ್ಟ್ರ ರಾಜಧಾನಿಯಲ್ಲಿ ಒಂದು ತಿಂಗಳು ನಿಷೇಧಾಜ್ಞೆ ಜಾರಿ

ನವದೆಹಲಿ: ರೈತ ಚಳವಳಿಗೆ ತಡೆಯೊಡ್ಡಲು ರಾಷ್ಟ್ರ ರಾಜಧಾನಿಯಲ್ಲಿ ಸಿಆರ್‌ಪಿಸಿ ಸೆಕ್ಷನ್ 144ರ ಅಡಿಯಲ್ಲಿ ಒಂದು ತಿಂಗಳ ಕಾಲ ನಿಷೇಧಾಜ್ಞೆ ಜಾರಿ ಮಾಡಲಾಗಿದೆ.

ಗುಂಪುಗೂಡುವಿಕೆ, ಮೆರವಣಿಗೆ ಅಥವಾ ರ‍್ಯಾಲಿಗೆ ಸಂಪೂರ್ಣ ನಿಷೇಧ ಹೇರಲಾಗಿದೆ. ಟ್ರ್ಯಾಕ್ಟರ್‌ಗಳ ಪ್ರವೇಶಕ್ಕೂ ನಿರ್ಬಂಧ ಜಾರಿ ಮಾಡಲಾಗಿದೆ.

ದೆಹಲಿ ಪೊಲೀಸ್ ಆಯುಕ್ತ ಸಂಜಯ್ ಅರೋರಾ ಅವರು ಈ ಆದೇಶ ಹೊರಡಿಸಿದ್ದಾರೆ. ಆದೇಶವು ಫೆ.12ರಿಂದಲೇ ಅನ್ವಯವಾಗಿ ಮಾರ್ಚ್ 12ರವರೆಗೂ ಜಾರಿಯಲ್ಲಿರಲಿದೆ.

ಇಟ್ಟಿಗೆ, ಕಲ್ಲು, ಆ್ಯಸಿಡ್ ಇತರ ಅಪಾಯಕಾರಿ ದ್ರವ, ಪೆಟ್ರೋಲ್, ಸೋಡಾ ನೀರು ಬಾಟಲಿ ಅಥವಾ ಮಾನವ ಜೀವಕ್ಕೆ ಅಪಾಯವನ್ನು ಉಂಟುಮಾಡುವ ಯಾವುದೇ ವಸ್ತುಗಳ ಸಂಗ್ರಹ ಮತ್ತು ರವಾನೆಗೆ ನಿಷೇಧ ಹೇರಲಾಗಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಉಪದೇಶ ಮಾಡಬೇಡಿ. ನೀವು ಏನು ಹೇಳಬೇಕೆಂದಿರುವಿರೋ ಹಾಗೆ ಬದುಕಿ ತೋರಿಸಿ.

–ಶಿವರಾಮ ಕಾರಂತ

ಉನ್ನತ ಶಿಕ್ಷಣದಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚಳ: ಸಕಾರಾತ್ಮಕ ಬೆಳವಣಿಗೆ

ಕೇಂದ್ರ ಸರ್ಕಾರವು 2021–22ನೇ ಸಾಲಿನ ಅಖಿಲ ಭಾರತ ಉನ್ನತ ಶಿಕ್ಷಣ ಸಮೀಕ್ಷೆಯ ವರದಿಯನ್ನು ಈಚೆಗೆ ಬಿಡುಗಡೆ ಮಾಡಿದೆ. ಇದರಲ್ಲಿ, ಕಳೆದ ಕೆಲವು ವರ್ಷಗಳಲ್ಲಿ ಉನ್ನತ ಶಿಕ್ಷಣ ವಲಯದಲ್ಲಿ ಆಗಿರುವ ಬೆಳವಣಿಗೆ ಹಾಗೂ ಅಭಿವೃದ್ಧಿ ಕುರಿತ ಸ್ವಾಗತಾರ್ಹವಾದ ಒಂದಿಷ್ಟು ಸಂಗತಿಗಳು ಇವೆ. ಉನ್ನತ ಶಿಕ್ಷಣ ನೀಡುವ ಸಂಸ್ಥೆಗಳ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳ ಆಗಿರುವುದನ್ನು, ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಕೋರ್ಸ್‌ಗಳಿಗೆ ಸೇರ್ಪಡೆ ಆಗುತ್ತಿರುವುದು ಹೆಚ್ಚಾಗಿರುವುದನ್ನು ಇದು ತೋರಿಸುತ್ತಿದೆ. 2014–15ರ ನಂತರದಲ್ಲಿ ದೇಶದಲ್ಲಿ ಹೊಸದಾಗಿ ಏಳು ಸಾವಿರ ಉನ್ನತ ಶಿಕ್ಷಣ ಸಂಸ್ಥೆಗಳು ಆರಂಭವಾಗಿವೆ, ವಿದ್ಯಾರ್ಥಿಗಳ ಸೇರ್ಪಡೆಯಲ್ಲಿನ ಹೆಚ್ಚಳವು ಶೇಕಡ 25ಕ್ಕಿಂತ ಜಾಸ್ತಿ ಇದೆ. 3.42 ಕೋಟಿ ಇದ್ದ ವಿದ್ಯಾರ್ಥಿಗಳ ಸಂಖ್ಯೆಯು 4.33 ಕೋಟಿಗೆ ತಲುಪಿದೆ. 2014–15ರ ನಂತರದಲ್ಲಿ ವಿದ್ಯಾರ್ಥಿನಿಯರು ಉನ್ನತ ಶಿಕ್ಷಣ ಕೋರ್ಸ್‌ಗಳಿಗೆ ಸೇರುವ ಪ್ರಮಾಣವು ಶೇ 32ರಷ್ಟು ಜಾಸ್ತಿ ಆಗಿದೆ. ಅಂದರೆ ಪುರುಷ ವಿದ್ಯಾರ್ಥಿಗಳ ಸೇರ್ಪಡೆಯಲ್ಲಿ ಆಗಿರುವ ಹೆಚ್ಚಳಕ್ಕಿಂತ, ಮಹಿಳಾ ವಿದ್ಯಾರ್ಥಿಗಳ ಸೇರ್ಪಡೆ ಪ್ರಮಾಣವು ಜಾಸ್ತಿ ಇದೆ. ಎಲ್ಲ ವಿಭಾಗಗಳಲ್ಲಿಯೂ ವಿದ್ಯಾರ್ಥಿನಿಯರ ಸೇರ್ಪಡೆಯಲ್ಲಿ ಬೆಳವಣಿಗೆ ಒಳ್ಳೆಯ ಮಟ್ಟದಲ್ಲಿದೆ. 2.12 ಲಕ್ಷ ಇರುವ ಪಿಎಚ್‌.ಡಿ ವಿದ್ಯಾರ್ಥಿಗಳ ಪೈಕಿ ಮಹಿಳೆಯರ ಪಾಲು 98 ಸಾವಿರಕ್ಕಿಂತ ಹೆಚ್ಚು. ಈಗ ಸ್ನಾತಕೋತ್ತರ ಹಂತದಲ್ಲಿ ಮಹಿಳೆಯರ ಸಂಖ್ಯೆಯು ಪುರುಷರ ಸಂಖ್ಯೆಗಿಂತ ಹೆಚ್ಚು. ಉನ್ನತ ಶಿಕ್ಷಣದ ವಿವಿಧ ಹಂತಗಳಲ್ಲಿ ಪದವಿ ಪಡೆದವರಲ್ಲಿ ಮಹಿಳೆಯರ ಪಾಲು ಶೇ 50.8ರಷ್ಟು.



ಶಿಕ್ಷಣದ ಗುಣಮಟ್ಟ ಸುಧಾರಣೆಯ ದಿಸೆಯಲ್ಲಿ, ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ನೇಮಕ ಮಾಡಿಕೊಳ್ಳಬೇಕು, ಮೂಲಸೌಕರ್ಯವನ್ನು ಹೆಚ್ಚಿಸಬೇಕು

ಸಮೀಕ್ಷೆಯ ಮೂಲಕ ಸಂಗ್ರಹಿಸಿರುವ ದತ್ತಾಂಶಗಳು ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದ ನೀತಿಗಳನ್ನು ರೂಪಿಸಲು ಹಾಗೂ ಅವುಗಳನ್ನು ಅನುಷ್ಠಾನಕ್ಕೆ ತರಲು ಸಹಾಯಕ. ವಿಶ್ವದಲ್ಲಿ ಅತ್ಯಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ದೇಶ ಭಾರತ. ಜನಸಂಖ್ಯೆಯನ್ನು ಅಭಿವೃದ್ಧಿ ಸಾಧಿಸಲು ಪ್ರಮುಖ ಉಪಕರಣವನ್ನಾಗಿ ಬಳಕೆ ಮಾಡಿಕೊಳ್ಳಬೇಕು ಎಂಬುದು ಒಪ್ಪಿತ ಸಂಗತಿ. ಯುವಜನರ ಶಿಕ್ಷಣದ ಮಟ್ಟವನ್ನು ಹೆಚ್ಚು ಮಾಡುವುದು ಅಗತ್ಯ. ಹಾಗೆ ಮಾಡಿದಾಗ, ದೇಶದ ಅರ್ಥ ವ್ಯವಸ್ಥೆಯ ಬೇರೆ ಬೇರೆ ವಲಯಗಳಲ್ಲಿ ಅವರನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಆಗುತ್ತದೆ. ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕೆ ದಾಖಲಾಗುವ ಪ್ರಮಾಣವು (ಜಿಇಆರ್) ಶೇಕಡ 28.4ರಷ್ಟು ಇದೆ. ಇದನ್ನು ಇನ್ನಷ್ಟು ಸುಧಾರಿಸಲು ಅವಕಾಶ ಇದೆ. ಕರ್ನಾಟಕದಲ್ಲಿ ಈ ಪ್ರಮಾಣವು ಶೇ 36.2ರಷ್ಟು ಇದೆ. ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ ತುಸು ಹೆಚ್ಚು. ಹೀಗಿದ್ದರೂ, ತಮಿಳುನಾಡಿನಲ್ಲಿ ದಾಖಲಾಗಿರುವ ಶೇ 47ರ ಮಟ್ಟಕ್ಕಿಂತ ಕಡಿಮೆ.

ಈ ಸಮೀಕ್ಷೆಯಲ್ಲಿ ಕೆಲವು ಕಳವಳಗಳನ್ನು ಕೂಡ ಪ್ರಸ್ತಾಪಿಸಲಾಗಿದೆ. ಏಳು ವರ್ಷಗಳ ಹಿಂದೆ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಸಂಸ್ಥೆಗಳ ಸಂಖ್ಯೆಯು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಸಂಖ್ಯೆಗಿಂತ ಕಡಿಮೆ ಇತ್ತು. ಆದರೆ ಈಗ ಅವುಗಳ ಸಂಖ್ಯೆಯಲ್ಲಿನ ಹೆಚ್ಚಳದ ಪ್ರಮಾಣವು ಶೇ 81ರಷ್ಟು. ಇದೇ ಅವಧಿಯಲ್ಲಿ ಸರ್ಕಾರಿ ಸಂಸ್ಥೆಗಳ ಸಂಖ್ಯೆಯಲ್ಲಿನ ಹೆಚ್ಚಳವು ಶೇ 53ರಷ್ಟು ಮಾತ್ರ. ಖಾಸಗಿ ಸಂಸ್ಥೆಗಳ ಶುಲ್ಕ ಹಾಗೂ ಇತರ ವೆಚ್ಚಗಳು ಸರ್ಕಾರಿ ಸಂಸ್ಥೆಗಳಲ್ಲಿನ ವೆಚ್ಚಗಳಿಗಿಂತ ಹೆಚ್ಚಿರುತ್ತವೆ. ಇದರಿಂದಾಗಿ, ದುರ್ಬಲ ವರ್ಗಗಳಿಗೆ ಸೇರಿದವರಿಗೆ ಈ ಸಂಸ್ಥೆಗಳನ್ನು ಸೇರುವುದು ಕಷ್ಟಸಾಧ್ಯ. ಉನ್ನತ ಶಿಕ್ಷಣ ಕ್ಷೇತ್ರದಿಂದ ಸರ್ಕಾರವು ಹಿಂದೆ ಸರಿಯಬಾರದು. ಅದರ ಬದಲಿಗೆ, ಸರ್ಕಾರವು ಇಲ್ಲಿ ತನ್ನ ಇರುವಿಕೆಯನ್ನು ಇನ್ನಷ್ಟು ಹೆಚ್ಚು ಮಾಡಬೇಕು. ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕರ ನೇಮಕವು ಅಗತ್ಯ ಅನುಸಾರ ಆಗುತ್ತಿಲ್ಲ. ಇದು ಕೂಡ ಕಳವಳ ಮೂಡಿಸುವಂಥದ್ದು. ಬೋಧಕ–ವಿದ್ಯಾರ್ಥಿ ಅನುಪಾತ ಕುಸಿದಲ್ಲಿ ಶಿಕ್ಷಣದ ಗುಣಮಟ್ಟ ಕೂಡ ಇಳಿಕೆ ಕಾಣುತ್ತದೆ. ಬೋಧಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ನೇಮಕ ಮಾಡಿಕೊಳ್ಳಬೇಕು, ಮೂಲಸೌಕರ್ಯವನ್ನು ಹೆಚ್ಚಿಸಬೇಕು. ಆಗ ಶಿಕ್ಷಣದ ಗುಣಮಟ್ಟವು ಸುಧಾರಿಸುತ್ತದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಅಗತ್ಯಗಳಿಗೆ ಅನುಗುಣವಾಗಿ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಇತರ ವೃತ್ತಿಪರ ಕೋರ್ಸ್‌ಗಳಿಗೆ ಹೆಚ್ಚಿನ ಉತ್ತೇಜನ ನೀಡುವ ಅಗತ್ಯ ಇದೆ ಎಂಬುದನ್ನು ಸಮೀಕ್ಷೆಯು ಹೇಳಿದೆ.

ದಿನದ ಟ್ವೀಟ್


ಬೇಕಾಗಿದೆ ಬದಲಾವಣೆ



ಇತ್ತೀಚಿನ ಬೆಳವಣಿಗೆಗಳನ್ನು ಗಮನಿಸಿದರೆ, ಭಾರತವು ವಿಜ್ಞಾನ ಮತ್ತು ದತ್ತಾಂಶದ ಮಾರ್ಗದಿಂದ ಘೋಷಣೆಗಳು ಹಾಗೂ ಬ್ಯಾನರ್‌ಗಳ ಹಾದಿಯಲ್ಲಿ ಸಾಗುತ್ತಿದೆಯೇನೊ ಎಂಬ ಆತಂಕ ಕಾಡುತ್ತದೆ. ಇತಿಹಾಸದಲ್ಲಿ ಕಾಣಸಿಗುವ ಹಲವು ಉದಾಹರಣೆಗಳ ಹಿನ್ನೆಲೆಯಲ್ಲಿ ಹೇಳುವುದಾದರೆ, ಇದು ದೀರ್ಘಾವಧಿಯಲ್ಲಿ ದೇಶದ ಆರ್ಥಿಕತೆಗೆ ಅತಿ ದೊಡ್ಡ ಹಾನಿಯನ್ನು ಉಂಟುಮಾಡುತ್ತದೆ. ಜನಸಾಮಾನ್ಯರು ಇದನ್ನು ಅರಿತು ಬದಲಾವಣೆಗೆ ಆಗ್ರಹಿಸುವುದರ ಮೇಲೆ ನಮ್ಮ ಭರವಸೆ ನಿಂತಿದೆ.

ಕೌಶಿಕ್ ಬಸು, ಅರ್ಥಶಾಸ್ತ್ರಜ್ಞ

ಕಿಡಿನುಡಿ



ಅದಾನಿ ಕಂಪನಿಯ ಒಬ್ಬ ಉದ್ಯೋಗಿಯು ಕೆಲಸವನ್ನು ತೊರೆದರೆ, ಮೂರು ತಿಂಗಳ ಕಾಲ ಆತ ಅಂಬಾನಿ ಕಾರ್ಪೊರೇಷನ್ ಅನ್ನು ಸೇರಲು ಸಾಧ್ಯವಿಲ್ಲ. ಆದರೆ, ಸೂರ್ಯಾಸ್ತಕ್ಕೆ ಮುನ್ನ ಕಾಂಗ್ರೆಸ್‌ನ ರಾಜಕಾರಣಿಯಾಗಿದ್ದ ವ್ಯಕ್ತಿಯೊಬ್ಬ ಸೂರ್ಯೋದಯ ಆಗುವಷ್ಟರಲ್ಲಿ 'ಬಿಜೆಪಿ ನಾಯಕ'ನಾಗಿ ನಿದ್ದೆಯಿಂದ ಏಳಬಹುದು...

ಕುನಾಲ್ ಕಮ್ರಾ, ಕಮಿಡಿಯನ್

25 ವರ್ಷಗಳ ಹಿಂದೆ

ಶನಿವಾರ, 13-2-1999

● **ಬಿಹಾರದ ರಾಬ್ಡಿದೇವಿ ಸರ್ಕಾರ ವಜಾ**

ನವದೆಹಲಿ, ಫೆ. 12 (ಯುಎನ್‌ಐ, ಪಿಟಿಐ)– ಬಿಹಾರ ರಾಜ್ಯದ ರಾಬ್ಡಿದೇವಿ ನೇತೃತ್ವದ ಸರ್ಕಾರವನ್ನು ಇಂದು ರಾತ್ರಿ ವಜಾ ಮಾಡಿ ಅಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಜಾರಿ ಮಾಡಲಾಗಿದೆ. 325 ಸದಸ್ಯ ಬಲದ ವಿಧಾನ-ಸಭೆಯನ್ನು ಅಮಾನತಿನಲ್ಲಿ ಇಡಲಾಗಿದೆ.

ನಿನ್ನೆಯಷ್ಟೇ ಜೆಹನಾಬಾದ್ ಜಿಲ್ಲೆಯಲ್ಲಿ ರಣವೀರಸೇನೆ ಪಡೆ 12 ಮಂದಿ ದಲಿತರನ್ನು ಕಗ್ಗೊಲೆ ಮಾಡಿ ಇಡೀ ಬಿಹಾರ ತಲ್ಲಣಗೊಳ್ಳುವಂತೆ ಮಾಡಿತ್ತು. ಕಳೆದ 15 ದಿನಗಳಲ್ಲಿ ಇದು ಎರಡನೇ ಹತ್ಯಾಕಾಂಡವಾಗಿದ್ದು, ಒಟ್ಟು 34 ಮಂದಿ ದಲಿತರ ಬರ್ಬರ ಹತ್ಯೆಯಾಗಿತ್ತು. ಈ ಘಟನೆಯು ಹದಿನೆಂಟು ತಿಂಗಳ ರಾಷ್ಟ್ರೀಯ ಜನತಾದಳ ನೇತೃತ್ವದ ಸರ್ಕಾರದ ವಜಾಕ್ಕೆ ಕಾರಣವಾಯಿತು.

ಗೃಹ ಸಚಿವ ಎಲ್‌.ಕೆ.ಅಡ್ವಾಣಿ ಅವರ ಅಧ್ಯಕ್ಷತೆಯಲ್ಲಿ ಕೇಂದ್ರ ಸಂಪುಟದ ಸಭೆ ಸೇರಿ, ಬಿಹಾರದಲ್ಲಿ ಕಾನೂನು ಸ್ಥಿತಿ ಕುಸಿದಿರುವ ಹಿನ್ನೆಲೆಯಲ್ಲಿ ರಾಷ್ಟ್ರಪತಿ ಆಳ್ವಿಕೆಗೆ ಶಿಫಾರಸು ಮಾಡಲು ನಿರ್ಧಾರ ಕೈಗೊಂಡಿತ್ತು.

● **ಬಿಲ್ ಕ್ಲಿಂಟನ್ ದೋಷಮುಕ್ತ**

ವಾಷಿಂಗ್ಟನ್, ಫೆ. 12 (ಎಎಫ್‌ಪಿ)– ಅಮೆರಿಕ ಅಧ್ಯಕ್ಷ ಬಿಲ್ ಕ್ಲಿಂಟನ್ ಅವರನ್ನು ಮೋನಿಕಾ ಲೆವಿನ್‌ಸ್ಕಿ ಲೈಂಗಿಕ ಹಗರಣದಲ್ಲಿ ಇಂದು ಅಮೆರಿಕ ಸೆನೆಟ್ ದೋಷಾರೋಪದಿಂದ ಮುಕ್ತಗೊಳಿಸಿತು. ಈ ಮೂಲಕ ಕ್ಲಿಂಟನ್ ಅಧ್ಯಕ್ಷ ಪದವಿ ಉಳಿಸಿಕೊಂಡಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 13-2-1974

● **ಫೋನಿನಲ್ಲೇ ಇ.ಸಿ.ಜಿ. ಮಾಹಿತಿ**

ನವದೆಹಲಿ, ಫೆ. 12– ರೋಗಿಯ ಹೃದಯದ ಕಂಪನವನ್ನು (ಇ.ಸಿ.ಜಿ.) ಟೆಲಿಫೋನ್ ಮುಖಾಂತರ ದೂರದಲ್ಲಿರುವ ಡಾಕ್ಟರುಗಳಿಗೆ ಕಳುಹಿಸಿಕೊಡುವ ಸಾಧನ ಒಂದನ್ನು ಕಾನ್ಪುರದಲ್ಲಿರುವ ಭಾರತೀಯ ತಾಂತ್ರಿಕ ಸಂಸ್ಥೆಯ ಎಂಜಿನಿಯರುಗಳು ರೂಪಿಸಿದ್ದಾರೆ.

ಸುಲಭವಾಗಿ ಗುರುತಿಸುವ ಸಂಕೇತಗಳಾಗಿ ಮಾರ್ಪಡಿಸಲ್ಪಡುವ ಹೃದ್ರೋಗಿಯ ಕಂಪನಗಳನ್ನು ಸರ್ವೇ ಸಾಮಾನ್ಯವಾದ ಟೆಲಿಫೋನ್ ತಂತಿಯ ಮೂಲಕವೇ ಡಾಕ್ಟರುಗಳಿಗೆ ವರದಿ ಮಾಡಲಾಗುವುದು.

ಮತ್ತೊಂದು ಕೊನೆಯಲ್ಲಿ ಡಾಕ್ಟರುಗಳು ಬಳಸುವ ಇನ್ನೊಂದು ಸಾಧನವು ಶಬ್ದವನ್ನು ಇ.ಸಿ.ಜಿ. ಸಂಕೇತಗಳಾಗಿ ಮಾರ್ಪಡಿಸಲು ಸಹಾಯ ಮಾಡುವುದು.

ಇದರಿಂದ ಡಾಕ್ಟರುಗಳು ರೋಗಿ ಇದ್ದ ಕಡೆ ಧಾವಿಸುವುದಕ್ಕೆ ಬದಲಾಗಿ ಇದ್ದ ಸ್ಥಳದಲ್ಲೇ ತೆರೆಯ ಮೇಲೆ ಹೃದಯದ ಕಂಪನಗಳನ್ನು (ಇ.ಸಿ.ಜಿ.) ವೀಕ್ಷಿಸಬಹುದು.

● **ಜನರ ಸಹಕಾರದಿಂದ ಬೆಲೆ ಏರಿಕೆ ತಡೆ ಸಾಧ್ಯ: ಪ್ರಧಾನಿ ವಿಶ್ವಾಸ**

ಹಾಲ್‌ದ್ವಾನಿ (ನೈನಿತಾಲ್), ಫೆ. 12– ಬೆಲೆ ಏರಿಕೆ ತಡೆಯುವುದಕ್ಕೆ ತಮ್ಮ ಸರ್ಕಾರ ಬದ್ಧವಾಗಿದೆ ಎಂದು ಪ್ರಧಾನಿ ಇಂದಿರಾ ಗಾಂಧಿ ಅವರು ಇಂದು ಹೇಳಿದರು. 'ಜನರ ಸಹಕಾರದೊಂದಿಗೆ ಅದು ಸಾಧ್ಯವಿದೆ' ಎಂದೂ ಅವರು ಸ್ಪಷ್ಟಪಡಿಸಿದರು.

ಹಣದುಬ್ಬರವು ವಿಶ್ವ ವಿದ್ಯಮಾನ. ಆದರೆ ಬಾಂಗ್ಲಾ ಬಿಕ್ಕಟ್ಟು, ಬೆಳೆ ಆಗದಿರುವುದು, ಬೇಜವಾಬ್ದಾರಿ ವರ್ತಕರ ಸಮಾಜ ವಿರೋಧಿ ಚಟುವಟಿಕೆಗಳು ಮುಂತಾದ ಕಾರಣಗಳಿಂದಾಗಿ ಭಾರತದಲ್ಲಿ ಹಣದುಬ್ಬರವು ಉಲ್ಬಣಿಸಿತು ಎಂದು ಅವರು ಉತ್ತರಪ್ರದೇಶದ ಚುನಾವಣಾ ಪ್ರಚಾರ ಸಭೆಯಲ್ಲಿ ಹೇಳಿದರು.

ವನ್ಯಜೀವಿ ಸಂರಕ್ಷಣೆ ಎಂಬ ಸವಾಲಿಗೆ ಸ್ವಯಂಪ್ರೇರಿತ ಪುನರ್ವಸತಿಯ ಜವಾಬು!

ಕಾನು ಕಾಯಲು ಗೆಲ್ಲು– ಗೆಲ್ಲಿಸು ಸೂತ್ರ



ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಒಂದು ಕುಟುಂಬ ಕಾಡಿನಲ್ಲಿ ವಾಸಿಸುತ್ತಿದೆ ಎಂದಾಕ್ಷಣ ಆ ಕುಟುಂಬಕ್ಕೆ ಮೂಲಸೌಕರ್ಯ ಒದಗಿಸುವುದನ್ನು ನಿರಾಕರಿಸಲಾಗುವುದಿಲ್ಲ ಎಂದು ಮಹಾತ್ಮ ಗಾಂಧಿ ಹೇಳಿದ್ದರು. ಒಂದು ದೇಶದ ಹಿರಿಮೆ ಮತ್ತು ಅದರ ನೈತಿಕತೆಯು ಆ ದೇಶ ತನ್ನ ವನ್ಯಜೀವಿಗಳನ್ನು ಹೇಗೆ ನಡೆಸಿಕೊಳ್ಳುತ್ತದೆ ಎಂಬುದರ ಮೇಲೆ ಅವಲಂಬಿತವಾಗಿದೆ ಎಂದು ಸಹ ಅವರು ಪ್ರತಿಪಾದಿಸಿದ್ದರು. ಅವರ ಈ ಎರಡೂ ಮಹತ್ವದ ಹೇಳಿಕೆಗಳು ಸಾರ್ವಕಾಲಿಕವಾಗಿ ಮನ್ನಣೆ ಪಡೆಯುವಂತಹವು.

ವನ್ಯಜೀವಿ ಸಂರಕ್ಷಣಾ ತಾಣಗಳು, ಅಭಯಾರಣ್ಯಗಳು, ಹುಲಿ ಸಂರಕ್ಷಿತ ತಾಣಗಳನ್ನು ರಾಷ್ಟ್ರೀಯ ಸಂಪತ್ತು ಎಂದು ಪರಿಗಣಿಸಲಾಗುತ್ತದೆ. ಈ ಪ್ರದೇಶಗಳಿಂದ ಲಭ್ಯವಾಗುವ ಹಾಗೂ ಹಣದಿಂದ ಬೆಲೆ ಕಟ್ಟಲಾಗದ ನೈಸರ್ಗಿಕ ಸಂಪತ್ತಿನ ಮೇಲೆ ದೇಶದ ಪ್ರತಿ ಪ್ರಜೆಗೂ ಹಕ್ಕಿದೆ. ಬಂಡೀಪುರ, ನಾಗರಹೊಳೆ ಅಭಯಾರಣ್ಯಗಳು ಆರೋಗ್ಯಕರವಾಗಿ ಇರುವುದರಿಂದಲೇ ಬೆಂಗಳೂರು ಇಂದು ವಾಸಯೋಗ್ಯ ಸ್ಥಳವಾಗಿದೆ.

ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ವರದಿಯ ಪ್ರಕಾರ, ಅಭಯಾರಣ್ಯದ ಒಂದು ಎಕರೆ ಅರಣ್ಯದಿಂದ ಸಿಗುವ ನೈಸರ್ಗಿಕ ಸೇವೆಯನ್ನು ಆರ್ಥಿಕ ನೆಲೆಯಲ್ಲಿ ಲೆಕ್ಕಾಚಾರ ಹಾಕಿದಾಗ ಸಿಗುವ ಮೊತ್ತವು ವರ್ಷಕ್ಕೆ ಒಂಬತ್ತು ಲಕ್ಷ ರೂಪಾಯಿಯಾಗುತ್ತದೆ. ಅಂದರೆ ಇದು, ಅಭಯಾರಣ್ಯಗಳ ಮಹತ್ವವನ್ನು ಎತ್ತಿ ತೋರುವ ಸಂಗತಿಯಾಗಿದೆ. ದೇಶದಲ್ಲಿ ಹಾಲಿ ಇರುವ 140 ಕೋಟಿ ಜನಸಂಖ್ಯೆಯು ಸಂರಕ್ಷಿತಗೊಂಡ ವನ್ಯಜೀವಿ ತಾಣಗಳಿಂದ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಉಪಕೃತವಾಗಿಯೇ ಬದುಕುತ್ತಿದೆ. ಮುಂದಿನ ಪೀಳಿಗೆಯವರಿಗೂ ಇಂತಹ ಪ್ರದೇಶಗಳನ್ನು ಉಳಿಸಬೇಕಾಗಿದೆ. ಸರ್ಕಾರಗಳು ಈ ಸೂಕ್ಷ್ಮ ಸಂಗತಿಯನ್ನು ಅರ್ಥಮಾಡಿಕೊಳ್ಳಬೇಕಿದೆ.

ಪಶ್ಚಿಮಘಟ್ಟದ ತಪ್ಪಲಿನಲ್ಲಿರುವ ಅಭಯಾರಣ್ಯದ ಸೂಕ್ಷ್ಮ ಪ್ರದೇಶದಲ್ಲಿ ಒಂದು ಚಿಕ್ಕ ಹಳ್ಳಿಯಿದೆ. ಅಲ್ಲಿ ಜನಿಸುವ ಮಕ್ಕಳು ಶಿಕ್ಷಣ ಪಡೆಯಬೇಕೆಂದರೆ, ಬೆಳಿಗ್ಗೆ ಐದು ಗಂಟೆಗೆ ಹೊರಟು, ಎಂಟು ಕಿಲೊ ಮೀಟರ್ ಕಾಡಹಾದಿಯಲ್ಲಿ ನಡೆದುಕೊಂಡು ಹತ್ತು ಗಂಟೆಗೆ ಶಾಲೆ ತಲುಪಬೇಕು. ಮಳೆಗಾಲದಲ್ಲಿ ಯಾರಿಗಾದರೂ ಆರೋಗ್ಯದಲ್ಲಿ ಏರುಪೇರಾದಲ್ಲಿ ನಾಲ್ಕು ಜನ ಸೇರಿಕೊಂಡು ಅವರನ್ನು ಹೊತ್ತು ತರಬೇಕಾದ ಚಿಂತಾಜನಕ ಸ್ಥಿತಿಯಿದೆ. ಅಭಯಾರಣ್ಯದ ಈ ಪ್ರದೇಶದಲ್ಲಿ ಯಾವುದೇ ಮೂಲ ಸೌಕರ್ಯಗಳು ಲಭ್ಯವಿಲ್ಲ. ವನ್ಯಜೀವಿ ಸಂರಕ್ಷಣಾ ಕಾನೂನುಗಳು ಅವರಿಗೆ ಮೂಲಸೌಕರ್ಯ ಒದಗಿಸಲು ಅವಕಾಶ ಮಾಡಿಕೊಡುತ್ತಿಲ್ಲ. ಕಾನೂನಿನ ಎಲ್ಲಾ ಅಡ್ಡಿ ಆತಂಕಗಳನ್ನು ನಿವಾರಿಸಿಕೊಂಡು ಆ ಕುಟುಂಬಗಳಿಗೆ ಸೌಕರ್ಯ ಒದಗಿಸಲು ದೊಡ್ಡ ಮೊತ್ತದ ಹಣ ಬೇಕಾಗುತ್ತದೆ. ಹೊರ ಪ್ರಪಂಚಕ್ಕೆ ಆಪ್ಯಾಯಮಾನವಾಗಿ ತೋರುವ ಅಭಯಾರಣ್ಯದ ಇಂತಹ ಪ್ರದೇಶಗಳು ಅಲ್ಲಿ ವಾಸಿಸುವವರಿಗೆ ಅಕ್ಷರಶಃ ನರಕಸದೃಶವಾಗಿವೆ.

ಅಭಯಾರಣ್ಯ ಘೋಷಣೆಯಾಗುವುದಕ್ಕೂ ಮುನ್ನ ಶರಾವತಿ ಮುಳುಗಡೆಯಿಂದ ಸಂತ್ರಸ್ತವಾದ ಈ ಕುಟುಂಬಗಳು ಇಲ್ಲಿ ಬದುಕನ್ನು ಕಟ್ಟಿಕೊಳ್ಳುವ ಪ್ರಯತ್ನ ಮಾಡಿದವು. ಆದರೆ, ಅನೇಕ ಕುಟುಂಬಗಳು ಇಂದಿಗೂ ಕಣ್ಣೀರಿನಲ್ಲಿ ಕೈತೊಳೆಯುತ್ತಿವೆ. 'ಶಾಲೆ, ಆಸ್ಪತ್ರೆಯಂತಹ ಸೌಕರ್ಯಗಳು ಇರುವ ಸಮಾಜದಲ್ಲಿ ಬದುಕುವ ಅವಕಾಶ ಮಾಡಿಕೊಡಿ. ನಮ್ಮನ್ನು ಈ ಕಾನುಕೂಪದಿಂದ ಮೇಲೆತ್ತಿ' ಎಂಬುದು ಆ ಕುಟುಂಬಗಳ ಲಾಗಾಯ್ತಿನ ಬೇಡಿಕೆಯಾಗಿದೆ. 'ಸ್ವಯಂಪ್ರೇರಿತವಾಗಿ ನಾವು ಅಭಯಾರಣ್ಯವನ್ನು ತ್ಯಜಿಸಲು ಸಿದ್ಧರಿದ್ದೇವೆ. ನಮಗೆ ತಕ್ಕುದಾದ ಪರಿಹಾರವನ್ನು ಕೊಡಿ' ಎಂದು ಒಕ್ಕೊರಲಿನಿಂದ ಕೂಗುತ್ತಿದ್ದಾರೆ. ಇಂತಹ ನತದೃಷ್ಟ ಕುಟುಂಬಗಳನ್ನು ಸಮಾಜದ ಮುಖ್ಯವಾಹಿನಿಗೆ ಕರೆತರುವ ಕೆಲಸವನ್ನು ಸರ್ಕಾರಗಳು ಮಾಡಬೇಕಿದೆ.

ಅರಣ್ಯ ಪ್ರದೇಶಗಳನ್ನು ಅರಣ್ಯೇತರ ಚಟುವಟಿಕೆಗಳಿಗೆ ಬಳಸಿಕೊಳ್ಳುವ ಅನಿವಾರ್ಯ ಸಂದರ್ಭ ಬಂದಾಗ, ಅದಕ್ಕಾಗಿ ಬದಲಿ ಅರಣ್ಯವನ್ನು ರೂಪಿಸುವ ನಿಯಮಗಳು ಕೇಂದ್ರ ಅರಣ್ಯ, ಪರಿಸರ ಹಾಗೂ ಹವಾಮಾನ ಬದಲಾವಣೆ ಇಲಾಖೆಯ ಬಳಿ ಇವೆ. ಬದಲಿ ಅರಣ್ಯ ರೂಪಿಸುವ ಸಲುವಾಗಿ ಪರಿಹಾರ ಅರಣ್ಯೀಕರಣ ನಿಧಿ (ಕಾಂಪಾ) ಅಡಿಯಲ್ಲಿ ಬಹಳಷ್ಟು ಅನುದಾನ ಲಭ್ಯವಿದೆ. ಈ ಪೈಕಿ ಶೇ 80ರಷ್ಟು ಮೊತ್ತವನ್ನು ಸ್ವಯಂಪ್ರೇರಿತ ಪುನರ್ವಸತಿಗಾಗಿ ಬಳಸಬಹುದಾಗಿದೆ. ಅದನ್ನು ಬಳಸಿಕೊಂಡು, ಅಭಯಾರಣ್ಯದಲ್ಲಿ ಸೌಕರ್ಯ ವಂಚಿತವಾಗಿ ಬದುಕುತ್ತಿರುವ ಕುಟುಂಬಗಳಿಗೆ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಲು ಇದು ಸಕಾಲ.


ಮನುಷ್ಯನು ನೆಮ್ಮದಿಯಾಗಿ ಮತ್ತು ಸಮೃದ್ಧವಾಗಿ ಬದುಕಲು ಕಾಡು, ನದಿ, ಜೀವಿವೈವಿಧ್ಯಗಳ ರಕ್ಷಣೆ ಮುಖ್ಯ ಎಂದು ಸಾರಿದ ಕುವೆಂಪು, ಶಿವರಾಮ ಕಾರಂತ, ಪೂರ್ಣಚಂದ್ರ ತೇಜಸ್ವಿ ಅವರು ಬಾಳಿ ಬದುಕಿದ ಹೆಮ್ಮೆಯ ಕರುನಾಡು ನಮ್ಮದು. ಸ್ವಾತಂತ್ರ್ಯೋತ್ತರ ಭಾರತವನ್ನು ಮುನ್ನಡೆಸಿದ ಕೇಂದ್ರದಲ್ಲಿನ ವಿವಿಧ ಪಕ್ಷಗಳ ನೇತೃತ್ವದ ಸರ್ಕಾರಗಳೂ ಪರಿಸರ ಸಂರಕ್ಷಣೆಗಾಗಿ ಅನೇಕ ಕಾಯ್ದೆ, ಕಾನೂನು ಮತ್ತು ಅವಕಾಶಗಳನ್ನು ರೂಪಿಸಿವೆ. ವನ್ಯಜೀವಿ ನೆಲೆಗಳಲ್ಲಿ ಕಡುಕಷ್ಟದಿಂದ ಬದುಕುವ ಕುಟುಂಬಗಳಿಗೆ ಪರ್ಯಾಯ ಮತ್ತು ಆರೋಗ್ಯಕರ ಬದುಕನ್ನು ಕಟ್ಟಿಕೊಡಲು ಸ್ವಯಂಸೇವಾ ಸಂಸ್ಥೆಗಳಿಗೂ ಅವಕಾಶಗಳಿವೆ. ಅಭಯಾರಣ್ಯದಲ್ಲಿರುವ ಕೃಷಿ ಕುಟುಂಬಗಳ ಜಮೀನುಗಳನ್ನು ಖರೀದಿಸಿ ಅರಣ್ಯ ಇಲಾಖೆಗೆ ಹಸ್ತಾಂತರಿಸುವುದು ಅದರಲ್ಲಿ ಒಂದು ಭಾಗ. ಸರ್ಕಾರದ ವಶದಲ್ಲಿರುವ 'ಸಿ' ಮತ್ತು 'ಡಿ' ದರ್ಜೆಯ ಭೂಮಿಯನ್ನು, ಸ್ವಯಂಪ್ರೇರಿತವಾಗಿ ನಾಗರಿಕ ಸಮಾಜವನ್ನು ಸೇರ ಬಯಸುವ ಕುಟುಂಬಗಳಿಗೆ ನೀಡುವುದು ಇನ್ನೊಂದು ಭಾಗ. ಈ ಬಗೆಯ ಅನೇಕ ಸಾಧ್ಯತೆಗಳನ್ನು ಬಳಸಿಕೊಂಡ ಪಕ್ಕದ ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶ ಸರ್ಕಾರಗಳು ಮನುಷ್ಯ ಹಾಗೂ ವನ್ಯಜೀವಿ ಎರಡೂ ನೆಲೆಯಲ್ಲಿ ಗೆಲುವು ತಂದುಕೊಡುವಲ್ಲಿ ಯಶಸ್ಸು ಕಂಡಿವೆ.

ಭದ್ರಾ, ನಾಗರಹೊಳೆ ಹಾಗೂ ಕಾಳಿ ಅಭಯಾರಣ್ಯಗಳಲ್ಲಿ ಬಹು ಯಶಸ್ವಿಯಾಗಿ ಸ್ವಯಂಪ್ರೇರಿತ ಪುನರ್ವಸತಿ ಕಲ್ಪಿಸಿದ ಸಿದ್ಧ ಮಾದರಿ ನಮ್ಮ ಮುಂದಿದೆ. ಭದ್ರಾ ಅಭಯಾರಣ್ಯದ ಉದಾಹರಣೆಯನ್ನು ನೀಡುವುದಾದರೆ, ಸ್ವಯಂಪ್ರೇರಿತವಾಗಿ ಪುನರ್ವಸತಿಗೊಂಡ 500ಕ್ಕೂ ಹೆಚ್ಚು ಕುಟುಂಬಗಳು ಇಂದು ಸಮಾಜದ ಮುಖ್ಯವಾಹಿನಿಯಲ್ಲಿ ಬೆರೆತಿವೆ. ಅವುಗಳ ಸಾಮಾಜಿಕ ಸ್ಥಿತಿ ಹಾಗೂ ಆರ್ಥಿಕ ಮಟ್ಟ ಉತ್ತಮವಾಗಿದೆ. ಹಾಗೆಯೇ ಪುನರ್ವಸತಿಗಿಂತ ಪೂರ್ವದಲ್ಲಿ ಅಲ್ಲಿ ಏಳು ಹುಲಿಗಳಿದ್ದವು, ಇಪ್ಪತ್ತು ವರ್ಷಗಳ ನಂತರದಲ್ಲಿ ಅವುಗಳ ಸಂಖ್ಯೆ ಮೂವತ್ತಕ್ಕೇರಿದೆ. ಇಂತಹ ವಿನ್‌-ವಿನ್ ಮಾದರಿಗಳನ್ನು ರಾಜ್ಯ ಸರ್ಕಾರಗಳು ಹಾಗೂ ಜನಪ್ರತಿನಿಧಿಗಳು ಗಮನಿಸಿ ಮುನ್ನೆಲೆಗೆ ತರಬೇಕು.

ಸ್ವಯಂಪ್ರೇರಿತವಾಗಿ ಹೊರಬರಲು ಇಚ್ಛಿಸಿರುವ ಕುಟುಂಬಗಳನ್ನು ಸ್ಥಳಾಂತರಿಸಲು ಏಕೆ ಸಾಧ್ಯವಾಗುತ್ತಿಲ್ಲ? ಆ ಕುಟುಂಬಗಳು ಇನ್ನೂ ಎಷ್ಟು ತಲೆಮಾರಿನವರೆಗೆ ತಮ್ಮದಲ್ಲದ ತಪ್ಪಿಗೆ ಸವಲತ್ತುಗಳಿಂದ ವಂಚಿತವಾಗಿ ಬದುಕಬೇಕು? ಎಲ್ಲ ರಕ್ಷಿತಾರಣ್ಯಗಳಲ್ಲೂ ಅಲ್ಲಲ್ಲಿ ಚದುರಿದಂತೆ ಕೆಲವು ಕುಟುಂಬಗಳು ವಾಸಿಸುತ್ತಿವೆ. ಮಲೆನಾಡಿನ ರಕ್ಷಿತಾರಣ್ಯಗಳಲ್ಲಿ ಒಂದೊಂದು ಮನೆಗೂ ಒಂದೊಂದು ಊರಿನ ಹೆಸರಿದೆ. ಇಂತಹ ಭಾಗಗಳಲ್ಲಿ ಅವರಿದ್ದಲ್ಲಿಗೇ ಎಲ್ಲಾ ಮೂಲ ಸೌಕರ್ಯಗಳನ್ನು ನೀಡಲು ಸರ್ಕಾರ ಮುಂದಾದರೆ, ಕಾಡಿಗೂ ನಾಡಿಗೂ ವ್ಯತ್ಯಾಸವೇ ಉಳಿಯದು. ಉದಾಹರಣೆಗೆ, ಶರಾವತಿ ಸಿಂಗಳೀಕ ಅಭಯಾರಣ್ಯದಲ್ಲಿ ಇರುವ ಸಿಂಗಳೀಕ ಸಂತತಿಗೆ ಬದುಕಲು ಸುಮಾರು 100-150 ಜಾತಿಯ ಮರಗಳ ಹಣ್ಣು, ಕಾಯಿ, ಸೊಪ್ಪು, ತೊಗಟೆಯಂತಹವು ಬೇಕು. ಅಭಯಾರಣ್ಯದ ಸೂಕ್ಷ್ಮ ಪ್ರದೇಶದಲ್ಲಿ ವಾಸಿಸುವ ಕುಟುಂಬಗಳಿಗೆ ರಸ್ತೆ, ಶಾಲೆ, ಆಸ್ಪತ್ರೆ, ಅಂಗನವಾಡಿ, ವಿದ್ಯುತ್ ಸಂಪರ್ಕದಂತಹ ಸೌಲಭ್ಯಗಳು ಬೇಕು. ಪಶ್ಚಿಮಘಟ್ಟಗಳಲ್ಲಿ ಮಾತ್ರ ಕಂಡುಬರುವ ಸಿಂಗಳೀಕಗಳು ಹಾಗೂ ಇವುಗಳ ಜೊತೆ ಜೊತೆಯಲ್ಲಿ ಬದುಕುತ್ತಿರುವ ಇನ್ನಿತರ ಅಸಂಖ್ಯ ಜೀವಿವೈವಿಧ್ಯಗಳ ರಕ್ಷಣೆಗಾಗಿ ಈ 'ಗೆಲ್ಲು-ಗೆಲ್ಲಿಸು' ಸೂತ್ರ ಶಾಶ್ವತವಾದ ಪರಿಹಾರ ಆಗಬಲ್ಲದು. ಈ ಕೆಲಸ ಸಮರೋಪಾದಿಯಲ್ಲಿ ನಡೆದರೆ, ಗಾಂಧಿಯವರ ಆಶಯದಂತೆ ಎಲ್ಲರೂ ನೆಮ್ಮದಿಯಿಂದ ಬದುಕಲು ಸಾಧ್ಯ. ಇಲ್ಲದಿದ್ದಲ್ಲಿ, ಪರಿಸ್ಥಿತಿ ದಿನೇ ದಿನೇ ಹದಗೆಡುತ್ತಲೇ ಹೋಗುತ್ತದೆ.



ಚುರುಮುರಿ



ಪೀಪಾಯಿ ದಂಗೆ

● ಲಿಂಗರಾಜು ಡಿ.ಎಸ್.

ಬಾರ್ ಮುಂದುಗಡೆ ಎಂಟ್ಹತ್ತು ಪರಿಚಯಸ್ಥರು ಮುಖವ ಇಳೆಬುಟ್ಕಂದು ನಿಂತಿದ್ದರು. 'ಇದ್ಯಾಕಿರ್ಲಾ ಏಳೊವೊತ್ಗೇ ಬಂದು ಇಲ್ಲಿ ನಿಂತಿದ್ದರಿ!' ಅಂತ ಕಿಚಾಯಿಸಿದೆ.

'ಅಲ್ಲ ಕನಣ್ಣೋ, ಇದೇ ಸುಕ್ರಾರ ಸಿದ್ದರಾಮಣ್ಣ ಬಜೆಟ್ ಓದ್ತದಂತೆ. ನಮ್ಮ ಬೇಡಿಕೆಗಳ ಈ ಸರ್ತಿನಾದ್ರೂ ಪೂರೈಸ್ತರಾ ಹ್ಯಂಗೆ ಕೇಳಮು ಅಂತ ಪ್ಲಾನ್ ಹಾಕ್ಯಂಡುದ್ದವಿ' ಅಂದರು.

'ಬಲ್ ನನ್ ಮಕ್ಳು ಕನ್ರಯಾ ನೀವು! ಅದೇನು ನಿಮ್ಮ ಬೇಡಿಕೆ ಅಂತ ಹೇಳ್ರಿ' ಅಂತಂದೆ.

'ನಾವೇನೂ ಜಾಸ್ತಿ ಕೇಳ್ತಿಲ್ಲ ಕನಣ್ಣಾ, ಸರ್ಕಾರ ಖರ್ಚಿಗೆ ನಮ್ಮ ದುಡ್ನೇ ಕಾಯ್ಕ ಕೂತಿರತದೆ. ಅದುಕ್ಕೆ ಈ ವರ್ಸದಲ್ಲೇ ಮೂರು ಸಾರಿ ರೇಟು ಏರಿಸ್ಯವರೆ. ನಾವೇನನ್ನಾ ತುಟಿಪಿಟಕ್ ಅಂದ್ವಾ? ಇಲ್ಲ' ಅಂತ ಸುರು ಹಚ್ಕಂಡರು.

'ಸರಿ ಕನ್ರಪ್ಪಾ ಮುಂದ್ಕೇಳಿ' ಅಂದೆ.

'ಅಣ್ಣೈ, ರೇಟು ಏರಿಸ್ತಾವ್ರೆ ಹೊರತು ನಮಗೇನೂ ಅನುಕೂಲ ಮಾಡಿಲ್ಲ. ನಾವೇನು ಜಾಸ್ತಿ ಕೇಳಕುಲ್ಲ. ಬರ ಪರಿಹಾರಕ್ಕೆ ದುಡ್ಡು ಕೊಟ್ಟಂಗೆ ನಮಗೂ ದರ ಪರಿಹಾರ ಕೊಡಬಕು ಅಂತ ಕೇಳ್ತುದವಿ' ಅಂದ್ರು.

'ಸರಿ ಕನ್ರಪ್ಪಾ, ಆಮೇಲೆ' ಅಂದೆ ಸುಸ್ತಾಗಿ.

'ಅಣ್ಣೈ, ಎಲ್ಲ ಬಾರುಗಳಲ್ಲೂ ನಮ್ಮ ಉಪಯೋಗಕ್ಕೆ ಮಾತ್ರ ಚಾಳೀದಾಸ ಕ್ಯಾಂಟೀನ್ ತೆಗೆದು ಸಸ್ತಾ ರೇಟಲ್ಲಿ ಚಾಕಣ, ಕಬಾಬು ಕೊಡಬೇಕು. ಇನ್ನೇನೂ ಜಾಸ್ತಿ ಇಲ್ಲ ಕನಣ್ಣ, ಸೀನಿಯರ್ ಕುಡುಕರಿಗೆ ನಿರಾಧಾರ್ ಕಾರ್ಡು, ಬಿಲ್ಲಲ್ಲಿ ರಿಯಾಯಿತಿ ಕೊಡಬೇಕು'.

'ಆಮೇಲೆ ಇನ್ನೇನೇನದೆ ಒಟ್ಟಿಗೆ ಹೇಳಿಬುಡ್ರಿ' ಅಂದೆ.

'ನೋಡಣ್ಣ, ಕುತ್ಗೆ ಮಟಾ ಕುಡಿದಮ್ಯಾಲೆ ಮನೆಗೋಗಕ್ಕೆ ದಾರಿ ತಿಳಿಯಕುಲ್ಲ. ಬ್ಯಾರೇರ ಮನೆಗೋಗಿ ಮಕ್ಕುಗಿಸಿಕಳಕ್ಕಿಂತ ಎಲ್ಲ ಬಾರುಗಳಲ್ಲೂ ಅಲ್ಲೇ ಮನಿಕಳಕ್ಕೆ ಡಾರ್ಮಿಟರಿ ಥರಾ ಬಾರ್ಮಿಟರಿ ಓಪನ್ ಮಾಡಿಸಬೇಕು. ಬೇಡಿಕೆ ಈಡೇರದಿದ್ರೆ ಪೀಪಾಯಿ ದಂಗೆ ಆಯ್ತದೆ'.

ಈ ಮಾತು ಕೇಳಿ ನನಗೆ ತಲೆ ತಿರುಗಲಾರಂಭಿಸಿತು.

ಸಂಗತ

'ಪ್ರೇಮ ಪಾಠ' ಕಲಿಸುವ ಗ್ಯಾಲುವಾ!

ಪ್ರೀತಿಗೆ ಎದುರಾಗುವ ಅಡೆತಡೆಗಳು ಎಳೆಯರ ದಿಕ್ಕೆಡಿಸುತ್ತವೆ

● ಬಿ.ಎಸ್.ಭಗವಾನ್

'ಮನಸಿನಲಿ ನೀನಿದ್ದರೆ ಮರೆಯಬಹುದು ನಾನು, ಮನಸೇ ನೀನಾದರೆ?' ಎಂದೊ, 'ಪ್ರೀತಿಯು ಜೀವನ ಎಂಬ ಪುಸ್ತಕದ ಒಂದು ಪುಟ. ಆ ಒಂದು ಪುಟಕ್ಕಾಗಿ ಪೂರ್ತಿ ಪುಸ್ತಕ ಶಿಥಿಲವಾಗದಿರಲಿ' ಎಂದೊ, 'ಒಲವೆಂಬುದು ಪಳಗಿಸಲಾಗದ ಪಕ್ಷಿ' ಎಂದೊ ಪ್ರೀತಿ ವರ್ಷವರ್ಷವೂ ನವ ನವ ಉಪಮೆಗಳನ್ನು ಸೃಷ್ಟಿಸುತ್ತದೆ. ವ್ಯಾಲೆಂಟೈನ್ ದಿನವಾದ ಫೆಬ್ರುವರಿ 14, ಅಧಿಕ ವರ್ಷದಲ್ಲಿ ಬಂದರಂತೂ ಸಡಗರಕ್ಕೆ ವಿಶಿಷ್ಟತಮ ರಂಗು.

ಅಂದಹಾಗೆ, ಈ ದಿನ ಪ್ರಣಯಿಗಳ ನಡುವಿನ ಪ್ರೇಮಕ್ಕಷ್ಟೇ ಸೀಮಿತವಲ್ಲ. ಪರಸ್ಪರ ಗೌರವ, ವಿಶ್ವಾಸ, ನಂಬಿಕೆಯ ಅಭಿವ್ಯಕ್ತಿಯ ಸಂದರ್ಭ ಸಹ ಆಗಬಹುದು. ತನ್ನ ಆತ್ಮವಿಶ್ವಾಸದ ಪುನಶ್ಚೇತನವೂ ವ್ಯಾಲೆಂಟೈನ್ ದಿನದ ಸಾರ್ಥಕ್ಯವೇ ಆಗಿರುತ್ತದೆ.

'ಯೌವನದ ಹೊಳೆಯಲ್ಲೀ ಈಜಾಟ ಆಡಿದರೆ, ಓ ಹೆಣ್ಣೇ ಸೋಲು ನಿನಗೆ...'- ಗಂಡಿಗೂ ಅನ್ವಯಿಸುವ ಎಚ್ಚರಿಕೆಯ ಸಂದೇಶವುಳ್ಳ ಹಳೆಯ ಸಿನಿಮಾವೊಂದರ ಈ ಹಾಡು ಎಲ್ಲ ಕಾಲಕ್ಕೂ ಪ್ರಸ್ತುತ ಎನಿಸುತ್ತದೆ. ಇನ್ನೂ ಶಾಲೆಗೆ ಹೋಗುವ ಪ್ರಾಯ. ಬಾಲಕ, ಬಾಲಕಿ ಪಾರ್ಕಿನ ಕಲ್ಲುಬೆಂಚಿನ ಮೇಲೆ ಕೂತು ಹರಟುತ್ತಾರೆ, ಕೈ ಕೈ ಹಿಡಿದು ಮಾಲ್‌ನಲ್ಲಿ ಅಡ್ಡಾಡುತ್ತಾರೆ. ಮಹಾತ್ಮ ಗಾಂಧಿ ಸಹಶಿಕ್ಷಣವನ್ನು ಪ್ರತಿಪಾದಿಸಿದ್ದರು. ಆದರೆ ಗೆಳೆತನವೇ ಪ್ರೇಮಕ್ಕೆ ತಿರುಗಿ ಬಾಲಕ, ಬಾಲಕಿ ಪ್ರಣಯಿಗಳಾದರೆ ಸಂಗತಿ ಸಂಕೀರ್ಣ ರೂಪ ತಳೆಯುತ್ತದೆ.

ತಾವು ಯಾರೆನ್ನುವುದನ್ನೇ ಇನ್ನೂ ಅರಿಯದ ವಯಸ್ಸು ಅವರದು. ಪ್ರೇಮ, ಪ್ರಣಯದ ಬಗೆಗಿನ ಸವಾಲು, ಪ್ರತಿರೋಧಗಳನ್ನು ಅವರು ಧೈರ್ಯವಾಗಿ ಎದುರಿಸಬಲ್ಲರೇ? ವಾಸ್ತವವಾಗಿ ಅವರು ಅನುಸಂಧಾನಿಸುತ್ತಿರುವುದು ನೈತಿಕತೆಗಿಂತಲೂ ಹೆಚ್ಚಾಗಿ ಜೈವಿಕ ಬದಲಾವಣೆಯೊಂದಿಗೆ. 'ಓದು, ಬರಹದ ಕಡೆಗೆ ನಮ್ಮ ನಡಿಗೆ' ಎಂಬುದು ವಿದ್ಯಾರ್ಥಿಗಳ ಪಾಲಿಗೆ ಧ್ಯೇಯ ವಾಕ್ಯವಾಗುವುದು ಸೂಕ್ತ.

ಸಮೂಹ ಮಾಧ್ಯಮಗಳು ಮಾನಸಿಕ ನಂಜನ್ನು ಉಣಿಸುತ್ತವೆ. ಸಿನಿಮಾಗಳು ಕಾಲೇಜನ್ನು ಪ್ರಣಯಿಗಳು ಸಂಧಿಸುವ ತಾಣವೆಂದೇ ಬಿಂಬಿಸುತ್ತವೆ. ಮರ, ಕಂಬ ಸುತ್ತುವ ನಾಯಕ, ನಾಯಕಿಯ ಪ್ರೀತಿಯು ವಿವಾಹದಲ್ಲೇ ಪರ್ಯವಸಾನವಾಗಬೇಕು. ಪ್ರಣಯದ ಹಾದಿಯಲ್ಲಿ ಸವಾಲುಗಳು ಎದುರಾಗಿ ಪ್ರೇಮ ವೈಫಲ್ಯವಾಗುವ ಸನ್ನಿವೇಶಗಳು ತೆರೆಯ ಮೇಲೆ ಕಾಣಿಸಿಕೊಳ್ಳುವುದು ಬೆರಳೆಣಿಕೆಯಷ್ಟು ಮಾತ್ರ. 'ಪ್ರೀತಿ, ಪ್ರೇಮವನ್ನು ಇಲ್ಲಿಗೇ ಮುಕ್ತಾಯಗೊಳಿಸೋಣ. ನಾಳೆ ನಮಗೆ ನಮ್ಮ ಪೋಷಕರ ಬಲ ಸಿಗುವುದೋ ಇಲ್ಲವೋ' ಎಂದು ನಾಯಕ, ನಾಯಕಿ ನಿಶ್ಚಯಿಸುವ ಸನ್ನಿವೇಶಗಳು ಸಿನಿಮಾಗಳಲ್ಲಿ ಅತಿ ವಿರಳ.

ಭ್ರಮಿಸುವುದೆಲ್ಲ ನಿಜವಾಗಿರುವುದಿಲ್ಲ ಎನ್ನುವ ವಿವೇಕ, ಜಳ್ಳು- ಗಟ್ಟಿ ಕುರಿತ ವಿವೇಚನೆಯು ಪಠ್ಯಕ್ರಮದ ಒಂದು ಭಾಗವಾಗುವ ಅಗತ್ಯವಿದೆ. ಒಬ್ಬ ಕಲಿಕಾರ್ಥಿ ಬಹುತೇಕ ಬಾಯ್‌ಫ್ರೆಂಡ್, ಗರ್ಲ್‌ಫ್ರೆಂಡ್ ಹೊಂದದಿರುವುದೇ ಒಂದು ದೌರ್ಬಲ್ಯ ಎನ್ನುವಂತಹ ಸ್ಥಿತಿ ನಿರ್ಮಾಣವಾಗಿದೆ.

ಮಕ್ಕಳು ಈಗಾಗಲೇ ವಿಪರೀತ ಒತ್ತಡಕ್ಕೆ ಒಳಗಾಗಿದ್ದಾರೆ. ಹೆಚ್ಚು ಅಂಕ ಗಳಿಸಿ ತರಗತಿಗೆ ಮೊದಲು ಬಾ ಎಂದು ಪೋಷಕರು, ಕ್ರೀಡೆ, ಆಟೋಟಗಳಲ್ಲೂ ಶಾಲೆಗೆ ಕೀರ್ತಿ ತಾ ಎಂದು ವಿದ್ಯಾಸಂಸ್ಥೆಯ ಬೋಧಕ ವೃಂದ, ಆಡಳಿತ ವರ್ಗ. ಅಪ್ರಾಪ್ತ ವಯಸ್ಸಿನಲ್ಲಿ ಪ್ರಣಯ-ಪಕ್ಷಿಗಳಾಗಿ ಮಕ್ಕಳು ಸ್ವತಃ ಒತ್ತಡವನ್ನು ಇನ್ನಷ್ಟು ತಾವೇ ಹೇರಿಕೊಳ್ಳುವುದು ವಿಪರ್ಯಾಸ. ಹದಿಹರೆಯದ ವಯಸ್ಸು ಅನಿಶ್ಚಯ, ಅಚ್ಚರಿ, ಆತಂಕದ ಕಣಜ. ಪ್ರೇಮ ವೈಫಲ್ಯಗಳು ಆತ್ಮಹತ್ಯೆಯತ್ತ ದೂಡಿರುವ ಪ್ರಸಂಗಗಳುಂಟು. ಪೋಷಕರು ಮಕ್ಕಳ ಪಾಲಿಗೆ ಪೋಷಕತ್ವಕ್ಕಿಂತಲೂ ಹೆಚ್ಚಾಗಿ ಅವರಲ್ಲಿ ಗೆಳೆತನವನ್ನೇ ಮೆರೆಯಬೇಕು. ಮಕ್ಕಳನ್ನು ಉತ್ತಮ ಹವ್ಯಾಸಗಳಲ್ಲಿ ತೊಡಗಿಸುವುದು ಮಹತ್ವದ ಹೆಜ್ಜೆ.

ಇರುವುದೊಂದೇ ಭವಿಷ್ಯ. ಪ್ರೀತಿಸಿಯೂ ಅದು ಪ್ರೀತಿಯಲ್ಲ ಎಂದು ಮುಂದೆ ಹುಸಿ ಸಮರ್ಥನೆ ಕೊಟ್ಟು-ಕೊಳ್ಳುವುದು ಸಂಗಾತಿಗೆ ಮಾತ್ರವಲ್ಲ ತನಗೆ ತಾನೇ ಎಸಗಿಕೊಳ್ಳುವ ವಂಚನೆ. 'ಟ್ಯೂಷನ್' ಭೇಟಿಯಾಗುವ ತಾಣವಾಗಬಹುದು ಎನ್ನುವುದು ನಿಷ್ಠುರ ಸತ್ಯ. ಹೊಟ್ಟೆಗೆ ಬಟ್ಟೆ ಕಟ್ಟಿಯಾದರೂ ತಮಗೆ ಶಿಕ್ಷಣ ಒದಗಿಸಲು ತಮ್ಮ ಪೋಷಕರು ಅದೆಷ್ಟು ಪರಿಶ್ರಮ ಪಡುತ್ತಾರೆ ಎಂಬ ಚಿತ್ರಣವೇ ಮಕ್ಕಳ ಸಂಗಾತಿಯಾಗಿರಬೇಕು.



ಈ ದಿಸೆಯಲ್ಲಿ, 19ನೇ ಶತಮಾನದ ಫ್ರಾನ್ಸ್ ದೇಶದ ಇವಾರಿಸ್ಟ್ ಗ್ಯಾಲುವಾ ನೆನಪಾಗುತ್ತಾನೆ. ಆತ ಹದಿಮೂರನೇ ವಯಸ್ಸಿಗೆಲ್ಲ ಗಣಿತದಲ್ಲಿ ಅಸಾಧಾರಣ ಸಂಶೋಧನೆ ನಡೆಸಿದ್ದ. ಪ್ರೌಢಶಾಲೆಗೆ ಸೇರಿದ ಹುಡುಗ ಚೆನ್ನಾಗಿಯೇ ಓದುತ್ತಿದ್ದ. ಲೆಜೆಂಡ್ರೆ, ಅಬೆಲ್, ನ್ಯೂಟನ್ ಅವರಂಥ ಅತಿರಥ ಮಹಾರಥರ ಗಣಿತ ಗ್ರಂಥಗಳನ್ನು ಆತ ಅರಗಿಸಿಕೊಂಡ. 'ಗ್ಯಾಲುವಾಸ್ ಗ್ರೂಪ್ ಥಿಯರಿ' ಸೇರಿದಂತೆ ಮೂರು ಸಂಶೋಧನಾ ಪ್ರಬಂಧಗಳನ್ನು ರಚಿಸಿದ್ದು ಅವನ ಸ್ವಂತಿಕೆಗೆ ಪುರಾವೆ. ಅವನ ವಯಸ್ಸು ಆಗ ಹತ್ತೊಂಬತ್ತು. ಆದರೇನು, ಚಂಚಲ ಸ್ವಭಾವ! ಹುಡುಗಿಯೊಬ್ಬಳೊಂದಿಗೆ ಪ್ರಣಯ.

ಅದೇಕೋ ದಿನಗಳೆದಂತೆ ತನ್ನ ಬಗ್ಗೆ, ತನ್ನ ಪ್ರೇಮದ ಬಗ್ಗೆ, ಪ್ರೇಯಸಿಯ ಬಗ್ಗೆ ಅಸಮಾಧಾನಗೊಂಡ. ಆತನ ಪ್ರಣಯವು ವಿವಾದಕ್ಕೆ ಸಿಲುಕಿ, ಪ್ರೇಯಸಿಯ ಸಂಬಂಧಿಯೊಂದಿಗೆ ಮಲ್ಲಯುದ್ಧ ಎದರಿಸಬೇಕಾಯಿತು. ಗ್ಯಾಲುವಾ ತೀವ್ರ ಪೆಟ್ಟಿನಿಂದ ಸಾಯಬೇಕಾಗಿ ಬಂತು. ತಾನೇ ಕೈಯಾರೆ ತಂದುಕೊಂಡ ಮೃತ್ಯು ಅದು. ಅಪ್ರಾಪ್ತ ವಯೋಮಾನದಲ್ಲಿ ಪ್ರೇಮದ ಹಂಗಿರದಿದ್ದರೆ ಗ್ಯಾಲುವಾ ಗಣಿತದಲ್ಲಿ ಊಹೆಗೂ ನಿಲುಕದಷ್ಟು ಸಾಧನೆ ಮಾಡುತ್ತಿದ್ದ.

ವಿದ್ಯಾರ್ಥಿಜೀವನ ಎಂದರೆ ಸ್ನೇಹ, ಪ್ರಜ್ಞಾಪೂರ್ವಕ ಹಿಗ್ಗು, ಆಗುಹೋಗುಗಳು ನೆನಪಿನ ಬುತ್ತಿಯಾಗುವ ಕಾಲಘಟ್ಟ. ಅದನ್ನು ಹಾಳುಮಾಡಿಕೊಳ್ಳಕೂಡದು ಎಂಬ ಸಂದೇಶವನ್ನೂ ಬಾಲ ಮೇಧಾವಿ ಗ್ಯಾಲುವಾ ಗಣಿತದೊಂದಿಗೆ ಬಿಟ್ಟುಹೋದ. ಇತಿಹಾಸದಲ್ಲಿ ಹೀಗೆ ಮುರುಟಿಹೋದ ಪ್ರತಿಭೆಗಳೆಷ್ಟೋ?

ವಾಚಕರ ವಾಣಿ

ಮಠಮಾನ್ಯಗಳು ಕಾನೂನಿಗೆ ಹೊರತೇ?

ಚಿತ್ರದುರ್ಗದ ಗೊಲ್ಲಗಿರಿಯ ಮಠದ ಆವರಣದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಕಾಂಗ್ರೆಸ್ ಮುಖಂಡ ಎಚ್‌.ಆಂಜನೇಯ ಅವರು, 'ಮಠದ ಸುತ್ತ ನಿಮ್ಮ ಸಾಮರ್ಥ್ಯ ಇರುವಷ್ಟು ಜಾಗಕ್ಕೆ ಬೇಲಿ ಹಾಕಿಕೊಳ್ಳಿ. ಜಿಲ್ಲಾಧಿಕಾರಿ, ತಹಶೀಲ್ದಾರ್ ಸೇರಿ ಯಾರೊಬ್ಬರೂ ಬರುವುದಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದಾಗ ಬಹಿರಂಗ ಸಭೆಯಲ್ಲಿ ಹೇಳಿದ್ದೆ. ಸರ್ಕಾರ ಮತ್ತು ಮಠ ಬೇರೆಯಲ್ಲ' ಎಂದು ಹೇಳಿರುವುದಾಗಿ ವರದಿಯಾಗಿದೆ (ಪ್ರ.ವಾ., ಫೆ. 11). ಸಾರ್ವಜನಿಕವಾಗಿ ಹೀಗೆ ಮಾತನಾಡುವುದರಿಂದ ಸಮಾಜಕ್ಕೆ ಏನು ಸಂದೇಶ ಹೋಗುತ್ತದೆ ಎಂಬ ಕನಿಷ್ಠ ಜ್ಞಾನವೂ ನಮ್ಮ ರಾಜಕಾರಣಿಗಳಿಗೆ ಬೇಡವೇ?! ಮಠಮಾನ್ಯಗಳಿಗೆ ಒಂದು ಕಾನೂನು, ಬೇರೆಯವರಿಗೆ ಒಂದು ಕಾನೂನೇ? ಕಾನೂನು ಎಲ್ಲರಿಗೂ ಒಂದೇ ಅಲ್ಲವೆ? ಯಾರನ್ನೋ ಓಲೈಸುವ ಸಲುವಾಗಿ ಇಂತಹ ಮಾತುಗಳನ್ನಾಡುವುದು, ಸಚಿವ ಸ್ಥಾನವನ್ನು ನಿಭಾಯಿಸಿದ ಅನುಭವ ಇರುವ ಆಂಜನೇಯ ಅವರಂಥವರಿಗೆ ಶೋಭೆ ತರುವುದಿಲ್ಲ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ನೋಂದಣಿ ಫಲಕ: ಗಡುವು ವಿಸ್ತರಿಸಿ

ಅತಿ ಸುರಕ್ಷಿತ ನೋಂದಣಿ ಫಲಕ (ಎಚ್‌ಎಸ್‌ಆರ್‌ಪಿ) ಅಳವಡಿಕೆಗೆ ಸಾರಿಗೆ ಇಲಾಖೆಯು ಇದೇ 17ಕ್ಕೆ ಕೊನೆಯ ದಿನವನ್ನು ನಿಗದಿಪಡಿಸಿದೆ. ತಪ್ಪಿದರೆ ಭಾರಿ ಮೊತ್ತದ ದಂಡ ವಿಧಿಸಲಾಗುವುದು ಎಂದು ಎಚ್ಚರಿಕೆ ನೀಡಿದೆ. ಆದರೆ ಇದುವರೆಗೂ ಕೆಲವರಷ್ಟೇ ನೋಂದಣಿ ಮಾಡಿಸಿಕೊಂಡಿದ್ದಾರೆ. ಇದಕ್ಕೆ ಸಾರ್ವಜನಿಕರಲ್ಲಿ ಇರಬಹುದಾದ ಮಾಹಿತಿ ಕೊರತೆ ಅಥವಾ ತಾಂತ್ರಿಕ ಸಮಸ್ಯೆ ಕಾರಣವಾಗಿರಬಹುದು. ಈಗ ಅಂತಿಮ ಗಡುವು ಹತ್ತಿರವಾದ್ದರಿಂದ ನೋಂದಣಿ ಮಾಡಿಸಲು ಸಾರ್ವಜನಿಕರು ಮುಗಿಬಿದ್ದಿದ್ದು, ದಿನಪೂರ್ತಿ ಸರ್ವರ್ ಸಮಸ್ಯೆ ಎದುರಾಗುತ್ತಿದೆ. ಆದಕಾರಣ, ನೋಂದಣಿಗೆ ವಿಧಿಸಿರುವ ಗಡುವನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಸಾರಿಗೆ ಸಚಿವರು ಇನ್ನೊಂದು ಬಾರಿಗೆ ವಿಸ್ತರಿಸಬೇಕಾಗಿದೆ.

ಮುರುಗೇಶ ಡಿ., ದಾವಣಗೆರೆ

ಜನಸ್ಪಂದನ: ಆಗಬೇಕಾಗಿದೆ ವಿಕೇಂದ್ರೀಕರಣ

ಜನರ ಸಮಸ್ಯೆಗಳನ್ನು ಆಲಿಸಿ ಅವುಗಳನ್ನು ಪರಿಹರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನವೆಂಬರ್ ಮತ್ತು ಫೆಬ್ರುವರಿಯಲ್ಲಿ ಬೆಂಗಳೂರಿನಲ್ಲಿ ನಡೆಸಿದ ಜನಸ್ಪಂದನ ಕಾರ್ಯಕ್ರಮಗಳಿಗೆ ರಾಜ್ಯದ ಮೂಲೆಮೂಲೆಗಳಿಂದ ಜನರು ಆಗಮಿಸಿದ್ದುದು ಸರಿಯಷ್ಟೆ. ಆದರೆ ದೂರದ ಜಿಲ್ಲೆಗಳ ಜನರು ಅದಕ್ಕಾಗಿ ನೂರಾರು ಕಿ.ಮೀ. ಪ್ರಯಾಣ ಮಾಡಬೇಕಾಗಿ ಬಂದದ್ದು ದುರದೃಷ್ಟಕರ. ಅಲ್ಲದೆ ಮನವಿಗಳನ್ನು ಸಲ್ಲಿಸಲು ಬಹಳಷ್ಟು ಸಂಖ್ಯೆಯಲ್ಲಿ ಜನ ಒಂದೆಡೆ ಸೇರುವುದರಿಂದ ನೂಕುನುಗ್ಗಲು ಉಂಟಾಗುತ್ತದೆ. ಜನಸಂದಣಿಯಿಂದ ಕೆಲವರು ನಿಗದಿತ ಕೌಂಟರ್‌ನಲ್ಲಿ ಮನವಿ ಸಲ್ಲಿಸಲು ಸಾಧ್ಯವಾಗದೇ ಹೋಗಬಹುದು. ಹೀಗಾಗಿ, ಆಯಾ ಭಾಗದ ಸುಮಾರು ಆರು ಜಿಲ್ಲೆಗಳನ್ನು ಒಳಗೊಂಡು, ಅವುಗಳ ಪೈಕಿ ಪ್ರಮುಖವಾದ ಒಂದು ಜಿಲ್ಲೆಯಲ್ಲಿ ಮುಖ್ಯಮಂತ್ರಿಯವರ ಜನಸ್ಪಂದನ ಕಾರ್ಯಕ್ರಮವನ್ನು ಏರ್ಪಡಿಸಿದರೆ ಜನರಿಗೂ ಅನುಕೂಲ, ಸರ್ಕಾರವೂ ಅಚ್ಚುಕಟ್ಟಾಗಿ ಕಾರ್ಯಕ್ರಮವನ್ನು ಆಯೋಜಿಸಬಹುದು.

ಸಿ.ಪುಟ್ಟಯ್ಯ ಹಂದನಕೆರೆ, ತುಮಕೂರು

ಮಹಿಳಾ ಅರ್ಚಕರು: ಅಸಮಂಜಸ ನಿಲುವು

'ನಮ್ಮ ಸಂಸ್ಕೃತಿ ಮತ್ತು ಜನರ ಸಂಸ್ಕಾರದ ಉಳಿವಿಗೆ ದೇವಸ್ಥಾನದ ಅರ್ಚಕ ವೃತ್ತಿಯನ್ನು ಪುರುಷರಿಗೆ ಮಾತ್ರವೇ ಮೀಸಲಿಡಬೇಕು. ಮಹಿಳೆಯರನ್ನು ಅರ್ಚಕರನ್ನಾಗಿ ನೇಮಿಸುವ ನಿರ್ಧಾರ ಸೂಕ್ತವಲ್ಲ' ಎಂಬ ಹಿರೇಮಗಳೂರು ಕಣ್ಣನ್ ಅವರ ಹೇಳಿಕೆ (ಪ್ರ.ವಾ., ಫೆ. 12) ಒಪ್ಪತಕ್ಕದ್ದಲ್ಲ. ಕಾಲೋಚಿತವಾಗಿ ಮಾರ್ಪಾಟು ಹೊಂದುವುದು ಸಂಸ್ಕೃತಿಯ ಸಹಜ ಲಕ್ಷಣ. ವೈಚಾರಿಕತೆಯ ನಿಕಷಕ್ಕೆ ತನ್ನನ್ನು ಒಡ್ಡಿಕೊಳ್ಳುವುದು ಸಂಸ್ಕಾರದ ಅವಶ್ಯಗುಣ. ಈ ಎರಡು ಅಂಶಗಳನ್ನೂ ನಿರಾಕರಿಸುವವರು ಜನಕೋಟಿಯ ಸಂಸ್ಕೃತಿ, ಸಂಸ್ಕಾರಗಳ ನಿಯಾಮಕರಂತೆ ವರ್ತಿಸುವುದು ತರವಲ್ಲ.

ಎಚ್‌.ಆನಂದರಾಮ ಶಾಸ್ತ್ರೀ, ಬೆಂಗಳೂರು

ನಿಜವಾದ ಧರ್ಮವು ಮೌಢ್ಯ ಬಿತ್ತದು

'ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಜಾತಿ, ಧರ್ಮವು ದೇಶವನ್ನಾಳಿದರೆ ಮೌಢ್ಯ ಹೆಚ್ಚಾಗುತ್ತದೆ, ಗುಲಾಮಗಿರಿ ಬೆಳೆಯುತ್ತದೆ' ಎಂದು ಮರಿಲಿಂಗಪ್ಪ ಕೋಳೂರ ಎಂಬುವರು ಕಾರ್ಯಕ್ರಮವೊಂದರಲ್ಲಿ ಅಭಿಪ್ರಾಯಪಟ್ಟಿದ್ದಾರೆ (ಪ್ರ.ವಾ., ಫೆ. 9). ಯಾವುದೇ ನಿಜವಾದ ಧರ್ಮವು ಮಾನವನ ಸರ್ವಾಂಗ ಉನ್ನತಿಯನ್ನು ಬಯಸುತ್ತದೆಯೇ ವಿನಾ ಮೌಢ್ಯ, ಗುಲಾಮಗಿರಿಯನ್ನಲ್ಲ. 'ಧರ್ಮೋ ರಕ್ಷತಿ ರಕ್ಷಿತಃ' ಎಂಬ ಸಾರ್ವಕಾಲಿಕ ನುಡಿಯನ್ನು ಜ್ಞಾನಿಗಳು ಸ್ವಾನುಭವದಿಂದ ಪ್ರತಿಪಾದಿಸುತ್ತಾ ಬಂದಿದ್ದಾರೆ. 12ನೇ ಶತಮಾನದ ಬಸವಾದಿ ಶರಣರು ಸ್ವಾನುಭವದ ವಚನಗಳಿಂದ ಮೌಢ್ಯವನ್ನು ತೊಳೆದುಹಾಕಿದರು. ಜಾತಿ, ಮತಗಳನ್ನು ಧಿಕ್ಕರಿಸಿ ಮಾನವ ಸಮಾಜವನ್ನು ಕಟ್ಟಿದರು. ಶರಣರು ಕಟ್ಟಿದ ಈ ಧರ್ಮವು ಮೌಢ್ಯವನ್ನು ಬಿತ್ತಿತೇ?

ಮಾನವನು ಮನುಷ್ಯತ್ವವನ್ನು ಬಿಟ್ಟು ಸ್ವಾರ್ಥಹಿತ ಸಾಧನೆಗಾಗಿ ಧರ್ಮ, ತತ್ವಗಳನ್ನು ತಿರುಚಲು ಮುಂದಾದಾಗ, ಈ ಮೂಲಕ ಧರ್ಮವು ಆತನ ಕೈಗೊಂಬೆಯಾದಾಗ ಅಂತಹ ಧರ್ಮ, ಜಾತಿಗಳು ಮೌಢ್ಯವನ್ನು ಬಿತ್ತುತ್ತವೆ ಹಾಗೂ ಗುಲಾಮಗಿರಿಗೆ ತಳ್ಳುತ್ತವೆ.

ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ, ಸಿಂಧನೂರು

'ವಧುದಕ್ಷಿಣೆ' ಬೇಡಿಕೆ ಸರಿಯಲ್ಲ

ರೈತರನ್ನು ಮದುವೆಯಾಗುವ ಹೆಣ್ಣುಮಕ್ಕಳಿಗೆ ₹ 5 ಲಕ್ಷ ಪ್ರೋತ್ಸಾಹಧನ ಘೋಷಿಸಬೇಕೆಂದು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಅವರು ಮುಖ್ಯಮಂತ್ರಿಯವರಿಗೆ ಮನವಿ ಮಾಡಿರುವುದು ಅಸಮಂಜಸ. ರೈತರಿಗೆ ಬೇಕಾಗಿರುವುದು ನೀರು, ತಾವು ಬೆಳೆದ ಉತ್ಪನ್ನಗಳಿಗೆ ಬೆಂಬಲ ಬೆಲೆ. ಅಷ್ಟನ್ನು ಒದಗಿಸಿದರೆ ಸಾಕು. ಹಸಿರುಕ್ರಾಂತಿಯ ಹರಿಕಾರ ದಿವಂಗತ ಸ್ವಾಮಿನಾಥನ್ ಅವರು ಮಾಡಿರುವ ಶಿಫಾರಸಿನ ಪ್ರಮುಖ ಅಂಶಗಳಲ್ಲಿ ಸಹ ಇವು ಸೇರಿವೆ. ಮಾಸಿಕ ವೇತನ ಬರುವ ಇತರ ಕೆಲಸಗಳಂತೆ ರೈತರಿಗೂ ಪ್ರತಿ ತಿಂಗಳು ಆದಾಯ ಬರುವ ಕೃಷಿ ಯೋಜನೆಯನ್ನು ರೂಪಿಸಿ ಅನುಷ್ಠಾನ ಮಾಡಿದರೆ, ಅವರಿಗೆ ಮದುವೆಯ ಯೋಗ ತಾನಾಗಿಯೇ ಕೂಡಿಬರುತ್ತದೆ. ನಷ್ಟವಾಗುತ್ತಿರುವ ಮಳೆ ನೀರನ್ನು ಕೃಷಿ ಹೊಂಡ, ಕೆರೆಗಳಲ್ಲಿ ಸಂಗ್ರಹಿಸಿ, ಸಂರಕ್ಷಿಸಿದರೆ ವರ್ಷದಲ್ಲಿ ಮೂರು ಬೆಳೆಗಳನ್ನು ಯಶಸ್ವಿಯಾಗಿ ಬೆಳೆಯಲು ಸಾಧ್ಯ. ಇದು ಸಹ ರೈತರ ಆರ್ಥಿಕ ಉನ್ನತಿಗೆ ಪೂರಕ.

ಎಚ್‌.ಆರ್‌.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಎಚ್‌ಎಸ್‌ಆರ್‌ಪಿ ಹಲವು ತೊಡಕು

ಹೊಸ ವಾಹನಗಳಿಗೆ ಹೈ ಸೆಕ್ಯುರಿಟಿ ರಿಜಿಸ್ಟ್ರೇಷನ್ ಪ್ಲೇಟ್–ಎಚ್‌ಎಸ್‌ಆರ್‌ಪಿ ವಾಹನ ಖರೀದಿಯ ಸಂದರ್ಭದಲ್ಲೇ ಬರುತ್ತದೆ. ಆದರೆ 2019ರ ಏಪ್ರಿಲ್‌ಗೂ ಮುನ್ನ ಖರೀದಿಸಲಾದ ಎಲ್ಲಾ ವಾಹನಗಳಿಗೆ ಎಚ್‌ಎಸ್‌ಆರ್‌ಪಿಯನ್ನು ಈಗ ಅಳವಡಿಸಲೇಬೇಕು. ಇದೇ ಫೆಬ್ರುವರಿ 17ರ ಒಳಗೆ ಎಚ್‌ಎಸ್‌ಆರ್‌ಪಿ ಅಳವಡಿಸದಿದ್ದರೆ, ದಂಡ ವಿಧಿಸಲು ಅವಕಾಶವಿದೆ. ಎಚ್‌ಎಸ್‌ಆರ್‌ಪಿ ಇಲ್ಲದೇ ಇದ್ದರೆ ವಾಹನ ಮಾರಾಟ, ವಿಳಾಸ ಬದಲಾವಣೆ, ಅರ್ಹತಾ ಪತ್ರ ನವೀಕರಣದಂತಹ ಹಲವು ಪ್ರಕ್ರಿಯೆಗಳನ್ನು ನಡೆಸಲು ಸಾಧ್ಯವಿಲ್ಲ. ಆದರೆ ನಿಜಕ್ಕೂ ಸಮಸ್ಯೆ ಇರುವುದು ಎಚ್‌ಎಸ್‌ಆರ್‌ಪಿ ನೋಂದಣಿಯಲ್ಲಿ ಮತ್ತು ಎಚ್‌ಎಸ್‌ಆರ್‌ಪಿ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸದೇ ಇರುವುದರಲ್ಲಿ. ಎಚ್‌ಎಸ್‌ಆರ್‌ಪಿ ನೋಂದಣಿಯಲ್ಲಿ ಹಲವು ಹಂತದ ಸಮಸ್ಯೆಗಳಿವೆ. ಎಚ್‌ಎಸ್‌ಆರ್‌ಪಿ ಅಳವಡಿಕೆ ಗಡುವು ಮುಗಿಯುವ ದಿನ ಹತ್ತಿರ ಬಂದಂತೆಯೇ, ಎಚ್‌ಎಸ್‌ಆರ್‌ಪಿ ನೋಂದಣಿ ಪೋರ್ಟಲ್‌ನ ಸರ್ವರ್ ಕೈಕೊಡಲಾರಂಭಿಸಿದೆ. ಸರ್ವರ್ ಸಮಸ್ಯೆ ಹೊರತುಪಡಿಸಿ ಇನ್ನೂ ಹಲವು ಗಂಭೀರ ತೊಡಕುಗಳಿವೆ. ಅವುಗಳನ್ನು ಸಾರಿಗೆ ಇಲಾಖೆ ಸರಿಪಡಿಸಬೇಕಿದೆ. ಅಂತಹ ಕೆಲವು ಸಮಸ್ಯೆಗಳು ಇಂತಿವೆ...

ವಾಹನ್ ಪೋರ್ಟಲ್‌ನಲ್ಲಿ ವಿವರ ತಾಳೆಯಾಗದೇ ಇರುವುದು

ಸಾರಿಗೆ ಇಲಾಖೆಯ ಎಲ್ಲಾ ದಾಖಲಾತಿಗಳು ಈಗ ಸಂಪೂರ್ಣ ಡಿಜಿಟಲೀಕರಣ ಆಗಿವೆ. ಕಾಗದದ ರೂಪದಲ್ಲಿ ಇದ್ದ ದಾಖಲೆಗಳನ್ನು ಮೊದಲು ರಾಜ್ಯ ಮಟ್ಟದಲ್ಲಿ ಡಿಜಿಟಲೀಕರಣ ಮಾಡಲಾಗಿತ್ತು. ನಂತರ ಅವನ್ನು ಕೇಂದ್ರ ಸರ್ಕಾರದ 'ವಾಹನ್ ಪೋರ್ಟಲ್'ಗೆ ಅಪ್‌ಲೋಡ್ ಮಾಡಲಾಗಿದೆ. ಆದರೆ ಹೀಗೆ ಡಿಜಿಟಲೀಕರಣ ಮಾಡುವಾಗ ಕೆಲವು ವಿವರ ಬಿಟ್ಟುಹೋಗಿದ್ದರೆ ಅಥವಾ ತಪ್ಪಾಗಿದ್ದರೆ ಅಂತಹ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಬುಕ್ಕಿಂಗ್ ಮಾಡಲು ಸಾಧ್ಯವಾಗುತ್ತಿಲ್ಲ.

ಕೆಲವು ವಾಹನ ತಯಾರಕ ಕಂಪನಿಯ ಹೆಸರು ಆರ್‌ಸಿ (ನೋಂದಣಿ ಪತ್ರ) ಕಾರ್ಡ್‌ನಲ್ಲಿ ಸರಿಯಾಗಿ ನಮೂದಾಗಿದ್ದರೂ, ವಾಹನ್ ಪೋರ್ಟಲ್‌ನಲ್ಲಿ 'ಅದರ್ಸ್' ಎಂದು ನಮೂದಾಗಿರುತ್ತದೆ. ಅಂತಹ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಖರೀದಿಸಲು ಮುಂದಾದಾಗ 'ವಿವರ ತಾಳೆಯಾಗುತ್ತಿಲ್ಲ' ಅಥವಾ 'ನಿಮ್ಮ ವಾಹನಕ್ಕೆ ಎಚ್‌ಎಸ್‌ಆರ್‌ಪಿ ನೀಡಲು ನಮ್ಮನ್ನು ನಿಯೋಜಿಸಿಲ್ಲ' ಎಂಬ ಉತ್ತರಗಳು ಬರುತ್ತವೆ. ಏಳು–ಎಂಟು ವರ್ಷಗಳಷ್ಟು ಹಳೆಯದಾದ ವಾಹನಗಳಿಗೂ ಇಂಥದ್ದೇ ಸಮಸ್ಯೆ ಎದುರಾಗಿದೆ. 2018ರಲ್ಲಿ ಖರೀದಿಸಿದ ಕೆಲವು ವಾಹನಗಳಿಗೂ ಇದೇ ರೀತಿಯ 'ಎರರ್' ತೋರಿಸುತ್ತಿದೆ. ಎಲ್ಲಾ ದ್ವಿಚಕ್ರ ವಾಹನಗಳ ತಯಾರಕ ಕಂಪನಿಗಳು ಮತ್ತು ಎಲ್ಲಾ ಕಾರು ತಯಾರಕ ಕಂಪನಿಗಳ ವಾಹನಗಳಿಗೂ ಕೆಲವು ಬಾರಿ ಈ 'ಎರರ್' ತೊಡಕು ಎದುರಾಗುತ್ತಿದೆ. ಇದು ಸಾರಿಗೆ ಇಲಾಖೆಯ ಕಡೆಯಿಂದಲೇ ಆದ ಸಮಸ್ಯೆಯಾಗಿದ್ದು, ಇಲಾಖೆಯೇ ಅದನ್ನು ಸರಿಪಡಿಸಬೇಕಿದೆ

ಕೆಲವು ಕಂಪನಿಗಳ ಹೆಸರೇ ಇಲ್ಲ

ಕೆಲವು ಕಂಪನಿಗಳ ಹೆಸರುಗಳು ವಾಹನ್ ಪೋರ್ಟಲ್‌ನಲ್ಲಿ ಇಲ್ಲ. ಅಂತಹ ಕಂಪನಿಗಳ ವಾಹನಗಳ ಎಚ್‌ಎಸ್‌ಆರ್‌ಪಿ ಖರೀದಿಸಲು ಸಾಧ್ಯವಾಗುತ್ತಿಲ್ಲ. ಉದಾಹರಣೆಗೆ ಯಮಾಹ ಕಂಪನಿಯ ಆರ್‌ಎಕ್ಸ್ ಮತ್ತು ಆರ್‌ಡಿ ಸರಣಿಯ ಬೈಕ್‌ಗಳನ್ನು ಭಾರತದಲ್ಲಿ ತಯಾರಿಕೆ ಮಾಡುತ್ತಿದ್ದದ್ದು 'ಎಸ್ಕಾರ್ಟ್' ಕಂಪನಿ. ಈ ಬೈಕ್‌ಗಳೆಲ್ಲವೂ ಕನಿಷ್ಠ 24 ವರ್ಷಕ್ಕಿಂತ ಹಳೆಯವೇ ಆಗಿವೆ.

ಈಗ ಯಮಾಹ ಕಂಪನಿಯು ಭಾರತದಲ್ಲಿ ನೇರವಾಗಿ ತಾನೇ ವ್ಯಾಪಾರ ವಹಿವಾಟು ನಡೆಸುತ್ತಿದೆ. ಯಮಾಹದಿಂದ ಖರೀದಿಸಿದ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಖರೀದಿಸಲು ಯಾವುದೇ ತೊಂದರೆ ಇಲ್ಲ. ಆದರೆ ವಾಹನ್ ಪೋರ್ಟಲ್‌ನಲ್ಲಿ, 'ಎಸ್ಕಾರ್ಟ್' ಕಂಪನಿಯ ವಿವರವನ್ನು ಬೈಕ್ ತಯಾರಕ–ಮಾರಾಟ ವಿಭಾಗದಲ್ಲಿ ತೋರಿಸದೇ ಇರುವುದರಿಂದ ಆ ಕಂಪನಿಯಿಂದ ಖರೀದಿಸಿದ ಬೈಕ್‌ಗಳಿಗೆ ಎಚ್‌ಎಸ್‌ಆರ್‌ಪಿ ಖರೀದಿಸುವಲ್ಲಿ ತೊಡಕು ಎದುರಾಗಿದೆ.

ಕಾರ್ಯಾಚರಣೆ ಸ್ಥಗಿತಗೊಳಿಸಿದ ಕಂಪನಿಗಳ ವಾಹನಗಳಿಗೂ ತೊಡಕು

ಕಳೆದ 10–15 ವರ್ಷಗಳಲ್ಲಿ ಹಲವಾರು ಕಾರು ತಯಾರಕ ಮತ್ತು ದ್ವಿಚಕ್ರ ವಾಹನ ತಯಾರಕ ಕಂಪನಿಗಳು ಭಾರತದಲ್ಲಿ ಕಾರ್ಯಾಚರಣೆ ನಿಲ್ಲಿಸಿವೆ. ಅವುಗಳಲ್ಲಿ ಅಧಿಕೃತವಾಗಿ ಸರ್ವಿಸಿಂಗ್ ಸೇವೆ ಒದಗಿಸುತ್ತಿರುವ ಕಂಪನಿಗಳ ವಾಹನಗಳಿಗಷ್ಟೇ ಎಚ್‌ಎಸ್‌ಆರ್‌ಪಿ ಖರೀದಿಸಲು ಸಾಧ್ಯವಾಗುತ್ತಿದೆ. ಬೇರೆ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಖರೀದಿಸಲು ಸಾಧ್ಯವಾಗುತ್ತಿಲ್ಲ. ದೇವೂ, ಓಪೆಲ್, ಮಿತ್ಸುಬಿಶಿ ಕಂಪನಿಯ ಕೆಲವು ಮಾದರಿಗಳು, ಪ್ರೀಮಿಯರ್ ಆಟೊ ಲಿಮಿಟೆಡ್‌ನ ಕಾರುಗಳಿಗೆ ಎಚ್‌ಎಸ್‌ಆರ್‌ಪಿ ಖರೀದಿಸಲು ಸಾಧ್ಯವಾಗುತ್ತಿಲ್ಲ.

ಎಸ್‌ಐಎಎಂ ಪೋರ್ಟಲ್‌ನಲ್ಲಿ ಈ ವಾಹನಗಳ ವಿವರ ನಮೂದಿಸಿದರೆ, 'ಎಚ್‌ಎಸ್‌ಆರ್‌ಪಿ ನೀಡಲು ಸಾಧ್ಯವಾಗುತ್ತಿಲ್ಲ. ನಿಮ್ಮ ವಾಹನದ ಡೀಲರ್ ಅನ್ನು ಸಂಪರ್ಕಿಸಿ' ಎಂಬ ಸಂದೇಶ ಬರುತ್ತದೆ. ಭಾರತದಲ್ಲಿ ಎಲ್ಲಾ ಸ್ವರೂಪದ ಕಾರ್ಯಾಚರಣೆ ಸ್ಥಗಿತಗೊಳಿಸಿರುವ ಕಂಪನಿಯ ಡೀಲರ್ ಅನ್ನು ಹುಡುಕುವುದು ಎಲ್ಲಿ ಎಂಬುದು ಹಲವರ ಪ್ರಶ್ನೆ.

ಹಾರ್ಲೆ ಡೇವಿಡ್‌ಸನ್ ಕಂಪನಿ ಬೈಕ್‌ಗಳದ್ದೂ ಇದೇ ಕತೆ. ಆ ಕಂಪನಿ ಭಾರತದಲ್ಲಿ ತನ್ನ ನೇರ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿದೆ. ಹಾರ್ಲೆ ಡೇವಿಡ್‌ಸನ್‌ನಿಂದ ನೇರವಾಗಿ ಬೈಕ್ ಖರೀದಿಸಿದ್ದವರಿಗೆ ಎಚ್‌ಎಸ್‌ಆರ್‌ಪಿ ಖರೀದಿಸಲು ಸಾಧ್ಯವಾಗುತ್ತಿಲ್ಲ. ಒಂದು ಎಚ್‌ಎಸ್‌ಆರ್‌ಪಿ ತಯಾರಕ ಕಂಪನಿಯು ಹಾರ್ಲೆ ಬೈಕ್‌ಗಳಿಗೆ ಎಚ್‌ಎಸ್‌ಆರ್‌ಪಿಯನ್ನು 'ಹೋಂ ಡೆಲಿವರಿ' ಮೂಲಕ ಒದಗಿಸುತ್ತಿದೆ. ಆದರೆ ಈ ಸೇವೆಯು ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲೂ ಲಭ್ಯವಿಲ್ಲ. ಬೆಂಗಳೂರಿನ ಕೆಲವು ಪ್ರದೇಶದಲ್ಲಿ ಈ ಸೇವೆ ಲಭ್ಯವಿದ್ದರೆ, ಕೆಲವು ಪ್ರದೇಶದಲ್ಲಿ ಈ ಸೇವೆ ಇಲ್ಲ.

- ಮಿನಿ ಕಂಪನಿಯ ಕೆಲವು ಮಾದರಿಗಳಿಗೆ ಎಚ್‌ಎಸ್‌ಆರ್‌ಪಿ ಖರೀದಿಸಲು ಸಾಧ್ಯವಾಗುತ್ತಿಲ್ಲ
- ಟಾಟಾ ಮೋಟರ್ಸ್‌ನ ಕೆಲವು ಮಾದರಿಗಳಿಗೆ ('ಟಾಟಾ ಎಂಜಿನಿಯರಿಂಗ್ ಅಂಡ್ ಲೋಕೊಮೋಟಿವ್ ಕಂಪನಿ ಲಿಮಿಟೆಡ್–ಟೆಲ್ಕೊ' ಹೆಸರಿನಲ್ಲಿ ಮಾರಾಟವಾಗಿದ್ದ ಮಾದರಿಗಳಿಗೆ) ಎಚ್‌ಎಸ್‌ಆರ್‌ಪಿ ಖರೀದಿಸಲು ಸಾಧ್ಯವಾಗುತ್ತಿಲ್ಲ
- ಸೇನಾ ವಾಹನಗಳ ಹರಾಜು ಪ್ರಕ್ರಿಯೆಯಲ್ಲಿ ಖರೀದಿಸಿದ್ದು, 2019ರ ಏಪ್ರಿಲ್ ನಂತರ ಬೇರೆ ವ್ಯಕ್ತಿಗಳ ಹೆಸರಿನಲ್ಲಿ ನೋಂದಣಿ ಮಾಡಲಾದ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಖರೀದಿಸಲು ಸಾಧ್ಯವಾಗುತ್ತಿಲ್ಲ
- ಬೇರೆ ರಾಜ್ಯಗಳಲ್ಲಿ ಖರೀದಿಸಿ, ಕರ್ನಾಟಕದಲ್ಲಿ ಹೊಸದಾಗಿ ನೋಂದಣಿ ಮಾಡಿಸಿದ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಖರೀದಿಸಲು ಸಾಧ್ಯವಾಗುತ್ತಿಲ್ಲ
- ಒಂದು ಪ್ರಾದೇಶಿಕ ಕಚೇರಿಯಲ್ಲಿ (ಉದಾಹರಣೆಗೆ: KA02) ನೋಂದಣಿ ಮಾಡಿಸಿರುವ ವಾಹನಕ್ಕೆ ಎನ್‌ಒಸಿ ಪಡೆದು, ಬೇರೆ ಪ್ರಾದೇಶಿಕ ಕಚೇರಿಯಲ್ಲಿ (ಉದಾಹರಣೆಗೆ: KA04) ಮರುನೋಂದಣಿ ಮಾಡಿದ್ದರೆ, ಅಂತಹ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಖರೀದಿಯ ವೇಳೆ ತೊಡಕಾಗುತ್ತಿದೆ

ಕೆಲವು ಮಿಥ್ಯೆ ಮತ್ತು ವಾಸ್ತವ



ಎಚ್‌ಎಸ್‌ಆರ್‌ಪಿ
ಇದರಲ್ಲಿ ಲೇಸರ್ ಮೂಲಕ ಕೆತ್ತಲಾದ ವಿಶೇಷ ಗುರುತಿನ ಸಂಖ್ಯೆ ಇರುತ್ತದೆ



ಐಎನ್‌ಡಿ
ಇಂತಹ ನೋಂದಣಿ ಫಲಕ ಇದ್ದರೂ, ಎಚ್‌ಎಸ್‌ಆರ್‌ಪಿ ಮಾಡಿಸಲೇಬೇಕು

IND ನೋಂದಣಿ ಫಲಕಗಳು ಎಚ್‌ಎಸ್‌ಆರ್‌ಪಿಗಳಲ್ಲ

ಬಹಳಷ್ಟು ಮಂದಿ ತಮ್ಮ ವಾಹನದಲ್ಲಿರುವ IND ನೋಂದಣಿ ಫಲಕಗಳನ್ನೇ ಎಚ್‌ಎಸ್‌ಆರ್‌ಪಿ ಎಂದು ಅಂದುಕೊಂಡಿದ್ದಾರೆ. ಆದರೆ ಎರಡೂ ಭಿನ್ನವಾದ ನೋಂದಣಿ ಫಲಕಗಳು. ರಸ್ತೆ ಬದಿಯ ಸ್ಟಿಕ್ಕರ್ ಕಟಿಂಗ್ ಅಂಗಡಿಯಿಂದ ಬರೆಸಿದ ಅಥವಾ ಕಟ್ಟಿಂಗ್ ಮಾಡಿಸಿದ ನೋಂದಣಿ ಫಲಕಗಳಿಗೆ ಎಷ್ಟು ಮಾನ್ಯತೆ ಇದೆಯೋ IND ನೋಂದಣಿ ಫಲಕಗಳಿಗೆ ಇರುವುದೂ ಅಷ್ಟೇ ಮಾನ್ಯತೆ.

IND ನೋಂದಣಿ ಫಲಕಗಳಲ್ಲಿ ಯಾವುದೇ ಸುರಕ್ಷತಾ ಸೌಲಭ್ಯಗಳು ಇರುವುದಿಲ್ಲ. ಎಚ್‌ಎಸ್‌ಆರ್‌ಪಿಯಲ್ಲಿ ಮುಂಬದಿಯ ನೋಂದಣಿ ಫಲಕಕ್ಕೆ ಒಂದು ಪ್ರತ್ಯೇಕ ಗುರುತಿನ ಸಂಖ್ಯೆ ಇರುತ್ತದೆ ಮತ್ತು ಹಿಂಬದಿಯಕ್ಕೆ ಬೇರೆಯದೇ ಗುರುತಿನ ಸಂಖ್ಯೆ ಇರುತ್ತದೆ. ವಾಹನದ ನೋಂದಣಿ ಸಂಖ್ಯೆ ಮತ್ತು ಎಚ್‌ಎಸ್‌ಆರ್‌ಪಿಯ ಗುರುತಿನ ಸಂಖ್ಯೆಯೂ ಒಂದೇ ಅಲ್ಲ. ಇಂತಹ ಗುರುತಿನ ಸಂಖ್ಯೆ ಇರುವ ಫಲಕಗಳು ಮಾತ್ರವೇ ಅಧಿಕೃತ. ಅವನ್ನಷ್ಟೇ ಎಚ್‌ಎಸ್‌ಆರ್‌ಪಿ ಎಂದು ಪರಿಗಣಿಸಲಾಗುತ್ತದೆ. ನಾಲ್ಕು ಅಥವಾ ಅದಕ್ಕಿಂತ ಹೆಚ್ಚಿನ ಚಕ್ರಗಳಿರುವ ಎಲ್ಲಾ ಸ್ವರೂಪದ ವಾಹನಗಳಿಗೆ ಮುಂಬದಿಯ ಗಾಜಿನ ಮೇಲೆ ಅಂಟಿಸಲು ಮೂರನೇ ಎಚ್‌ಎಸ್‌ಆರ್‌ಪಿಯನ್ನೂ ಕೊಡಲಾಗುತ್ತದೆ. ಎಚ್‌ಎಸ್‌ಆರ್‌ಪಿ ವೇಳೆ ಈ ಮೂರೂ ಫಲಕಗಳು ಇದ್ದರಷ್ಟೇ ಅದು ಅಧಿಕೃತ (ದ್ವಿಚಕ್ರ ವಾಹನಗಳಿಗೆ ಇದು ಅನ್ವಯವಾಗುವುದಿಲ್ಲ). ಈ ಮೊದಲು ಎಚ್‌ಎಸ್‌ಆರ್‌ಪಿಯಲ್ಲಿ ಬಾರ್‌ಕೋಡ್ ಸಹ ಇರಬೇಕು ಎಂಬ ನಿಯಮ ಇತ್ತು. ನಿಯಮಕ್ಕೆ ತಿದ್ದುಪಡಿ ಮಾಡಿ, ಅದನ್ನು ಕೈಬಿಡಲಾಯಿತು.

15 ವರ್ಷಕ್ಕಿಂತ ಹಳೆಯ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ನೀಡುವುದಿಲ್ಲ ಎಂಬುದು ನಿಜವಲ್ಲ



15 ವರ್ಷಕ್ಕಿಂತ ಹಳೆಯ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ನೀಡುವುದಿಲ್ಲ ಎಂಬ ಸುಳ್ಳು ಸುದ್ದಿ ಜನಸಾಮಾನ್ಯರ ನಡುವೆ ಹರಿದಾಡುತ್ತಿದೆ. ಬೆಂಗಳೂರಿನ ರಾಜಾಜಿನಗರದ ನಿವಾಸಿ ಮಧುಕುಮಾರ್ ಅವರ ಬಜಾಜ್ ಪಲ್ಸರ್–150 ಬೈಕ್‌ಗೆ 15 ವರ್ಷವಾಗಿದೆ. ಆರು ತಿಂಗಳ ಹಿಂದೆಯಷ್ಟೇ ಅದರ ಅರ್ಹತಾ ಪತ್ರವನ್ನು (ಎಫ್‌ಸಿ) ಅವರು ನವೀಕರಿಸಿದ್ದಾರೆ. ಆದರೆ ಅವರ ಬೈಕ್‌ಗೆ ಎಚ್‌ಎಸ್‌ಆರ್‌ಪಿ ಖರೀದಿಸಲು ಸಾಧ್ಯವಾಗುತ್ತಿಲ್ಲ. ಖರೀದಿ ವೇಳೆ 'ನಿಮ್ಮ ವಾಹನದ ವಿವರ ತಾಳೆಯಾಗುತ್ತಿಲ್ಲ' ಎಂಬ ಸಂದೇಶ ಬರುತ್ತಿದೆ. '15 ವರ್ಷಕ್ಕಿಂತ ಹಳೆಯ ವಾಹನಕ್ಕೆ ಎಚ್‌ಎಸ್‌ಆರ್‌ಪಿ ನೀಡುವುದಿಲ್ಲ. ಹೀಗಾಗಿ ಬೈಕ್ ಮಾರಾಟ ಮಾಡುತ್ತೇನೆ ಎಂದು ಹೊರಟೆ. ಆದರೆ ಎಚ್‌ಎಸ್‌ಆರ್‌ಪಿ ಇಲ್ಲ ಎಂದು ಬೈಕ್ ಕೊಳ್ಳುವವರೇ ಇಲ್ಲ' ಎಂದು ಅವರು ವಿವರಿಸಿದರು.

ಆದರೆ ಇದು ನಿಜವಲ್ಲ. ಎಚ್‌ಎಸ್‌ಆರ್‌ಪಿ ಪಡೆಯಲು ವಾಹನ ಎಷ್ಟೇ ಹಳೆಯದಾಗಿದ್ದರೂ ಸಮಸ್ಯೆ ಇಲ್ಲ. 25 ವರ್ಷಕ್ಕಿಂತ ಹಳೆಯ ವಾಹನಗಳಿಗೂ ಎಚ್‌ಎಸ್‌ಆರ್‌ಪಿ ದೊರೆತಿದೆ. ವಾಹನದ ನೈಜ ವಿವರ ಮತ್ತು ವಾಹನ್ ಪೋರ್ಟಲ್‌ನಲ್ಲಿ ಇರುವ ವಿವರ ತಾಳೆಯಾಗದೇ ಇರುವುದರಿಂದ ಹೀಗೆ ಆಗಿರಬಹುದು. ಸಂಬಂಧಿತ ಆರ್‌ಟಿಒ ಕಚೇರಿಗೆ ಭೇಟಿ ನೀಡಿ, ನಿಗದಿತ ಅರ್ಜಿಯನ್ನು ಕೊಟ್ಟು ವಿವರನ್ನು ಸರಿಪಡಿಸಿಕೊಂಡರೆ ಈ ಸಮಸ್ಯೆ ಬಗೆಹರಿಯುತ್ತದೆ. ಎಚ್‌ಎಸ್‌ಆರ್‌ಪಿ ಬಗ್ಗೆ ಜನರಲ್ಲಿ ಇರುವ ಇಂತಹ ಸುಳ್ಳು ಮಾಹಿತಿಗಳನ್ನು ಹೋಗಲಾಡಿಸುವ ಕೆಲಸವನ್ನು ಸಾರಿಗೆ ಇಲಾಖೆ ಮಾಡಬೇಕಿದೆ

ಆಧಾರ: ಎಚ್‌ಎಸ್‌ಆರ್‌ಪಿ ನಿಯಮಗಳು, ಎಚ್‌ಎಸ್‌ಆರ್‌ಪಿಗೆ ಸಂಬಂಧಿಸಿದ ರಾಜ್ಯ ಸಾರಿಗೆ ಇಲಾಖೆಯ ಆದೇಶಗಳು

ಸಿನಿ ಬಿಟ್ಸ್

ಫೆ.16ಕ್ಕೆ 'ಶಾಖಾಹಾರಿ' ಬಿಡುಗಡೆ


ಗೋಪಾಲಕೃಷ್ಣ ದೇಶಪಾಂಡೆ, ರಂಗಾಯಣ ರಘು

ರಂಗಾಯಣ ರಘು ಹಾಗೂ ಗೋಪಾಲಕೃಷ್ಣ ದೇಶಪಾಂಡೆ ಮುಖ್ಯಭೂಮಿಕೆಯಲ್ಲಿ ನಟಿಸಿರುವ, ಸಂದೀಪ್ ಸುಂಕದ್ ನಿರ್ದೇಶಿಸಿರುವ 'ಶಾಖಾಹಾರಿ' ಸಿನಿಮಾ ಫೆ.16ರಂದು ತೆರೆಕಾಣಲಿದೆ.

ಇತ್ತೀಚೆಗಷ್ಟೇ ಚಿತ್ರದ ಪ್ರಿರಿಲೀಸ್ ಕಾರ್ಯಕ್ರಮ ನಡೆಯಿತು. ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಹಾಗೂ ನಿರ್ದೇಶಕ ಸೂರಿ ಅತಿಥಿಯಾಗಿ ಆಗಮಿಸಿ ಚಿತ್ರತಂಡಕ್ಕೆ ಶುಭಹಾರೈಸಿದರು. ಕಾರ್ಯಕ್ರಮದಲ್ಲಿ ರಂಗಾಯಣ ರಘು ಅವರಿಗೆ 'ಶಾಖಾಹಾರಿ' ಚಿತ್ರತಂಡವು 'ಅಭಿನಯಾಸುರ' ಎಂಬ ಬಿರುದು ನೀಡಿ ಗೌರವಿಸಿತು. ಸಂದೀಪ್ ಅವರ ನಿರ್ದೇಶನದ ಈ ಚೊಚ್ಚಲ ಸಿನಿಮಾದಲ್ಲಿ ಮಲೆನಾಡಿನ ಸೊಗಡಿದೆ. ಶಿವಮೊಗ್ಗದ ತೀರ್ಥಹಳ್ಳಿಯ ಒಂದು ಊರಿನಲ್ಲಿ ನಡೆಯುವ ಕಥೆ ಹೊತ್ತ ಈ ಸಿನಿಮಾ ಒಂದಿಷ್ಟು ನಿಗೂಢ ಘಟನೆಗಳ ಸುತ್ತ ಹೆಣೆಯಲಾಗಿದೆ. ರಂಗಾಯಣ ರಘು ಅಡುಗೆ ಭಟ್ಟನಾಗಿ, ಪೊಲೀಸ್ ಅಧಿಕಾರಿ ಪಾತ್ರದಲ್ಲಿ ಗೋಪಾಲಕೃಷ್ಣ ದೇಶಪಾಂಡೆ ನಟಿಸಿದ್ದಾರೆ. ಸುಜಯ್ ಶಾಸ್ತ್ರಿ ಈ ಸಿನಿಮಾದ ಒಂದು ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಪ್ರತಿಮಾ ನಾಯಕ್, ಹರಿಣಿ, ವಿನಯ್ ಯು.ಜೆ., ಶ್ರೀಹರ್ಷ ಗೋಭಟ್ಟ, ನಿಧಿ ಹೆಗ್ಡೆ ತಾರಾಬಳಗದಲ್ಲಿದ್ದಾರೆ.

'ಇಲ್ಲಿಯವರೆಗೆ 350 ಸಿನಿಮಾವಾಗಿದೆ. ಈ ರೀತಿ ಪಾತ್ರವನ್ನೇ ಮಾಡಬೇಕು ಎಂದು ನಾನು ಯೋಚಿಸಿಲ್ಲ. ನಮಗೆ ದೊಡ್ಮನೆಯಿಂದ ದೊಡ್ಡ ಆಶೀರ್ವಾದ ಸಿಕ್ಕಿದೆ. ಚಿತ್ರರಂಗದ ಎಲ್ಲ ನಟರ ಜೊತೆ ಸಿನಿಮಾ ಮಾಡಿದ್ದೇನೆ. ಹೊಸಬರ ಜೊತೆಯೂ ಸಿನಿಮಾ ಮಾಡುತ್ತಿದ್ದೇನೆ. ಚಿತ್ರರಂಗಕ್ಕೆ ಹೊಸಬರು ಮತ್ತಷ್ಟು ಬರಲಿ ಎನ್ನುವ ಬಯಕೆ ನನ್ನದು' ಎಂದರು ರಘು.

ರಾಜೇಶ್ ಕೀಳಂಬಿ ಮತ್ತು ರಂಜಿನಿ ಪ್ರಸನ್ನ 'ಶಾಖಾಹಾರಿ' ಸಿನಿಮಾಗೆ ಬಂಡವಾಳ ಹೂಡಿದ್ದಾರೆ. ವಿಶ್ವಜಿತ್ ರಾವ್ ಛಾಯಾಚಿತ್ರಗ್ರಹಣ, ಶಶಾಂಕ್ ನಾರಾಯಣ ಸಂಕಲನ, ಮಯೂರ್ ಅಂಬೆಕಲ್ಲು ಸಂಗೀತ ಈ ಸಿನಿಮಾಗಿದೆ.

'ಜೊತೆಯಲೇ ಇರಲೇ' ಎಂದ ಜಾಯ್

ಈ ಹಿಂದೆ ಜೆ.ಜೆ. ಮೂವೀಸ್ ಬ್ಯಾನರ್ ಮೂಲಕ 'ನಾನೊಂಥರಾ' ಎಂಬ ಸಿನಿಮಾ ನಿರ್ಮಿಸಿದ್ದ ಜಾಕ್ವೆಲಿನ್ ಫ್ರಾನ್ಸಿಸ್ ಇದೀಗ ತಮ್ಮ ಪುತ್ರನನ್ನು ಕನ್ನಡ ಚಿತ್ರರಂಗಕ್ಕೆ ನಾಯಕನಾಗಿ ಪರಿಚಯಿಸುತ್ತಿದ್ದಾರೆ.

ಇನ್ನೂ ಹೆಸರಿಡದ ಈ ಚಿತ್ರದಲ್ಲಿ ಜಾಯ್ ನಾಯಕನಾಗಿ ಕಾಣಿಸಿಕೊಳ್ಳುತ್ತಿದ್ದು, ಸ್ನಿಗ್ಧಾ ಶೆಟ್ಟಿ ಅವರಿಗೆ ಜೋಡಿಯಾಗಿದ್ದಾರೆ. ಆರ್ಯನ್ ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಚಿತ್ರದ 'ಜೊತೆಯಲೇ ಇರಲೇ' ಎಂಬ ರೊಮ್ಯಾಂಟಿಕ್ ವೀಡಿಯೊ ಹಾಡು ಇತ್ತೀಚೆಗೆ ಬಿಡುಗಡೆಗೊಂಡಿತು.

'ಇದೊಂದು ರೊಮ್ಯಾಂಟಿಕ್ ಯೂತ್‌ಫುಲ್ ಜಾನರ್‌ನ ಸಿನಿಮಾ. ನಾನು ಈ ಹಿಂದೆ 'ಕಿಲ್ಲಿಂಗ್ ವೀರಪ್ಪನ್' ಸೇರಿದಂತೆ ಒಂದಷ್ಟು ಚಿತ್ರಗಳಿಗೆ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ್ದೇನೆ. ಇದು ನನ್ನ ನಿರ್ದೇಶನದ ಮೊದಲ ಚಿತ್ರ. ಮಾರ್ಚ್ ಅಂತ್ಯದಿಂದ ಚಿತ್ರದ ಚಿತ್ರೀಕರಣ ಪ್ರಾರಂಭವಾಗಲಿದೆ. ಗೋವಾ, ಶಿರಸಿ, ಹೊನ್ನಾವರ, ಗೋಕರ್ಣ ಸುತ್ತಮುತ್ತ ಚಿತ್ರೀಕರಣ ನಡೆಸಲಿದ್ದೇವೆ. ಡಿಸೆಂಬರ್ ವೇಳೆಗೆ ಚಿತ್ರವನ್ನು ಬಿಡುಗಡೆ ಮಾಡುವ ಯೋಜನೆ ಇದೆ' ಎನ್ನುತ್ತಾರೆ ಆರ್ಯನ್.


ಸ್ನಿಗ್ಧಾ ಶೆಟ್ಟಿ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ **ಭಾರತ ನ್ಯಾಯ ಯಾತ್ರೆಗೆ** ಸಂಬಂಧಿಸಿದ ರ‍್ಯಾಲಿಯೊಂದರಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಭಾಷಣದ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. '50ಕ್ಕೆ 15ನ್ನು ಕೂಡಿಸಿದರೆ ಎಷ್ಟಾಗುತ್ತದೆ ಹೇಳಿ' ಎಂದು ಜನರನ್ನು ಉದ್ದೇಶಿಸಿ ರಾಹುಲ್ ಅವರು ಕೇಳುತ್ತಾರೆ. ನಂತರ ರಾಹುಲ್ ಅವರೇ 73 ಎಂದು ಉತ್ತರವನ್ನೂ ಹೇಳುತ್ತಿರುವುದು ವಿಡಿಯೊದಲ್ಲಿ ಇದೆ. ರಾಹುಲ್ ಗಾಂಧಿ ಅವರಿಗೆ ಗಣಿತ ಬರುವುದಿಲ್ಲ ಎಂಬಂಥ ಅರ್ಥದ ಪೋಸ್ಟ್‌ಗಳನ್ನು ಈ ವಿಡಿಯೊದೊಂದಿಗೆ ಹಂಚಿಕೊಳ್ಳಲಾಗುತ್ತಿದೆ. 'ರಾಹುಲ್ ಗಾಂಧಿ ಪ್ರಕಾರ, 50 + 15 = 73' ಎಂದೂ ಬರೆದುಕೊಳ್ಳಲಾಗುತ್ತಿದೆ. ಆದರೆ, ಇದು ತಿರುಚಿದ ವಿಡಿಯೊವಾಗಿದೆ.

✓ **ರಾಹುಲ್ ಗಾಂಧಿ** ಅವರು ಛತ್ತೀಸಗಢದಲ್ಲಿ ಮಾಡಿದ ಭಾಷಣದ ವಿಡಿಯೊ ಇದಾಗಿದೆ. ಈ ಭಾಷಣದಲ್ಲಿ ರಾಹುಲ್ ಅವರು ಹಿಂದುಳಿದ ವರ್ಗ, ದಲಿತರು ಹಾಗೂ ಆದಿವಾಸಿಗಳ ಜನಸಂಖ್ಯೆಯ ಕುರಿತು ಮಾತನಾಡಿದ್ದಾರೆ. ರಾಹುಲ್ ಗಾಂಧಿ ಅವರ ಯೂಟ್ಯೂಬ್ ಖಾತೆಯಲ್ಲಿ ಪೂರ್ಣ ವಿಡಿಯೊ ದೊರೆಯುತ್ತದೆ. ಪತ್ರಿಕಾಗೋಷ್ಠಿಯಲ್ಲಿ ತಮ್ಮ ಹಾಗೂ ಪತ್ರಕರ್ತರೊಬ್ಬರ ನಡುವಣ ಸಂಭಾಷಣೆಯನ್ನು ರಾಹುಲ್ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ. 'ಈ ದೇಶದಲ್ಲಿ ಹಿಂದುಳಿದ ವರ್ಗದವರು ಶೇ 50–55ರಷ್ಟು ಇದ್ದಾರೆ, ದಲಿತರು ಶೇ 15ರಷ್ಟು ಹಾಗೂ ಆದಿವಾಸಿಗಳು ಶೇ 8ರಷ್ಟು ಇದ್ದಾರೆ. ಹಾಗಾದರೆ, 50 + 15 + 8 ಕೂಡಿದರೆ ಎಷ್ಟಾಯಿತು?' ಎಂದು ಜನರನ್ನು ಉದ್ದೇಶಿಸಿ ಮಾತನಾಡಿದ್ದಾರೆ. ಅವರೇ ಉತ್ತರವನ್ನೂ ಕೊಟ್ಟು '73 ಆಯಿತು' ಎಂದಿದ್ದಾರೆ. ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊವನ್ನು ತಿರುಚಿ, ಅವರು ಶೇ 8ರಷ್ಟು ಕುರಿತು ಆಡಿರುವ ಮಾತುಗಳನ್ನು ಎಡಿಟ್ ಮಾಡಲಾಗಿದೆ. ಆದ್ದರಿಂದ, ರಾಹುಲ್ ಅವರು ತಪ್ಪು ಗಣಿತದ ಲೆಕ್ಕಾಚಾರ ಮಾಡಿಲ್ಲ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಫೆಬ್ರುವರಿ 13, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ಚತುರ್ಥಿ ಗಂ. 14-43 ನಕ್ಷತ್ರ: ಉತ್ತರಾಭಾದ್ರ ಗಂ. 12-36 ಯೋಗ: ಸಾಧ್ಯಾ ಗಂ. 23-05 ಕರಣ: ವಿಷ್ಟಿ ಗಂ. 14-43, ಮಕರ ಮಾಸದ 30 ನೇ ದಿನ, ಮಳೆನಕ್ಷತ್ರ: ಧನಿಷ್ಠಾ 3.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-58 ಸೂರ್ಯಾಸ್ತ : 06-32
ಮುಸ್ಲಿಂ ದಿನಾಂಕ : 02 ಶಬನ್
ದಿನ ವಿಶೇಷ : ವರದ ಚತುರ್ಥಿ, ಅದೃಷ್ಟ ಸಂಖ್ಯೆ : 10, 8

ಮೇಷ: ಶ್ರಮದಿಂದ ಸಾಲ ತೀರಿಸಿದ ನೆಮ್ಮದಿ ನಿಮ್ಮದಾಗಲಿದೆ. ವೃತ್ತಿಯ ಪರವಾಗಿ ಬಹಳ ಮುಖ್ಯ ಕೆಲಸವನ್ನು ಮಾತ್ರ ಈ ದಿನ ಕೈಗೆತ್ತಿಕೊಳ್ಳಿ. ಸ್ವಂತ ಉದ್ಯೋಗಿಗಳಿಗೆ ಅಧಿಕ ಲಾಭ.

ವೃಷಭ: ಮಾತಿನಿಂದ ಕಾರ್ಯ ಸಾಧಿಸುವ ಗುಣದಿಂದ ಅನುಕೂಲಕರ ವಾತಾವರಣ ಕಾಣುವಿರಿ. ದಾರಿಗೆದುರಾಗಿ ಉತ್ತಮ ಅವಕಾಶಗಳು ಹುಡುಕಿ ಬರಲಿದೆ. ಸಗಟು ವ್ಯಾಪಾರಿಗಳಿಗೆ ಒಳ್ಳೆಯ ಸಮಯ.

ಮಿಥುನ: ಇತ್ತೀಚಿನ ದಿನದಲ್ಲಿ ವೈರಾಗ್ಯ ಹೊಂದಿರುವ ನೀವು ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಂಡು ಪರಿಶ್ರಮದಿಂದ ದುಡಿದರೆ ಪ್ರಗತಿಯ ಹಾದಿ ಕಾಣಬಹುದು. ಉದ್ಯೋಗ ನಿಮಿತ್ತ ವಿದೇಶಕ್ಕೆ ಹೋಗುವ ಕನಸು ಚಿಗುರೊಡೆಯಲಿದೆ.

ಕರ್ಕಾಟಕ: ಕುಟುಂಬದವರೊಡನೆ ಮನರಂಜನೆಗಾಗಿ ಅಲ್ಪಕಾಲ ಮೀಸಲಿಡಲು ಪ್ರಯತ್ನಿಸಿ. ನೂತನ ಗೃಹ ನಿರ್ಮಾಣದ ಯೋಜನೆಗೆ ಯೋಚಿಸಬಹುದು. ರಕ್ತದೊತ್ತಡ ವ್ಯತ್ಯಾಸವಾಗುವ ಸಾಧ್ಯತೆ ಇರುವುದರಿಂದ ಜಾಗ್ರತರಾಗಿರಿ.

ಸಿಂಹ: ಗೃಹೋಪಕರಣ ವಸ್ತುಗಳ ಖರೀದಿಯಲ್ಲಿ ಹಾಗೂ ಕೆಲವಾರು ಯೋಜನೆಗಳಲ್ಲಿ ಎಡವಿದ ಅನುಭವ ನಿಮಗಾಗಬಹುದು. ಕಮಿಷನ್ ಏಜೆಂಟ್‌ಗಳಿಗೆ ಮತ್ತು ಸರಕು ಸಾಗಾಣೆದಾರರಿಗೆ ಇಂದು ಉತ್ತಮವಾದ ದಿನ.

ಕನ್ಯಾ: ಕುಟುಂಬದಲ್ಲಿ ನಡೆಯುವ ಶುಭಸಮಾರಂಭಗಳ ಸಂಭ್ರಮವು ಹಿರಿಯರ ಮನಸ್ಸಿಗೆ ಸಂತೋಷ, ನೆಮ್ಮದಿ ತರುತ್ತದೆ. ಇಂದು ನಿಮ್ಮ ಹತ್ತಿರದವರಿಂದ ಅಡೆತಡೆ ಉಂಟಾಗಲಿದೆ. ಭಕ್ತಿಯಿಂದ ಮಹಾಗಣಪತಿಯನ್ನು ಆರಾಧಿಸಿ.

ತುಲಾ: ಸ್ನೇಹಿತರಲ್ಲಿ ಸಣ್ಣಪುಟ್ಟ ಕಾರಣಗಳಿಗಾಗಿ ಅಥವಾ ವಿನಾಕಾರಣವಾಗಿ ದ್ವೇಷವನ್ನು ಬೆಳೆಸಿಕೊಳ್ಳಬೇಡಿ. ಹವ್ಯಾಸಿ ಬರಹಗಾರರಿಗೆ ಹೇರಳ ಅವಕಾಶ ಇರಲಿದೆ. ಸಹೋದ್ಯೋಗಿಗಳನ್ನು ಹುರಿದುಂಬಿಸುವ ಕೆಲಸವನ್ನು ಮಾಡಿ.

ವೃಶ್ಚಿಕ: ಆಲೋಚನೆಗಳಿಗೆ ಗ್ರಹಣ ಸಂಭವಿಸಿದಂತಾಗುವುದರಿಂದ ಅಸಮಾಧಾನ, ಹೆದರಿಕೆ, ಧೈರ್ಯಗೆಡುವಂತೆ ಆಗಲಿದೆ. ಸರ್ಕಾರಿ ಗುತ್ತಿಗೆದಾರರಿಗೆ ಬಹಳ ದಿನಗಳಿಂದ ಬಾಕಿ ಇದ್ದ ಕಾಮಗಾರಿ ಹಣ ಮಂಜೂರಾಗಲಿದೆ.

ಧನು: ಹಿರಿಯರ ಆಸ್ತಿ ಲಭಿಸಲಿದೆ. ಅವಕಾಶಗಳನ್ನು ಹೆಚ್ಚಿಸಿಕೊಳ್ಳಲು ಈ ಸಂದರ್ಭವನ್ನು ಸೂಕ್ತವಾಗಿ ಬಳಸಿಕೊಳ್ಳಿ. ಎಂಜಿನಿಯರ್‌ಗಳ ಕೆಲಸದ ಸಮಯದಲ್ಲಿ ಬದಲಾವಣೆಯಾಗಬಹುದು.


ಮಕರ: ಹಣ ಹೂಡಿಕೆ ವಿಚಾರದಲ್ಲಿ ಯೋಚಿಸಿ ನಿರ್ಧಾರ ಕೈಗೊಳ್ಳುವುದು ಉತ್ತಮ. ವಿದ್ಯಾರ್ಥಿಗಳಿಗೆ ಹಿನ್ನಡೆ ಉಂಟಾಗಿ ಸ್ವಾಭಿಮಾನಕ್ಕೆ ಧಕ್ಕೆ ಬರುವಂತಾಗುವುದು. ಸುಗಂಧ ವಸ್ತುಗಳ ಮಾರಾಟದಲ್ಲಿ ಹೆಚ್ಚಳ.

ಕುಂಭ: ನಿಮ್ಮ ಮನಸ್ಥಿತಿಗೆ, ಆಲೋಚನೆಗಳಿಗೆ ಸರಿಯಾದ ವಾತಾವರಣ ದೊರಕುವ ಲಕ್ಷಣಗಳಿವೆ. ಪಾಕಪ್ರವೀಣರಿಗೆ ವೃತ್ತಿಯಲ್ಲಿ ಹೆಸರು ಸಂಪಾದನೆ ಮಾಡುವ ಕಾಲ ಒದಗಿಬರಲಿದೆ. ಸಂಜೆ ಶುಭ ಸುದ್ದಿಯೊಂದು ಬರಲಿದೆ.

ಮೀನ: ಆಧ್ಯಾತ್ಮಿಕ ವಿಷಯಗಳಲ್ಲಿ ಆಸಕ್ತಿ ಹೆಚ್ಚಿ ಗ್ರಂಥ ಸಂಪಾದನೆ, ಪ್ರಕಟಣೆ ಕಾರ್ಯಗಳಲ್ಲಿ ತೊಡಗುವಿರಿ. ಶ್ವಾಸಕೋಶಕ್ಕೆ ಸಂಬಂಧ ಪಟ್ಟ ಕಾಯಿಲೆಗಳ ಬಗ್ಗೆ ನಿಗಾ ಇರಲಿ. ನಿಕಟ ವ್ಯಕ್ತಿಗಳ ಜೊತೆಗೆ ವಾಗ್ವಾದಕ್ಕೆ ಇಳಿಯಬೇಡಿ.

ನುಡಿ ಬೆಳಗು

ರಾಜ ಮತ್ತು ಸಂತ



ಪಿ. ಚಂದ್ರಿಕಾ

ರಾಜನೊಬ್ಬನಿಗೆ ಧರ್ಮದ ಬಗ್ಗೆ ಹೆಚ್ಚು ತಿಳಿದರೆ ತನ್ನ ರಾಜ್ಯಭಾರ ಇನ್ನಷ್ಟು ಧಾರ್ಮಿಕತೆಯಿಂದ ತುಂಬಿ ಜನರಿಗೆ ಹೆಚ್ಚು ಉಪಯೋಗವಾಗುತ್ತದೆ ಎನ್ನಿಸುತ್ತದೆ. ಅದಕ್ಕಾಗಿ ಅವನು ಸರಿಯಾದ ಧಾರ್ಮಿಕ ವ್ಯಕ್ತಿಯನ್ನು ಹುಡುಕತೊಡಗುತ್ತಾನೆ. ಅವನಿಗೆ ಒಂದು ದಿನ ಸಂದೇಶವೊಂದು ಬರುತ್ತದೆ. ಒಬ್ಬ ಸಂತನು ಊರ ಹೊರಗಿನ ಅರಳಿ ಕಟ್ಟೆಯ ಮೇಲೆ ಕುಳಿತಿದ್ದಾನೆ. ಅವನ ಮುಖದ ಪ್ರಜ್ವಲತೆಯನ್ನು ನೋಡಿದಾಗ ಅವನಿಗೆ ಅನೇಕ ಸಂಗತಿಗಳು ಗೊತ್ತಿವೆ ಎನ್ನುವುದು ಅರ್ಥವಾಗುತ್ತದೆ ಎಂದು. ರಾಜ ಅತ್ಯಂತ ಕುತೂಹಲದಿಂದ ಅವನನ್ನು ನೋಡಲು ಆತುರಾತುರವಾಗಿ ಹೊರಡುತ್ತಾನೆ.

ರಾಜ ಸಂತನನ್ನು ಕಾಣುತ್ತಾನೆ. ಅವನ ಮುಖದ ತೇಜಸ್ಸು ಹೇಳುತ್ತದೆ ಈತನಿಗೆ ದೇವರ ಬಗೆಗೆ ಅರಿವಿದೆ ಎಂದು. ಇಬ್ಬರೂ ಉಭಯ ಕುಶಲೋಪರಿ ಮಾತನಾಡುತ್ತಾರೆ. ರಾಜ 'ನಾನು ಧರ್ಮದ ಬಗ್ಗೆ ಒಂದಿಷ್ಟು ಸಂಗತಿಗಳನ್ನು ತಿಳಿಯಲು ನಿಮ್ಮ ಬಳಿ ಬಂದಿದ್ದೇನೆ ಇದರಿಂದ ನನ್ನ ರಾಜ್ಯದ ಜನರಿಗೆ ಉಪಯೋಗವಾಗುತ್ತದೆ' ಎಂದ. ಅತ್ಯಂತ ಮೃದುಭಾಷಿಯಾಗಿದ್ದ ಆ ಸಂತ ರಾಜ್ಯದ ಬಗ್ಗೆ, ಪ್ರಜೆಗಳ ಬಗ್ಗೆ, ಆರ್ಥಿಕತೆಯ ಬಗ್ಗೆ ಕೇಳಿದ. ರಾಜನೂ ಅಷ್ಟೇ ವಿನಮ್ರತೆಯಿಂದ ಎಲ್ಲಕ್ಕೂ ಉತ್ತರ ಕೊಟ್ಟ.


ಸುಮಾರು ಒಂದು ವಾರ ಕಳೆಯಿತು. ರಾಜ ದೇವರ ಬಗ್ಗೆ ಮಾತಾಡಲು ಬಂದರೆ ಸಂತ ರಾಜ್ಯದ ಬಗ್ಗೆ ಮಾತಾಡುತ್ತಿದ್ದ. ರಾಜನಿಗೆ ತಾನು ಮಾತಾಡಬೇಕೆಂದಿದ್ದ ಸಂಗತಿಯನ್ನು ಮಾತಾಡಲಾಗದೆ ಹೋಗುತ್ತಿತ್ತು. ಕಡೆಗೆ ಒಂದು ದಿನ ರಾಜ ಅತ್ಯಂತ ಬೇಸರದಿಂದ, 'ನಾನು ನಿಮ್ಮ ಬಳಿಗೆ ಬರುತ್ತಿರುವುದು ದೇವರು, ಧರ್ಮದ ಬಗ್ಗೆ ಮಾತನಾಡಲು. ಆದರೆ ನೀವು ರಾಜಕೀಯ ಮಾತಾಡುತ್ತಿದ್ದೀರಿ. ಸಂನ್ಯಾಸಿಗೆ ಯಾಕೆ ರಾಜ್ಯದ ಚಿಂತೆ? ನನಗ್ಯಾಕೋ ನೀವು ನನ್ನ ಹಾಗೆ ಲೋಕವ್ಯಕ್ತಿಯೇ ಹೊರತು ಸಂತನಲ್ಲ ಅನ್ನಿಸುತ್ತಿದೆ' ಎನ್ನುತ್ತಾನೆ. ಆಗ ಸಂತ ನಗುತ್ತಾ, 'ರಾಜ ಇದರಲ್ಲಿ ಅನುಮಾನ ಪಡಲಿಕ್ಕೆ ಯಾವ ವಿಷಯವಿದೆ? ನನಗೆ ತಿಳಿಯದ ವಿಷಯದ ಬಗ್ಗೆ ಕೇಳಬೇಕಲ್ಲವೇ?' ಎನ್ನುತ್ತಾನೆ. ಆಗ ರಾಜ, 'ರಾಜ್ಯದ ಬಗ್ಗೆ ತಿಳಿದು ನೀವು ಏನು ಮಾಡುವುದಿದೆ? ದೇವರನ್ನು ಬಿಟ್ಟು ಉಳಿದೆಲ್ಲವೂ ಕನಿಷ್ಠವಾದುದ್ದಲ್ಲವೆ?' ಎನ್ನುತ್ತಾನೆ. ಆಗ ಸಂತ, 'ರಾಜ ನೀನು ನನ್ನ ಬಳಿ ಬಂದಿರುವುದು ಧರ್ಮದಿಂದಾಗಿ ಜನರಿಗೆ ಪ್ರಯೋಜನವಾಗಬೇಕೆಂದು. ರಾಜ್ಯ, ಪಾಲನೆ, ಹಣ, ತೆರಿಗೆ, ಜನ ಯಾವುದೂ ನಾನು ತಿಳಿಯದ ವಿಷಯ. ನನ್ನ ಜ್ಞಾನವನ್ನು ನಿನ್ನ ಜ್ಞಾನದ ಜೊತೆಗೆ ಬೆರೆಸಿ, ಹೊಸದಾಗಿ ಏನನ್ನಾದರೂ ಕಂಡುಕೊಂಡು ಜನರಿಗೆ ಕೊಡಬೇಕೆಂದರೆ ನಿನ್ನ ಕೆಲಸವೂ ನನಗರ್ಥವಾಗಬೇಕು. ಇಲ್ಲದಿದ್ದರೆ ಎಲ್ಲವೂ ಒಣ ಉಪದೇಶ. ಅದರ ಬಗ್ಗೆ ಎಷ್ಟೇ ಚರ್ಚೆ ಮಾಡಿದರೂ, ಅದು ಯಾರಿಗೂ ಪ್ರಯೋಜನವಾಗಲಾರದು. ಇದರಿಂದ ನಮ್ಮಿಬ್ಬರ ಶ್ರಮ ವ್ಯರ್ಥವಾಗುತ್ತದೆ' ಎನ್ನುತ್ತಾನೆ. ಸಂತನ ಈ ಮಾತುಗಳು ರಾಜನಿಗೆ ಧರ್ಮ ಮತ್ತು ರಾಜಕೀಯವನ್ನು ಬೆರೆಸಿ ಪ್ರಜಾಹಿತವನ್ನು ಕಾಪಾಡಲು ಅನೇಕ ದಾರಿಗಳನ್ನು ತೆರೆಯಿತು.

ಪದಬಂಧ 5590

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮಾನವಿಟ್ಟುಕೊಂಡು ಮಾಡಿರುವ ಹೋಲಿಕೆ (4)
3.ಅವನ ಅಂತ್ಯವು ಈ ರೀತಿ ಬಂದಿದೆ! (4)
5.ತಿರುಗಿ ನಲಿಯುವಿಕೆ (3)
6.ತಾಕತ್ತಿಗಾಗಿ ಸೇವಿಸುವ ಮೊಟ್ಟೆ (2)
7.ಕೆಲಸಕ್ಕೆ ಬಾರದ ಮಾತಿದು (5)
10.ಕೆಡುಕಾಗಲೆಂದು ಬಯಸಿ ಹೇಳುವ ಮಾತು (2)
12.ಒನಪು ತೋರಿದಾಗ ಬಂದಿರುವ ಸ್ಮರಣೆ (3)
14.ಈತ ಅದೃಷ್ಟವಿಲ್ಲದವನು (4)
15.ವನದಲ್ಲಿ ಕಾಣಿಸಿದ ಬೆಳವಣಿಗೆ (4)

ಮೇಲಿಂದ ಕೆಳಕ್ಕೆ
1.ಪವಿತ್ರ ದಿನದಂದು ಧರಿಸಿರುವ ಜನಿವಾರ (4)
2.ಹಳೆಯದನ್ನು ಪುನಃ ಹೊಸತು ಮಾಡುವಿಕೆ (5)
3.ಹಿರಿಯ ಸಹೋದರನಿವನು (2)
4.ಹೊಚ್ಚ ಹೊಸದಾದುದು (4)
5.ಕಿರಿ ಸಹೋದರನು ಬಾರಿಸಿದ ಚರ್ಮ ವಾದ್ಯ (3)
7.ನೆನಪು ಮಾಡಿಕೊಂಡು ತೋರಿದ ಬಿನ್ನಾಣ! (3)
8.ಬೆಳ್ಳಿ ಹಬ್ಬವಿದು (5)
9.ಮನದೊಳಗಿರುವ ಕುಲ (4)
11.ಸಂಪೂರ್ಣವಾದ ಅರಿವು (4)
13.ತೊಂದರೆಯಾದ ಕ್ಷೌರ! (2)



5589ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗೊಟಾಯಿಸು
3.ಬಾಲರವಿ 5.ತಪ್ಪಲೆ
6.ಕೆತ್ತನೆ 8.ಸಂಯುಕ್ತ
9.ಮಲ್ಲಿಗೆ 10.ಕನಕ
12.ಹವೀಜ 14.ಕವಳಿಗೆ
15.ಗರಗಸ

ಮೇಲಿಂದ ಕೆಳಕ್ಕೆ:
1.ಗೊರಕೆ 2.ಸುತ
3.ಬಾಲೆ 4.ವಿಮುಕ್ತ
7.ನೆಲಮಾಳಿಗೆ 8.ಸಂಖ್ಯಾವಾಚಕ
9.ಮಣಕ 11.ಕಳಸ
12.ಹಗೆ 13.ಜಗ

ಸುಡೊಕು 5975

4		7		8			2	
6		5		9		4	1	
	2		6				3	5
5		3	2		1	8		
	1				9		4	2
	6			2		3		
		8	9				5	7
	5			3	4		9	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5974 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

ಭಾರತಕ್ಕೆ ದಕ್ಕಿದ ದೊಡ್ಡ ರಾಜತಾಂತ್ರಿಕ ವಿಜಯ: ಬಿಜೆಪಿ • ದೇಶದ ಸಂಭ್ರಮದಲ್ಲಿ ನಾವೂ ಭಾಗಿ: ಕಾಂಗ್ರೆಸ್

ಮರಣದಂಡನೆ: ಭಾರತೀಯರ ಬಿಡುಗಡೆ

ನವದೆಹಲಿ (ಪಿಟಿಐ): ಕತಾರ್‌ನಲ್ಲಿ ಮರಣ ದಂಡನೆ ವಿಧಿಸಲಾಗಿದ್ದ ಭಾರತೀಯ ನೌಕಾಪಡೆಯ ಎಂಟು ಮಂದಿ ಮಾಜಿ ಸಿಬ್ಬಂದಿಯನ್ನು ಬಿಡುಗಡೆ ಮಾಡಲಾಗಿದೆ. ಅವರಿಗೆ 2023ರ ಅಕ್ಟೋಬರ್ ತಿಂಗಳಲ್ಲಿ ಮರಣದಂಡನೆ ವಿಧಿಸಲಾಗಿತ್ತು. ನಂತರ ಇದನ್ನು ಜೈಲು ಶಿಕ್ಷೆಯನ್ನಾಗಿ ಪರಿವರ್ತಿಸಲಾಗಿತ್ತು. ಇದಾದ 46 ದಿನಗಳ ಬಳಿಕ ಇವರೆಲ್ಲ ಬಿಡುಗಡೆಯಾಗಿದ್ದಾರೆ.

ಬಿಡುಗಡೆ ಆಗಿರುವ ಎಂಟು ಮಂದಿಯ ಪೈಕಿ ಏಳು ಮಂದಿ ಸೋಮವಾರ ನಸುಕಿನಲ್ಲಿ ಭಾರತ ತಲುಪಿದ್ದಾರೆ. ಮೊದಲು ಮರಣದಂಡನೆಗೆ, ನಂತರ ಜೈಲುಶಿಕ್ಷೆಗೆ ಗುರಿಯಾಗಿದ್ದವರ ಬಿಡುಗಡೆಯು ಭಾರತಕ್ಕೆ ದಕ್ಕಿರುವ ದೊಡ್ಡ ರಾಜತಾಂತ್ರಿಕ ವಿಜಯ ಎಂದು ವಿಶ್ಲೇಷಿಸಲಾಗಿದೆ.

2022ರ ಆಗಸ್ಟ್‌ನಲ್ಲಿ ಬಂಧನಕ್ಕೊಳಗಾಗಿದ್ದ ಭಾರತೀಯರ ಬಿಡುಗಡೆಗೆ ನೆರವಾಗಿದ್ದಕ್ಕೆ ಕತಾರ್‌ನ ಅಮೀರ್ (ದೇಶದ ಮುಖ್ಯಸ್ಥ) ಶೇಖ್ ತಮೀಮ್ ಬಿನ್ ಹಮದ್ ಅಲ್‌–ತಾನಿ ಅವರಿಗೆ ಭಾರತವು ಕೃತಜ್ಞತೆ ಸಲ್ಲಿಸುತ್ತದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಎಂಟೂ ಮಂದಿಯ ವಿರುದ್ಧ ಬೇಹುಗಾರಿಕೆ ನಡೆಸಿದ ಆರೋಪ ಹೊರಿಸಲಾಗಿತ್ತು ಎನ್ನಲಾಗಿದೆ. ಅವರ ವಿರುದ್ಧದ ದೋಷಾರೋಪ ಏನಿತ್ತು ಎಂಬುದನ್ನು ಕತಾರ್‌ನ ಅಧಿಕಾರಿಗಳಾಗಲಿ, ಭಾರತದ ಅಧಿಕಾರಿಗಳಾಗಲಿ ಬಹಿರಂಗಪಡಿಸಿಲ್ಲ. 'ದಹ್ರಾ ಗ್ಲೋಬಲ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಎಂಟು ಮಂದಿ ಭಾರತೀಯರ ಬಿಡುಗಡೆಯನ್ನು ಕೇಂದ್ರ ಸರ್ಕಾರ ಸ್ವಾಗತಿಸುತ್ತದೆ' ಎಂದು ಸಚಿವಾಲಯ ಹೇಳಿದೆ.

ಕಮಾಂಡರ್ ತಿವಾರಿ ಅವರು ದೋಹಾದಲ್ಲಿಯೇ ಉಳಿದುಕೊಂಡಿದ್ದು, ಅವರು ಶೀಘ್ರವೇ ಭಾರತಕ್ಕೆ ವಾಪಸ್ಸಾಗಲಿದ್ದಾರೆ ಎಂದು ಮೂಲಗಳು ಹೇಳಿವೆ. ಕೆಲವು ಪ್ರಕ್ರಿಯೆಗಳನ್ನು ಅವರು ಪೂರ್ಣಗೊಳಿಸಬೇಕಿದೆ ಎನ್ನಲಾಗಿದೆ.

ಈ ಎಂಟು ಮಂದಿಗೆ ಕತಾರ್‌ನ ನ್ಯಾಯಾಲಯವೊಂದು ಅಕ್ಟೋಬರ್ 26ರಂದು ಮರಣದಂಡನೆ ವಿಧಿಸಿತ್ತು. ಮರಣದಂಡನೆಯನ್ನು ಜೈಲು ಶಿಕ್ಷೆಯನ್ನಾಗಿ ಪರಿವರ್ತಿಸಿ ಕತಾರ್‌ನ ಮೇಲ್ಮನವಿ ನ್ಯಾಯಾಲಯವು ಡಿಸೆಂಬರ್ 28ರಂದು ಆದೇಶ ಹೊರಡಿಸಿತ್ತು. ಇವರಿಗೆ ಮೂರರಿಂದ 25 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿತ್ತು.

ಪ್ರಧಾನಿ ನರೇಂದ್ರ ಮೋದಿ ಅವರು ಕತಾರ್‌ನ ಅಮೀರ್ ಆಗಿರುವ ಶೇಖ್ ತಮೀಮ್ ಬಿನ್ ಹಮದ್ ಅಲ್‌–ತಾನಿ ಅವರನ್ನು ದುಬೈನಲ್ಲಿ ಡಿಸೆಂಬರ್‌ನಲ್ಲಿ ನಡೆದ ಸಿಒಪಿ28 ಶೃಂಗದ ಸಂದರ್ಭದಲ್ಲಿ ಭೇಟಿ ಮಾಡಿದ್ದರು. ಕತಾರ್‌ನಲ್ಲಿನ ಭಾರತೀಯ ಸಮುದಾಯದವರ ಯೋಗಕ್ಷೇಮದ ಬಗ್ಗೆ ಪ್ರಧಾನಿ ಚರ್ಚಿಸಿದ್ದರು.

ಎಂಟು ಮಂದಿಯ ಬಿಡುಗಡೆಯಲ್ಲಿ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಅವರ ಪಾತ್ರವೂ ಇದೆ. ಡೊಭಾಲ್ ಅವರು ಕತಾರ್‌ನ ಅಧಿಕಾರಿಗಳ ಜೊತೆ ಮಾತುಕತೆ ನಡೆಸಿದ್ದರು, ಹಲವು ಬಾರಿ ಕತಾರ್‌ಗೆ ಭೇಟಿ ನೀಡಿದ್ದರು ಎಂದು ಗೊತ್ತಾಗಿದೆ.

ಕಮಾಂಡರ್ ತಿವಾರಿ ಅವರ ಸಹೋದರಿ ಡಾ. ಮೀತು ಭಾರ್ಗವ ಅವರು, 'ನನ್ನ ಸಹೋದರ ಇನ್ನೂ ವಾಪಸ್ಸಾಗಿಲ್ಲ. ಆದರೆ ಅವರ ಬಿಡುಗಡೆ ಆಗಿದೆ. ಕುಟುಂಬಕ್ಕೆ ಸಂತೋಷವಾಗಿದೆ. ಸಹೋದರ ವಾಪಸ್ಸಾಗಿದ್ದಿದ್ದರೆ ಸಂತಸವು ಪರಿಪೂರ್ಣ ಆಗಿರುತ್ತಿತ್ತು' ಎಂದು ಗ್ವಾಲಿಯರ್‌ನಲ್ಲಿ ಸುದ್ದಿಸಂಸ್ಥೆಗೆ ಪ್ರತಿಕ್ರಿಯೆ ನೀಡಿದ್ದಾರೆ. ಮೀತು ಅವರು ಪ್ರಧಾನಿ ನರೇಂದ್ರ ಮೋದಿ, ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್, ಕೇಂದ್ರ ಸರ್ಕಾರ ಹಾಗೂ ಕತಾರ್‌ನ ಅಮೀರ್ ಅವರಿಗೆ ಧನ್ಯವಾದ ಅರ್ಪಿಸಿದ್ದಾರೆ.

ನೌಕಾಪಡೆಯ ಎಂಟು ಮಂದಿ ಮಾಜಿ ಯೋಧರ ವಿರುದ್ಧ ಕಳೆದ ವರ್ಷದ ಮಾರ್ಚ್ 25ರಂದು ಆರೋಪಪಟ್ಟಿ ಸಲ್ಲಿಸಲಾಗಿತ್ತು. ಅವರನ್ನು ಕತಾರ್‌ನ ನಿಯಮಗಳಿಗೆ ಅನುಗುಣವಾಗಿ ವಿಚಾರಣೆಗೆ ಗುರಿಪಡಿಸಲಾಗಿತ್ತು. ಅಲ್ ದಹ್ರಾ ಕಂಪನಿಯು ಕಳೆದ ವರ್ಷದ ಮೇ ತಿಂಗಳಲ್ಲಿ ತನ್ನ ಕಾರ್ಯಾಚರಣೆ ಸ್ಥಗಿತಗೊಳಿಸಿದೆ.

ಜೈಲು ಶಿಕ್ಷೆಗೆ ಗುರಿಯಾಗಿದ್ದ ಇವರನ್ನು ಭಾರತಕ್ಕೆ ಕರೆಸಿಕೊಳ್ಳಲು ದ್ವಿಪಕ್ಷೀಯ ಒಪ್ಪಂದವೊಂದನ್ನು ಆಶ್ರಯಿಸಲು ಭಾರತ ಆಲೋಚಿಸಿತ್ತು. 2015ರಲ್ಲಿ ಕತಾರ್ ಮತ್ತು ಭಾರತದ ನಡುವೆ ಆದ ಒಪ್ಪಂದವೊಂದರ ಪ್ರಕಾರ, ಕ್ರಿಮಿನಲ್ ಅಪರಾಧ ಎಸಗಿ ಜೈಲುಶಿಕ್ಷೆಗೆ ಗುರಿಯಾದವರಿಗೆ ತಮ್ಮ ದೇಶದಲ್ಲಿ ಆ ಶಿಕ್ಷೆಯನ್ನು ಅನುಭವಿಸಲು ಅವಕಾಶ ಕಲ್ಪಿಸಲಾಗುತ್ತದೆ.

'ಪ್ರಧಾನಿಯಿಂದ ಪ್ರಕರಣದ ಖುದ್ದು ಉಸ್ತುವಾರಿ'

ಪ್ರಧಾನಿ ನರೇಂದ್ರ ಮೋದಿ ಅವರು ಯುಎಇ ಭೇಟಿಯನ್ನು ಪೂರ್ಣಗೊಳಿಸಿದ ನಂತರ ಕತಾರ್‌ನ ರಾಜಧಾನಿ ದೋಹಾಕ್ಕೆ ಬುಧವಾರ ಭೇಟಿ ನೀಡಲಿದ್ದಾರೆ.

ಭಾರತೀಯ ನೌಕಾಪಡೆಯ ಎಂಟು ಮಂದಿ ಮಾಜಿ ಸಿಬ್ಬಂದಿಯನ್ನು ಕತಾರ್ ಬಿಡುಗಡೆ ಮಾಡಿರುವ ಸುದ್ದಿ ಬಂದ ನಂತರದಲ್ಲಿ ಮೋದಿ ಅವರ ಭೇಟಿ ಬಗ್ಗೆ ಪ್ರಕಟಣೆ ಹೊರಬಿದ್ದಿದೆ. ಆದರೆ, ಈ ಭೇಟಿಯನ್ನು ಮೊದಲೇ ಯೋಜಿಸಲಾಗಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ.

ಸಿಬ್ಬಂದಿಯ ಬಿಡುಗಡೆಗೆ ಪ್ರಕರಣದ ಉಸ್ತುವಾರಿಯನ್ನು ಪ್ರಧಾನಿ ಮೋದಿ ಅವರೇ ಖುದ್ದಾಗಿ ನಡೆಸಿದ್ದರು ಎಂದು ಕೇಂದ್ರದ ವಿದೇಶಾಂಗ ಕಾರ್ಯದರ್ಶಿ ವಿನಯ್ ಕ್ವಾತ್ರಾ ಹೇಳಿದ್ದಾರೆ. ಭಾರತೀಯರನ್ನು ಮರಳಿ ಕರೆತರಲು ಯಾವ ಕ್ರಮಕ್ಕೂ ಮೋದಿ ಅವರು ಹಿಂದೇಟು ಹಾಕಿರಲಿಲ್ಲ ಎಂದು ಕೂಡ ಕ್ವಾತ್ರಾ ತಿಳಿಸಿದ್ದಾರೆ.

ಭಾರತ ಮತ್ತು ಕತಾರ್ ನಡುವಿನ ಸಂಬಂಧವನ್ನು ಇನ್ನಷ್ಟು ಬಲಪಡಿಸಲು ಮೋದಿ ಮತ್ತು ಕತಾರ್‌ನ ಅಮೀರ್ ಆಗಿರುವ ಶೇಖ್ ತಮೀಮ್ ಬಿನ್ ಹಮದ್ ಅಲ್ ತಾನಿ ಅವರು ವಿಸ್ತೃತ ಮಾತುಕತೆ ನಡೆಸಲಿದ್ದಾರೆ ಎಂದು ಕೂಡ ಕ್ವಾತ್ರಾ ತಿಳಿಸಿದ್ದಾರೆ.

ದೋಹಾದಲ್ಲಿಯೇ ಇರುವ ಪೂರ್ಣೇಂದು ತಿವಾರಿ ಅವರನ್ನು ಭಾರತಕ್ಕೆ ಕರೆತರಲು ಕೇಂದ್ರ ಸರ್ಕಾರವು ಕತಾರ್ ಸರ್ಕಾರದ ಜೊತೆ ಮಾತುಕತೆ ಮುಂದುವರಿಸಿದೆ ಎಂದು ಕ್ವಾತ್ರಾ ತಿಳಿಸಿದ್ದಾರೆ.

ಕತಾರ್‌ನ ಅಮೀರ್ ಅವರೇ ಕ್ಷಮಾದಾನ ನೀಡಿದ್ದಾರೆಯೇ ಎಂಬ ಪ್ರಶ್ನೆಗೆ ಉತ್ತರಿಸಲು ಕ್ವಾತ್ರಾ ನಿರಾಕರಿಸಿದರು.

ಬಿಡುಗಡೆ ಆದವರು

ಕ್ಯಾಪ್ಟನ್‌ಗಳಾದ (ನಿವೃತ್ತ) ನವತೇಜ್ ಗಿಲ್, ಸೌರಭ್ ವಸಿಷ್ಠ; ಕಮಾಂಡರ್‌ಗಳಾದ (ನಿವೃತ್ತ) ಪೂರ್ಣೇಂದು ತಿವಾರಿ, ಅಮಿತ್ ನಾಗಪಾಲ್, ಎಸ್.ಕೆ. ಗುಪ್ತ, ಬಿ.ಕೆ. ವರ್ಮ ಮತ್ತು ಸುಗುಣಾಕರ್ ಪಕಾಲಾ; ಸೇಲರ್ ರಾಗೇಶ್.

ಬಿಜೆಪಿ, ಕಾಂಗ್ರೆಸ್ ಹರ್ಷ

ನೌಕಾಪಡೆಯ ಮಾಜಿ ಸಿಬ್ಬಂದಿಯ ಬಿಡುಗಡೆಯು ಭಾರತದ ಪಾಲಿಗೆ 'ದೊಡ್ಡ ರಾಜತಾಂತ್ರಿಕ ಜಯ' ಎಂದು ಬಿಜೆಪಿ ವಕ್ತಾರೆ ಶಾಜಿಯಾ ಇಲ್ಮಿ ಹೇಳಿದ್ದಾರೆ.

'ಇದನ್ನು ಸಾಧ್ಯವಾಗಿಸುವುದು (ಬಿಡುಗಡೆ) ಬಹಳ ಕಷ್ಟದ ಕೆಲಸ ಎಂದು ಒಂದು ಹಂತದಲ್ಲಿ ಅನ್ನಿಸಿತ್ತು. ಆದರೆ ಅವರು ಈಗ ಸುರಕ್ಷಿತವಾಗಿ ಮರಳಿದ್ದಾರೆ. ಇದು ಪ್ರತಿ ಭಾರತೀಯನಿಗೂ ದೊಡ್ಡ ಸುದ್ದಿ. ಪ್ರಧಾನಿ ನರೇಂದ್ರ ಮೋದಿ ಮತ್ತು ದೇಶದ ವಿದೇಶಾಂಗ ಸಚಿವಾಲಯದ ಮಾತುಗಳಿಗೆ ಎಷ್ಟು ಬೆಲೆ ಇದೆ ಎಂಬುದನ್ನು ಇದು ತೋರಿಸುತ್ತದೆ' ಎಂದು ಇಲ್ಮಿ ಹೇಳಿದ್ದಾರೆ.

ಎಂಟು ಮಂದಿಯ ಬಿಡುಗಡೆಗೆ ಕಾಂಗ್ರೆಸ್ ಸಂತಸ ವ್ಯಕ್ತಪಡಿಸಿದೆ. 'ಕತಾರ್‌ನಲ್ಲಿ ಗಲ್ಲು ಶಿಕ್ಷೆಗೆ ಗುರಿಯಾಗಿದ್ದ ಎಂಟು ಮಂದಿಯನ್ನು ಬಿಡುಗಡೆ ಮಾಡಲಾಗಿದೆ ಎಂಬ ವಿಚಾರವಾಗಿ ಇಡೀ ದೇಶದ ಸಂತಸದಲ್ಲಿ ಕಾಂಗ್ರೆಸ್ ಪಕ್ಷವೂ ಭಾಗಿ' ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ 'ಎಕ್ಸ್' ಮೂಲಕ ತಿಳಿಸಿದ್ದಾರೆ.

ಪಕ್ಷವು ತನ್ನ ಶುಭಾಶಯಗಳನ್ನು ಅವರಿಗೆ ಮತ್ತು ಅವರ ಕುಟುಂಬದ ಸದಸ್ಯರಿಗೆ ತಿಳಿಸುತ್ತಿದೆ ಎಂದು ಅವರು ಹೇಳಿದ್ದಾರೆ.

ಎಂಟು ಮಂದಿಯ ಬಿಡುಗಡೆಯು 'ಭಾರಿ ಸಮಾಧಾನ ತರುವಂಥದ್ದು' ಎಂದು ಕಾಂಗ್ರೆಸ್ ಮುಖಂಡ ಶಶಿ ತರೂರ್ ಹೇಳಿದ್ದಾರೆ. 'ಇವರ ಬಿಡುಗಡೆಗೆ ತೆರೆಯ ಹಿಂದೆ ಕೆಲಸ ಮಾಡಿದ ಎಲ್ಲರಿಗೂ ಅಭಿನಂದನೆಗಳು' ಎಂದು ಕೂಡ ತರೂರ್ ಹೇಳಿದ್ದಾರೆ.

ಸುದ್ದಿ 2 ನಿಮಿಷ

ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ನಾಲ್ವರಿಗೆ ಜಾಮೀನು

ನವದೆಹಲಿ (ಪಿಟಿಐ): ಪತ್ರಕರ್ತೆ ಸೌಮ್ಯಾ ವಿಶ್ವನಾಥನ್ ಹತ್ಯೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿರುವ ನಾಲ್ವರು ಅಪರಾಧಿಗಳಿಗೆ ದೆಹಲಿ ಹೈಕೋರ್ಟ್ ಸೋಮವಾರ ಜಾಮೀನು ಮಂಜೂರು ಮಾಡಿದೆ.

ಅಪರಾಧಿಗಳಾದ ರವಿಕಪೂರ್, ಅಮಿತ್ ಶುಕ್ಲಾ, ಬಲ್ಜೀತ್ ಮಲಿಕ್ ಮತ್ತು ಅಜಯ್ ಕುಮಾರ್ ಅವರಿಗೆ ನ್ಯಾಯಮೂರ್ತಿಗಳಾದ ಸುರೇಶ್ ಕುಮಾರ್ ಕೈತ್ ಮತ್ತು ಗಿರೀಶ್ ಕಠ್ಪಾಲಿಯಾ ಅವರನ್ನೊಳಗೊಂಡ ಪೀಠವು ಜಾಮೀನು ನೀಡಿದೆ.

ತಮ್ಮ ವಿರುದ್ಧದ ದೋಷಾರೋಪವನ್ನು ಪ್ರಶ್ನಿಸಿ ಅಪರಾಧಿಗಳು ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆ ಬಾಕಿ ಇರುವವರೆಗೆ ಶಿಕ್ಷೆಯನ್ನು ಹೈಕೋರ್ಟ್ ಅಮಾನತುಗೊಳಿಸಿದೆ. ಅಪರಾಧಿಗಳು 14 ವರ್ಷಗಳಿಂದ ಕಸ್ಟಡಿಯಲ್ಲಿರುವುದನ್ನು ವಿಚಾರಣೆ ವೇಳೆ ನ್ಯಾಯಪೀಠ ಉಲ್ಲೇಖಿಸಿದೆ.

ಅಪರಾಧಿಗಳು ಸಲ್ಲಿಸಿರುವ ಮೇಲ್ಮನವಿಯ ಕುರಿತು ಪ್ರತಿಕ್ರಿಯೆ ನೀಡುವಂತೆ ದೆಹಲಿ ಹೈಕೋರ್ಟ್ ಜನವರಿ 23ರಂದು ದೆಹಲಿ ಪೊಲೀಸರಿಗೆ ಸೂಚಿಸಿತ್ತು.

ಸುದ್ದಿವಾಹಿನಿಯಲ್ಲಿ ಉದ್ಯೋಗದಲ್ಲಿದ್ದ ಸೌಮ್ಯಾ ಅವರನ್ನು 2008 ಸೆಪ್ಟೆಂಬರ್ 30 ರಂದು ದಕ್ಷಿಣ ದೆಹಲಿಯಲ್ಲಿ ಗುಂಡಿಟ್ಟು ಹತ್ಯೆ ಮಾಡಲಾಗಿತ್ತು. ಕಳೆದ ನ. 26ರಂದು ವಿಶೇಷ ನ್ಯಾಯಾಲಯವು ನಾಲ್ವರು ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ಮತ್ತು ಐದನೇ ಅಪರಾಧಿ ಅಜಯ್ ಸೇಥಿಗೆ ಮೂರು ವರ್ಷಗಳ ಜೈಲು ಶಿಕ್ಷೆ ವಿಧಿಸಿತ್ತು.



ಯುಎಇ: ಬಿಎಪಿಎಸ್ ದೇವಸ್ಥಾನ ಉದ್ಘಾಟನೆ ಇಂದು

ಅಬುಧಾಬಿ (ಪಿಟಿಐ): ಅರಬ್ ಸಂಯುಕ್ತ ಸಂಸ್ಥಾನದಲ್ಲಿ (ಯುಎಇ) 'ಬೋಚಾಸನವಾಸಿ ಶ್ರೀ ಅಕ್ಷರ ಪುರುಷೋತ್ತಮ ಸ್ವಾಮಿನಾರಾಯಣ ಸಂಸ್ಥಾ '(ಬಿಎಪಿಎಸ್) ಹಿಂದೂ ದೇವಾಲಯವನ್ನು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಫೆಬ್ರುವರಿ 14ರಂದು ಉದ್ಘಾಟಿಸಲಿದ್ದಾರೆ. ಯುಎಇಯಲ್ಲಿ ಕಲ್ಲಿನಿಂದ ನಿರ್ಮಿಸಲಾಗಿರುವ ಮೊದಲ ಹಿಂದೂ ದೇವಾಲಯವಿದು.

'ಅಹ್ಲಾನ್ ಮೋದಿ'– ವೀಕ್ಷಕರ ಸಂಖ್ಯೆ ಕಡಿತ: ಅಬುದಾಭಿಯ ಝಾಯೆದ್ ಸ್ಪೋರ್ಟ್ಸ್ ಸಿಟಿಯಲ್ಲಿ ಮಂಗಳವಾರದಂದು 'ಅಹ್ಲಾನ್‌ಮೋದಿ' ಕಾರ್ಯಕ್ರಮ ಆಯೋಜಿಸಲಾಗಿದೆ. ಇಲ್ಲಿ ಪ್ರತಿಕೂಲ ಹವಾಮಾನ ಉಂಟಾಗಿರುವ ಕಾರಣ ಕಾರ್ಯಕ್ರಮದಲ್ಲಿ ಭಾಗಿಯಾಗಲಿರುವ ಜನರ ಸಂಖ್ಯೆಯನ್ನು ಕಡಿತಗೊಳಿಸಲಾಗಿದೆ .

ಸಚಿವ ಸ್ಥಾನಕ್ಕೆ ಸೆಂಥಿಲ್ ರಾಜೀನಾಮೆ


ಪ್ರಜಾವಾಣಿ ವಾರ್ತೆ

ಚೆನ್ನೈ: ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ಬಂಧನದಲ್ಲಿರುವ ತಮಿಳುನಾಡಿನ ಸಚಿವ ವಿ.ಸೆಂಥಿಲ್ ಬಾಲಾಜಿ ಅವರು ಸೋಮವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಅವರು ಸಲ್ಲಿಸಿರುವ ಜಾಮೀನು ಅರ್ಜಿಯನ್ನು ಮದ್ರಾಸ್ ಹೈಕೋರ್ಟ್ ವಿಚಾರಣೆಗೆ ಕೈಗೆತ್ತಿಕೊಳ್ಳುವ ಎರಡು ದಿನಗಳ ಮುನ್ನ ಈ ಬೆಳವಣಿಗೆ ನಡೆದಿದೆ.

ಕೇಂದ್ರದ ಟೀಕೆ ಕೈಬಿಟ್ಟ ರಾಜ್ಯಪಾಲ

ತಮಿಳುನಾಡು ವಿಧಾನಸಭೆ: ರಾಷ್ಟ್ರಗೀತೆಗೆ ಮೊದಲೇ ಹೊರನಡೆದ ಆರ್‌.ಎನ್‌. ರವಿ



ತಮಿಳುನಾಡು ವಿಧಾನಸಭೆಯ ಸ್ಪೀಕರ್ ಎಂ. ಅಪ್ಪಾವು ಅವರು ಸೋಮವಾರ ವಿಧಾನಸಭೆಯನ್ನು ಉದ್ದೇಶಿಸಿ ಮಾತನಾಡಿದರು. ರಾಜ್ಯಪಾಲ ಆರ್‌.ಎನ್‌. ರವಿ ಇದ್ದಾರೆ –ಪಿಟಿಐ ಚಿತ್ರ

ಚೆನ್ನೈ (ಪಿಟಿಐ): ತಮಿಳುನಾಡು ವಿಧಾನಸಭೆಯನ್ನು ಉದ್ದೇಶಿಸಿ ಭಾಷಣ ಮಾಡುವಾಗ ರಾಜ್ಯಪಾಲ ಆರ್.ಎನ್. ರವಿ ಅವರು ಸರ್ಕಾರ ಸಿದ್ಧಪಡಿಸಿಕೊಟ್ಟ ಭಾಷಣವನ್ನು ಪೂರ್ತಿಯಾಗಿ ಓದಲು ನಿರಾಕರಿಸಿದರು. ಸರ್ಕಾರ ಸಿದ್ಧಪಡಿಸಿದ ಭಾಷಣದಲ್ಲಿ ಕೇಂದ್ರ ಸರ್ಕಾರದ ಬಗ್ಗೆ ಕಟುವಾದ ಟೀಕೆಗಳು ಇದ್ದವು.

ಆ ಭಾಷಣದಲ್ಲಿ ತಪ್ಪುದಾರಿಗೆ ಎಳೆಯುವ ಅಂಶಗಳು ಇವೆ ಎಂದು ಹೇಳಿರುವ ರವಿ ಅವರು, ರಾಷ್ಟ್ರಗೀತೆ ವಿಚಾರದಲ್ಲಿ ಡಿಎಂಕೆ ನೇತೃತ್ವದ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಆದರೆ, ಈ ಆಕ್ರೋಶದ ಮಾತುಗಳನ್ನು ವಿಧಾನಸಭೆಯ ಸ್ಪೀಕರ್ ಕೆ. ಅಪ್ಪಾವು ಕಡತದಿಂದ ತೆಗೆಸಿದ್ದಾರೆ.

ರಾಷ್ಟ್ರಗೀತೆ ನುಡಿಸುವ ಮೊದಲೇ ರಾಜ್ಯಪಾಲರು ಸದನದಿಂದ ಹೊರನಡೆದರು. ಕಡತದಿಂದ ತೆಗೆದಿರುವ ಮಾತುಗಳು ರವಿ ಅವರ ವೈಯಕ್ತಿಕ ಹೇಳಿಕೆಗಳಾಗಿದ್ದವು, ಸರ್ಕಾರ ನೀಡಿದ್ದ ಭಾಷಣದ ಪಠ್ಯದಲ್ಲಿ ಇರುವ ಮಾತುಗಳು ಮಾತ್ರ ಸದನದ ಕಡತಗಳಲ್ಲಿ ಉಳಿಯುತ್ತವೆ ಎಂದು ಸ್ಪೀಕರ್ ಹೇಳಿದ್ದಾರೆ.

ರಾಜ್ಯಪಾಲ ರವಿ ಅವರು ರಾಷ್ಟ್ರಗೀತೆಯನ್ನು ತಮ್ಮ ಭಾಷಣದ ಆರಂಭಕ್ಕೂ ಮೊದಲು ಹಾಗೂ ಭಾಷಣದ ಕೊನೆಯಲ್ಲಿ ನುಡಿಸಬೇಕು ಎಂದು ಹೇಳಿದ್ದರು. ಆದರೆ, ತಮಿಳುನಾಡಿನಲ್ಲಿ ರಾಜ್ಯಪಾಲರ ಭಾಷಣಕ್ಕೂ ಮೊದಲು ತಮಿಳುನಾಡು ರಾಜ್ಯದ ಗೀತೆಯನ್ನು ನುಡಿಸಲಾಗುತ್ತದೆ, ಭಾಷಣದ ನಂತರದಲ್ಲಿ ರಾಷ್ಟ್ರಗೀತೆ ನುಡಿಸಲಾಗುತ್ತದೆ ಎಂದು ಸ್ಪೀಕರ್ ಹೇಳಿದರು.

ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ ತಮಿಳುನಾಡು ವಿಧಾನಸಭೆಯು ಸತತ ಎರಡನೆಯ ವರ್ಷವೂ ವಿವಾದಕ್ಕೆ ಸಾಕ್ಷಿಯಾಗಿದೆ. ರವಿ ಅವರು ಹಿಂದಿನ ವರ್ಷ ಕೂಡ ತಮಗೆ ನೀಡಿದ್ದ ಭಾಷಣದ ಪ್ರತಿಯಲ್ಲಿನ ಕೆಲವು ಸಾಲುಗಳನ್ನು ಓದಿರಲಿಲ್ಲ.

ಸೋಮವಾರ ರವಿ ಅವರು, 46 ಪುಟಗಳ ಭಾಷಣದ ಪ್ರತಿಯಲ್ಲಿನ ಮೊದಲ ಪುಟವನ್ನು ಮಾತ್ರ ಓದಿದರು. ಸದನದಲ್ಲಿ ಅಪ್ಪಾವು ಅವರು ಕೆಲವು ಮಾತುಗಳನ್ನು ಆಡಿದ ನಂತರದಲ್ಲಿ ರವಿ ಅವರು ಸದನದಿಂದ ಹೊರನಡೆದರು. ಸಂಪ್ರದಾಯದಂತೆ ಭಾಷಣವನ್ನು ಕಡತಕ್ಕೆ ಸೇರಿಸುವ ಕುರಿತು ನಿರ್ಣಯ ಅಂಗೀಕರಿಸಿದ ನಂತರದಲ್ಲಿ ರಾಷ್ಟ್ರಗೀತೆಯನ್ನು ನುಡಿಸಲಾಗುತ್ತದೆ ಎಂದು ಅಪ್ಪಾವು ಅವರು ಹೇಳುತ್ತಿದ್ದರೂ ರವಿ ಅವರು ನಿಲ್ಲಲಿಲ್ಲ.

ರವಿ ಅವರು ಓದಲು ನಿರಾಕರಿಸಿದ ಭಾಗದಲ್ಲಿ, ಜಿಎಸ್‌ಟಿಗೆ ಸಂಬಂಧಿಸಿದ ಕೆಲವು ಮಾತುಗಳು ಇದ್ದವು. ಜಿಎಸ್‌ಟಿ ಪರಿಹಾರ ವ್ಯವಸ್ಥೆಯನ್ನು ಕೊನೆಗೊಳಿಸುವ ಮೂಲಕ ಕೇಂದ್ರವು ರಾಜ್ಯಕ್ಕೆ ವಾರ್ಷಿಕ ₹20 ಸಾವಿರ ಕೋಟಿ ನಷ್ಟ ಉಂಟುಮಾಡಿದೆ ಎಂಬ ಮಾತು ಅದರಲ್ಲಿ ಇತ್ತು. ಪೌರತ್ವ ತಿದ್ದುಪಡಿ ಕಾಯ್ದೆಯನ್ನು ತಮಿಳುನಾಡಿನಲ್ಲಿ ಜಾರಿಗೆ ತರುವುದಿಲ್ಲ ಎಂಬ ಮಾತು ಕೂಡ ಭಾಷಣದ ಪ್ರತಿಯಲ್ಲಿ ಇತ್ತು.

'ಭಾಷಣ ಓದಲೇಬೇಕು'

ಭಾಷಣವನ್ನು ಪೂರ್ತಿಯಾಗಿ ಓದಲು ನಿರಾಕರಿಸುವ ಮೂಲಕ ರಾಜ್ಯಪಾಲ ಆರ್.ಎನ್. ರವಿ ಅವರು ಸದನಕ್ಕೆ, ತಮಿಳುನಾಡಿನ ಜನರಿಗೆ ಅಗೌರವ ತೋರಿದ್ದಾರೆ ಎಂದು ಲೋಕಸಭೆಯ ನಿವೃತ್ತ ಮಹಾ ಪ್ರಧಾನ ಕಾರ್ಯದರ್ಶಿ ಪಿ.ಡಿ.ಟಿ. ಆಚಾರಿ ಹೇಳಿದರು. ಅಲ್ಲದೆ, ರಾಜ್ಯಪಾಲರು ತಮ್ಮ ಸಾಂವಿಧಾನಿಕ ಹೊಣೆ ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆ ಎಂದೂ ಆಚಾರಿ ಹೇಳಿದರು.

'ಚುನಾಯಿತ ಸರ್ಕಾರ ಸಿದ್ಧಪಡಿಸಿದ ಭಾಷಣವನ್ನು ಓದುವ ಹೊರತಾಗಿ ರಾಜ್ಯಪಾಲರಿಗೆ ಬೇರೆ ಆಯ್ಕೆ ಇಲ್ಲ. ಭಾಷಣದಲ್ಲಿ ಏನಿರುತ್ತದೆ ಎಂಬುದಕ್ಕೆ ರಾಜ್ಯಪಾಲರು ಹೊಣೆಯಲ್ಲ' ಎಂದು ಆಚಾರಿ ವಿವರಿಸಿದರು.

'ರಾಜ್ಯಪಾಲರನ್ನು ಗೋಡ್ಸೆ ಅನುಯಾಯಿ ಎಂದ ಸ್ಪೀಕರ್'

ಚೆನ್ನೈ (ಪಿಟಿಐ): ತಮಿಳುನಾಡಿನ ಸದನದಲ್ಲಿ ರಾಜ್ಯಪಾಲರ ಭಾಷಣಕ್ಕೂ ಮೊದಲು ಹಾಗೂ ಭಾಷಣದ ನಂತರದಲ್ಲಿ ರಾಷ್ಟ್ರಗೀತೆಗೆ ಸೂಕ್ತ ಗೌರವ ಸಲ್ಲಿಸಬೇಕು ಎಂದು ರಾಜ್ಯಪಾಲ ಆರ್. ಎನ್. ರವಿ ಅವರು ನೀಡಿದ್ದ ಸಲಹೆಯನ್ನು ಡಿಎಂಕೆ ನೇತೃತ್ವದ ಸರ್ಕಾರವು ಅಲಕ್ಷಿಸಿದೆ ಎಂದು ತಮಿಳುನಾಡಿನ ರಾಜಭವನ ದೂರಿದೆ.

ತಮಿಳುನಾಡು ವಿಧಾನಸಭೆಯ ಸ್ಪೀಕರ್ ಎಂ. ಅಪ್ಪಾವು ಅವರು ರಾಜ್ಯಪಾಲರನ್ನು ಗುರಿಯಾಗಿಸಿಕೊಂಡು ನಿಂದನಾತ್ಮಕ ಮಾತು ಆಡಿದರು. ರಾಜ್ಯಪಾಲರನ್ನು 'ನಾಥೂರಾಮ್ ಗೋಡ್ಸೆಯ ಅನುಯಾಯಿ' ಎಂದು ಕರೆದರು. ಹೀಗಾಗಿ, ತಾವು ಹೊಂದಿರುವ ಸ್ಥಾನದ ಗೌರವವನ್ನು ಗಮನದಲ್ಲಿ ಇರಿಸಿಕೊಂಡು ರಾಜ್ಯಪಾಲರು ಸದನದಿಂದ ನಿರ್ಗಮಿಸಿದರು. ಅಪ್ಪಾವು ಅವರ ನಡತೆಯು ಅವರ ಸ್ಥಾನಕ್ಕೆ ತಕ್ಕುದಾಗಿರಲಿಲ್ಲ, ಅದು ಸ್ಪೀಕರ್ ಸ್ಥಾನದ ಹಾಗೂ ಸದನದ ಘನತೆಯನ್ನು ಕುಗ್ಗಿಸಿತು ಎಂದು ರಾಜಭವನ ಹೇಳಿದೆ.

ರಾಜ್ಯಪಾಲರಿಗೆ ಸಿದ್ಧಪಡಿಸಿ ಕೊಟ್ಟಿದ್ದ ಭಾಷಣದಲ್ಲಿ ತಪ್ಪುದಾರಿಗೆ ಎಳೆಯುವ ಸಂಗತಿಗಳು ಇದ್ದವು. ಅವುಗಳನ್ನು ಓದಿದ್ದರೆ ಸಂವಿಧಾನವನ್ನು ನಗೆಪಾಟಲಿಗೆ ಈಡುಮಾಡಿದಂತೆ ಆಗುತ್ತಿತ್ತು ಎಂದು ರಾಜ್ಯಪಾಲ ರವಿ ಅವರ ಕಚೇರಿ ಹೇಳಿದೆ.

ರಾಜ್ಯಪಾಲರ ಭಾಷಣದ ಕರಡು ಪ್ರತಿಯು ಶುಕ್ರವಾರ ಕೈಸೇರಿತು. ಅದರಲ್ಲಿ ಹಲವು ಸತ್ಯಕ್ಕೆ ದೂರವಾದ ಹಲವು ಮಾತುಗಳು ಇದ್ದವು. ಹೀಗಾಗಿ ರವಿ ಅವರು ಅದನ್ನು ಹಿಂದಿರುಗಿಸಿದರು. ರಾಜ್ಯಪಾಲರ ಭಾಷಣಕ್ಕೂ ಮೊದಲು ಹಾಗೂ ಭಾಷಣದ ನಂತರ ರಾಷ್ಟ್ರಗೀತೆಯನ್ನು ನುಡಿಸುವಂತೆ ಸೂಚಿಸಿದರು. ಈ ವಿಚಾರವಾಗಿ ರಾಜ್ಯಪಾಲರು ಮುಖ್ಯಮಂತ್ರಿ ಮತ್ತು ಸ್ಪೀಕರ್ ಅವರಿಗೆ ಪತ್ರ ಬರೆದಿದ್ದರು. ಆದರೆ ಅವುಗಳನ್ನು ರಾಜ್ಯ ಸರ್ಕಾರವು ಅಲಕ್ಷಿಸಿತು ಎಂದು ಹೇಳಿಕೆಯಲ್ಲಿ ವಿವರಿಸಲಾಗಿದೆ.

ರಾಜ್ಯಪಾಲರ ಭಾಷಣವು ಸರ್ಕಾರದ ಸಾಧನೆಗಳನ್ನು, ನೀತಿಗಳನ್ನು ಮತ್ತು ಯೋಜನೆಗಳನ್ನು ಹೇಳಬೇಕು. ಆ ಭಾಷಣವು ತಪ್ಪು ದಾರಿಗೆ ಎಳೆಯುವ ಹೇಳಿಕೆಗಳನ್ನು ನೀಡಲು, ಪಕ್ಷಪಾತಿಯಾದ ರಾಜಕೀಯ ನಿಲುವುಗಳನ್ನು ವ್ಯಕ್ತಪಡಿಸಲು ವೇದಿಕೆ ಆಗಬಾರದು ಎಂದು ಹೇಳಿಕೆಯು ಉಲ್ಲೇಖಿಸಿದೆ.

ಕಾಂಗ್ರೆಸ್ ತೊರೆದ ಅಶೋಕ್ ಚವ್ಹಾಣ್

ಮುಂಬೈ (ಪಿಟಿಐ): ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಅಶೋಕ್ ಚವ್ಹಾಣ್ (65) ಅವರು ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ಸೋಮವಾರ ರಾಜೀನಾಮೆ ನೀಡಿದರು.

ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿರುವುದಾಗಿ ಮಹಾರಾಷ್ಟ್ರ ಕಾಂಗ್ರೆಸ್ ಅಧ್ಯಕ್ಷ ನಾನಾ ಪಟೋಲೆ ಅವರಿಗೆ ಪತ್ರದ ಮೂಲಕ ಚವ್ಹಾಣ್ ತಿಳಿಸಿದರು. ಶಾಸಕ ಸ್ಥಾನಕ್ಕೂ ರಾಜೀನಾಮೆ ನೀಡಿರುವ ಅವರು, ರಾಜ್ಯ ವಿಧಾನಸಭೆಯ ಸ್ಪೀಕರ್ ರಾಹುಲ್ ನಾರ್ವೇಕರ್ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕಾಂಗ್ರೆಸ್ ಪಕ್ಷದ ಒಳಗೆ ಏನು ನಡೆಯುತ್ತಿದೆ ಎಂದು ನಾನು ಸಾರ್ವಜನಿಕವಾಗಿ ಚರ್ಚಿಸುವುದಿಲ್ಲ. ನನ್ನ ನಿರ್ಧಾರದ ಕುರಿತು ಪಕ್ಷದ ಇತರ ಶಾಸಕರ ಜೊತೆಗೂ ಚರ್ಚಿಸಿಲ್ಲ. ಅವರ ಮೇಲೆ ಪ್ರಭಾವ ಬೀರುವ ಉದ್ದೇಶವೂ ನನಗಿಲ್ಲ' ಎಂದರು.

ಆಡಳಿತಾರೂಢ ಬಿಜೆಪಿ ಸೇರುವ ಕುರಿತು ಕೇಳಿದ ಪ್ರಶ್ನೆಗೆ, 'ಬಿಜೆಪಿ ಸೇರುವ ಕುರಿತು ಇನ್ನೂ ನಿರ್ಧರಿಸಿಲ್ಲ. ಬಿಜೆಪಿಯ ಕಾರ್ಯವೈಖರಿ ನನಗೆ ತಿಳಿದಿಲ್ಲ. ಮುಂದಿನ ನಡೆಯನ್ನು ಒಂದೆರಡು ದಿನಗಳಲ್ಲಿ ನಿರ್ಧರಿಸುತ್ತೇನೆ. ಕಾಂಗ್ರೆಸ್ ತೊರೆಯುವ ತಮ್ಮ ನಿರ್ಧಾರ ವೈಯಕ್ತಿಕವಾದುದು' ಎಂದರು.

ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಅವಧಿಯ ಹಗರಣಗಳು, ಆರ್ಥಿಕ ಸ್ಥಿತಿಗತಿ ಕುರಿತ ಶ್ವೇತಪತ್ರವನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಈಚೆಗೆ ಸಂಸತ್ತಿನಲ್ಲಿ ಮಂಡಿಸಿದ್ದರು. ಅದರಲ್ಲಿ 'ಆದರ್ಶ್ ವಸತಿ ಹಗರಣ'ವನ್ನೂ ಹೆಸರಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಚವ್ಹಾಣ್ ಅವರು ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದ್ದಾರೆ ಎಂದು ಹೇಳಲಾಗಿದೆ. ಆದರೆ, ಈ ವಾದಗಳನ್ನು ಚವ್ಹಾಣ್ ನಿರಾಕರಿಸಿದ್ದಾರೆ. ಲೋಕಸಭೆ ಚುನಾವಣೆ ಸನ್ನಿಹಿತ ಆಗುತ್ತಿರುವ ವೇಳೆಯೇ ಚವ್ಹಾಣ್ ಅವರು ರಾಜೀನಾಮೆ ನೀಡಿರುವುದರಿಂದ ಕಾಂಗ್ರೆಸ್‌ಗೆ ಹಿನ್ನಡೆಯಾಗಲಿದೆ ಎನ್ನಲಾಗಿದೆ.

ಆದರ್ಶ್ ವಸತಿ ಹಗರಣದ ಕಾರಣಕ್ಕಾಗಿ ಚವಾಣ್ ಅವರು 2010ರಲ್ಲಿ ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿದಿದ್ದರು.

'ಕಿರಿಯರಿಗೆ ಸಿಗಲಿದೆ ಅವಕಾಶ'

ನವದೆಹಲಿ (ಪಿಟಿಐ): 'ತಮ್ಮಿಂದ ತುಳಿತಕ್ಕೆ ಒಳಗಾದವರಿಗೆ ತಮ್ಮ ನಿರ್ಗಮನವು ಹೊಸ ಅವಕಾಶಗಳನ್ನು ಕಲ್ಪಿಸಿಕೊಡುತ್ತದೆ ಎಂದು ವಿಶ್ವಾಸದ್ರೋಹಿಗಳಿಗೆ ತಿಳಿದಿಲ್ಲ' ಎಂದು ಅಶೋಕ್ ಚವ್ಹಾಣ್ ಅವರ ರಾಜೀನಾಮೆ ಕುರಿತು ಕಾಂಗ್ರೆಸ್ ಪ್ರತಿಕ್ರಿಯಿಸಿದೆ.

'ತಮ್ಮ ಅರ್ಹತೆಗೂ ಮೀರಿದ ಅವಕಾಶಗಳನ್ನು ನೀಡಿರುವ ರಾಜಕೀಯ ಪಕ್ಷವನ್ನು ಸಹೋದ್ಯೋಗಿಗಳು, ಸ್ನೇಹಿತರು ತೊರೆಯುವುದು ವ್ಯಥೆ ಉಂಟು ಮಾಡುತ್ತದೆ. ದುರ್ಬಲರಿಗೆ ತಮ್ಮ ಸೈದ್ಧಾಂತಿಕ ಬದ್ಧತೆ ಮತ್ತು ವೈಯಕ್ತಿಕ ನಿಷ್ಠೆಗಿಂತ ಆ ವಾಷಿಂಗ್ ಮಷೀನ್ (ಬಿಜೆಪಿ) ಹೆಚ್ಚು ಆಕರ್ಷಕವಾಗಿ ಕಾಣುತ್ತದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು ಚವ್ಹಾಣ್ ಅವರ ಹೆಸರು ಉಲ್ಲೇಖಿಸದೇ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ರಾಜಸ್ಥಾನದಿಂದ ರಾಜ್ಯಸಭೆಗೆ ಸೋನಿಯಾ ಗಾಂಧಿ ಸ್ಪರ್ಧೆ?

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ಪಕ್ಷದ ನಾಯಕಿ ಸೋನಿಯಾಗಾಂಧಿ ಅವರು ರಾಜ್ಯಸಭೆ ಚುನಾವಣೆಗೆ, ಬಹುತೇಕ ರಾಜಸ್ಥಾನದಿಂದ ಸ್ಪರ್ಧಿಸುವ ಸಾಧ್ಯತೆಗಳಿವೆ ಎಂದು ಮೂಲಗಳು ಸೋಮವಾರ ತಿಳಿಸಿವೆ.

ಆದರೆ, ಈ ಬಗ್ಗೆ ಅಧಿಕೃತ ಪ್ರಕಟಣೆ ಹೊರಬಿದ್ದಿಲ್ಲ. ರಾಜಸ್ಥಾನ, ಹಿಮಾಚಲ ಪ್ರದೇಶ, ಮಧ್ಯಪ್ರದೇಶದ ಕಾಂಗ್ರೆಸ್ ಘಟಕಗಳು, ಮುಖಂಡರು ತಮ್ಮ ರಾಜ್ಯದಿಂದಲೇ ಸ್ಪರ್ಧಿಸಲು ಅವರಿಗೆ ಮನವಿ ಮಾಡಿವೆ. ಈ ಪೈಕಿ ರಾಜಸ್ಥಾನ ಸುರಕ್ಷಿತ ಎಂಬ ತೀರ್ಮಾನಕ್ಕೆ ನಾಯಕರು ಬಂದಿದ್ದಾರೆ. ದಕ್ಷಿಣ ರಾಜ್ಯಗಳ ಘಟಕಗಳಿಂದಲೂ ಸ್ಪರ್ಧಿಸಲು ಬೇಡಿಕೆ ಬಂದಿದೆ ಎಂದು ಮೂಲಗಳು ತಿಳಿಸಿವೆ. ಆದರೆ, ಸೋನಿಯಾ ಅಥವಾ ಪಕ್ಷದ ನಾಯಕತ್ವವು ಕರ್ನಾಟಕ ಅಥವಾ ತೆಲಂಗಾಣದಿಂದ ಸ್ಪರ್ಧೆ ಕುರಿತು ಆಸಕ್ತಿ ಹೊಂದಿಲ್ಲ ಎಂದು ತಿಳಿಸಿವೆ.

ರಾಜಸ್ಥಾನದಿಂದಲೇ ಸ್ಪರ್ಧಿಸುವ ಸಾಧ್ಯತೆಗಳು ಹೆಚ್ಚಿವೆ ಎಂದು ಮೂಲಗಳು ತಿಳಿಸಿವೆ. ಸೋನಿಯಾ ಅವರು ಮೊದಲ ಅವಧಿಗೆ ಅಮೇಠಿಯಿಂದ ಲೋಕಸಭೆಗೆ ಆಯ್ಕೆಯಾಗಿದ್ದರು. ಆ ಕ್ಷೇತ್ರವನ್ನು ಬಳಿಕ ಪುತ್ರ ರಾಹುಲ್‌ಗಾಂಧಿ ಅವರಿಗೆ ಬಿಟ್ಟಿದ್ದರು. ಸದ್ಯ, ರಾಯ್ ಬರೇಲಿ ಕ್ಷೇತ್ರ ಪ್ರತಿನಿಧಿಸುತ್ತಿದ್ದು, ಇಲ್ಲಿಂದ ಪುತ್ರಿ ಪ್ರಿಯಾಂಕಾಗಾಂಧಿ ಅವರು ಲೋಕಸಭೆಗೆ ಸ್ಪರ್ಧಿಸುವ ಸಾಧ್ಯತೆಗಳಿವೆ ಎನ್ನಲಾಗಿದೆ.

ಬಿಜೆಪಿ ಅಭ್ಯರ್ಥಿಗಳು: ರಾಜಸ್ಥಾನದಿಂದ ರಾಜ್ಯಸಭೆಯ ಎರಡು ಸ್ಥಾನಗಳಿಗೆ ಬಿಜೆಪಿಯು ಗುರುವಾರ ಅಭ್ಯರ್ಥಿಗಳನ್ನು ಪ್ರಕಟಿಸಿದೆ. ಚುನ್ನಿಲಾಲ್ ಗರಸಿಯಾ ಮತ್ತು ಮದನ್ ರಾಥೋಡ್ ಅವರಿಗೆ ಟಿಕೆಟ್ ಪ್ರಕಟಿಸಲಾಗಿದೆ.

ಅತಂತ್ರ ಫಲಿತಾಂಶ, ಮೈತ್ರಿಗೆ ಕಸರತ್ತು

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನ ಚುನಾವಣೆ ಆಯೋಗ ಸಾರ್ವತ್ರಿಕ ಚುನಾವಣೆ ಪೂರ್ಣ ಫಲಿತಾಂಶವನ್ನು ಮತದಾನ ನಡೆದ ಮೂರು ದಿನದ ಬಳಿಕ ಪ್ರಕಟಿಸಿದೆ. ಆ ಪ್ರಕಾರ, ಯಾವ ಪಕ್ಷಕ್ಕೂ ಸರಳ ಬಹುಮತ ಲಭಿಸಿಲ್ಲ.

ಅತಂತ್ರ ಸಂಸತ್ತು ರಚನೆಯಾಗಿದೆ. ಮೈತ್ರಿ ಸರ್ಕಾರ ರಚನೆ ಅನಿವಾರ್ಯ ಎಂಬ ಚಿತ್ರಣ ಸ್ಪಷ್ಟವಾಗಿದೆ. ಮಾಜಿ ಪ್ರಧಾನಿ ನವಾಜ್ ಷರೀಫ್ ಅವರ ಪಾಕಿಸ್ತಾನ ಮುಸ್ಲಿಂ ಲೀಗ್ ನವಾಜ್ (ಪಿಎಂಎಲ್‌–ಎನ್) ರಾಷ್ಟ್ರೀಯ ಸಂಸತ್ತಿನಲ್ಲಿ 75 ಸ್ಥಾನಗಳನ್ನು ಗೆದ್ದಿದ್ದು, ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ.

ವಿವಾದಗಳೇ ಚುನಾವಣೆಯನ್ನು ಆವರಿಸಿದ್ದವು. ಆರಂಭಿಕ ಫಲಿತಾಂಶದ ಹಿಂದೆಯೇ ಮಾಜಿ ಪ್ರಧಾನಿಗಳಾದ ಇಮ್ರಾನ್ ಖಾನ್ ನೇತೃತ್ವದ ಪಾಕಿಸ್ತಾನ್ ತೆಹ್ರೀಕ್‌–ಇ–ಇನ್ಸಾಫ್ (ಪಿಟಿಐ) ಮತ್ತು ನವಾಜ್ ಷರೀಫ್ ಅವರ ಪಾಕಿಸ್ತಾನ್ ಮುಸ್ಲಿಂ ಲೀಗ್ –ನವಾಜ್ (ಪಿಎಂಎಲ್‌–ಎನ್), ಚುನಾವಣೆಯಲ್ಲಿ ಗೆದ್ದಿರುವುದಾಗಿ ಪ್ರತಿಪಾದಿಸಿದ್ದವು.


ರಾಷ್ಟ್ರೀಯ ಮತ್ತು ಪ್ರಾಂತ್ಯವಾರು ವಿಧಾನಸಭಾ ಕ್ಷೇತ್ರಗಳು ಸೇರಿ 854 ಕ್ಷೇತ್ರಗಳಲ್ಲಿ ಮತದಾನ ನಡೆದಿತ್ತು. ಫಲಿತಾಂಶದ ಪ್ರಕಾರ, 348 ಕ್ಷೇತ್ರಗಳಲ್ಲಿ ಪಕ್ಷೇತರರು ಜಯಗಳಿಸಿದ್ದಾರೆ. ಪಾಕಿಸ್ತಾನ ಪೀಪಲ್ಸ್ ಪಾರ್ಟಿ (ಪಿಪಿಪಿ) 160 ಸ್ಥಾನ ಗೆದ್ದುಕೊಂಡು ಎರಡನೇ ಸ್ಥಾನದಲ್ಲಿದ್ದರೆ, ಮುಟ್ಟಾಹಿದಾ ಖೌಮಿ ಮೂವ್‌ಮೆಂಟ್ ಪಾಕಿಸ್ತಾನ್ (ಎಂಕ್ಯೂಎಂ–ಪಿ) 45 ಸ್ಥಾನ ಗೆದ್ದಿದ್ದು, ಮೂರನೇ ಸ್ಥಾನದಲ್ಲಿದೆ.

ರಾಷ್ಟ್ರೀಯ ಸಂಸತ್ತಿಗೆ 101 ಪಕ್ಷೇತರರು ಆಯ್ಕೆಯಾಗಿದ್ದಾರೆ. ಪಿಎಂಎಲ್‌–ಎನ್ –75, ಪಿಪಿಪಿ –54, ಎಂಕ್ಯುಎಂ–ಪಿ–17, ಜಮಿಯಾತ್ ಉಲೆಮಾ–ಇ–ಇಸ್ಲಾಂ (ಜೆಯುಐ) –4, ಪಿಎಂಎಲ್‌–ಕ್ವಾಯಿದ್ –3, ಇಷ್ತೆಹ್ಕಾಂ–ಇ–ಪಾಕಿಸ್ತಾನ್ ಪಾರ್ಟಿ (ಐಪಿಪಿ) –2, ಬಲೂಚಿಸ್ತಾನ ನ್ಯಾಷನಲ್ ಪಾರ್ಟಿ (ಬಿಎನ್‌ಪಿ) –2 ಕಡೆ ಗೆದ್ದಿವೆ.

ಸಹಭಾಗಿ ಮೈತ್ರಿ ಸರ್ಕಾರ –ಪ್ರಸ್ತಾವ

ಪಿಎಂಎಲ್‌–ಎನ್ ಮುಖ್ಯಸ್ಥ, ಮಾಜಿ ಪ್ರಧಾನಿ ನವಾಜ್ ಷರೀಫ್ ಅವರು 'ಸಹಭಾಗಿ ಮೈತ್ರಿ ಸರ್ಕಾರ' ರಚಿಸುವ ಪ್ರಸ್ತಾವವನ್ನು ಮುಂದಿಟ್ಟಿದ್ದಾರೆ. 'ಸಹಭಾಗಿ ಮೈತ್ರಿ ಸರ್ಕಾರ ರಚನೆ ಈಗಿನ ಏಕೈಕ ಸಾಧ್ಯತೆ. ದೇಶದ ಹಿತಾಸಕ್ತಿ ದೃಷ್ಟಿಯಿಂದ, ಪಿಟಿಐ ಬಿಟ್ಟು ಉಳಿದೆಲ್ಲ ಪಕ್ಷಗಳು ಕೈಜೋಡಿಸಬೇಕು' ಎಂದು ಕೋರಿದ್ದಾರೆ.

ಷೇರುಪೇಟೆ ವಹಿವಾಟು 523



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,782
ಇಂದಿನ ಅಂತ್ಯ	21,616
▼	166
ದಿನದ ಕನಿಷ್ಠ	21,574

ವಿನಿಮಯ ದರ

$ ಡಾಲರ್	83.00
£ ಪೌಂಡ್	104.80
€ ಯುರೊ	89.45
¥ ಯೆನ್ (100ಕ್ಕೆ)	56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹585
12 ಕ್ಕೆ	₹78
ಮೈಸೂರು	
100ಕ್ಕೆ	₹587

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಶನಿವಾರದ ದರ)

ಶೇಂಗಾ (ರಿಫೈನ್ಡ್)	₹1450 (1460)
ಸೋಯಾ (ರಿಫೈನ್ಡ್)	₹895 (895)
ಸೂರ್ಯಕಾಂತಿ (ರಿಫೈನ್ಡ್)	₹905 (910)
ಪಾಮೋಲಿನ್	₹856 (857)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹326-450

ದ್ವಿತಳಿ (ಬಿ.ವಿ) ₹285-567

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹161

ಆರ್‌ಎಸ್‌ಎಸ್-5 ₹156

ಗುಡ್ ಲಾಟ್ ₹139

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹14500
ಎಸಿ	₹7952
ಆರ್‌ಪಿ	₹13200
ಆರ್‌ಸಿ	₹7560


ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ಗೆ ನಿರ್ಬಂಧ: ಶಕ್ತಿಕಾಂತ ದಾಸ್

ಕ್ರಮದ ಮರುಪರಿಶೀಲನೆ ಇಲ್ಲ

ನವದೆಹಲಿ (ಪಿಟಿಐ): ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ವಿರುದ್ಧ ತೆಗೆದುಕೊಂಡಿರುವ ಕ್ರಮಗಳ ಮರುಪರಿಶೀಲನೆ ಇಲ್ಲ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಸೋಮವಾರ ಹೇಳಿದರು. ಸಾಕಷ್ಟು ಆಲೋಚಿಸಿಯೇ ಆರ್‌ಬಿಐ ಕ್ರಮ ತೆಗೆದುಕೊಳ್ಳುತ್ತದೆ ಎಂದು ಅವರು ತಿಳಿಸಿದರು.

ಆರ್‌ಬಿಐ ಯಾವುದೇ ಫಿನ್‌ಟೆಕ್ ಕಂಪನಿಯ ವಿರುದ್ಧವಾಗಿಲ್ಲ. ಆದರೆ, ಗ್ರಾಹಕರು ಹಾಗೂ ಠೇವಣಿದಾರರ ಹಿತಾಸಕ್ತಿಯನ್ನು ರಕ್ಷಿಸುವುದು ಆರ್‌ಬಿಐನ ಮುಖ್ಯ ಉದ್ದೇಶ ಎಂದರು. ಆರ್‌ಬಿಐ ಯಾವತ್ತಿನಿಂದಲೂ ಫಿನ್‌ಟೆಕ್ ವಲಯಕ್ಕೆ ಬೆಂಬಲ ನೀಡುತ್ತಿದೆ, ಈ ವಲಯವು ವೇಗವಾಗಿ ಪ್ರಗತಿ ಸಾಧಿಸುವಂತಾಗಬೇಕು ಎಂಬ ಉದ್ದೇಶದಿಂದ ಆರ್‌ಬಿಐ ಪ್ರಯತ್ನಗಳನ್ನು ನಡೆಸಿದೆ ಎಂದು ಅವರು ಹೇಳಿದರು.

ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ವಿರುದ್ಧ ಕೈಗೊಂಡಿರುವ ಕ್ರಮಗಳ ಬಗ್ಗೆ ಪ್ರತಿಕ್ರಿಯಿಸಿದ ದಾಸ್,



ಶಕ್ತಿಕಾಂತ ದಾಸ್

ನಿಯಮಗಳಿಗೆ ಬದ್ಧರಾಗಿ ಇರುವಂತೆ ಸೂಚಿಸಿದ ನಂತರವೂ ಆ ಕೆಲಸವನ್ನು ಮಾಡಿಲ್ಲ ಎಂಬುದು ಗೊತ್ತಾದಾಗ ಅಂತಹ ಸಂಸ್ಥೆಗಳ ವಿರುದ್ಧ ಕ್ರಮ ಜರುಗಿಸಲಾಗುತ್ತದೆ ಎಂದರು.

'ನಾವು ಸೂಕ್ತ ಪರಿಗಣನೆಯ ನಂತರವೇ ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ವಿರುದ್ಧ ಕ್ರಮ ತೆಗೆದುಕೊಂಡಿದ್ದೇವೆ. ಗ್ರಾಹಕರ ಅನುಕೂಲಕ್ಕಾಗಿ ಕೆಲವು ವಿವರಣೆಗಳನ್ನು ಶೀಘ್ರದಲ್ಲಿಯೇ ನೀಡಲಾಗುವುದು' ಎಂದು ದಾಸ್ ಅವರು ಆರ್‌ಬಿಐನ ಕೇಂದ್ರೀಯ ನಿರ್ದೇಶಕರ ಮಂಡಳಿಯ ಸಭೆಯ ನಂತರ ತಿಳಿಸಿದರು. ಈ ಸಭೆಯನ್ನು ಉದ್ದೇಶಿಸಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಾತನಾಡಿದ್ದರು.

ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ ವಿರುದ್ಧ ಕಠಿಣ ಕ್ರಮಗಳನ್ನು ಜರುಗಿಸಿರುವ ಆರ್‌ಬಿಐ, ಫೆಬ್ರುವರಿ 29ರ ನಂತರದಲ್ಲಿ ಗ್ರಾಹಕರ ಖಾತೆಗಳಿಗೆ ಹಣ ಜಮಾ ಮಾಡಲು ಅವಕಾಶ ಕೊಡಬಾರದು ಎಂದು ತಾಕೀತು ಮಾಡಿದೆ. ಇರುವ ಹಣವನ್ನು ಬಳಸಿಕೊಳ್ಳಲು ಗ್ರಾಹಕರಿಗೆ ನಿರ್ಬಂಧವಿಲ್ಲ.

ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ಗೆ ವಿನಾಯಿತಿ ನೀಡುವ ಸಾಧ್ಯತೆ ಇಲ್ಲ ಎಂದು ಹೇಳಿದ ದಾಸ್, 'ನಾವು ಒಂದು ವಿಷಯವನ್ನು ಸ್ಪಷ್ಟವಾಗಿ ಹೇಳುತ್ತೇನೆ. ಈ ಹಂತದಲ್ಲಿ ನಮ್ಮ ಕ್ರಮದ ಮರುಪರಿಶೀಲನೆ ಇರುವುದಿಲ್ಲ' ಎಂದರು.

'ನಾವು ನೀಡಲು ಉದ್ದೇಶಿಸಿರುವ ವಿವರಣೆಗಳು ಠೇವಣಿದಾರರು ಹಾಗೂ ಗ್ರಾಹಕರ ಅನುಕೂಲಗಳನ್ನು ಗುರಿಯಾಗಿಸಿಕೊಂಡಿರುತ್ತವೆ. ಗ್ರಾಹಕರ ಹಿತದೃಷ್ಟಿಯಿಂದ ಯಾವುದೆಲ್ಲ ಅಗತ್ಯವಿದೆಯೋ ಅವು ವಿವರಣೆಗಳಲ್ಲಿ ಇರುತ್ತವೆ. ಆದರೆ, ನಾವು ಕೈಗೊಂಡಿರುವ ಕ್ರಮದ ಮರುಪರಿಶೀಲನೆಯ ಪ್ರಸ್ತಾವ ಇಲ್ಲ' ಎಂದು ಸ್ಪಷ್ಟಪಡಿಸಿದರು.

ಅಡುಗೆ ಎಣ್ಣೆ ಆಮದು ಶೇ 28 ಕುಸಿತ


ಕಡಿಮೆ ಉತ್ಪಾದನೆ: ಅಡುಗೆ ಎಣ್ಣೆ ದರ ಈ ವರ್ಷ ಹೆಚ್ಚಳ—ಎಸ್‌ಇಎ ಅಂದಾಜು

ನವದೆಹಲಿ (ಪಿಟಿಐ): ದೇಶದ ಅಡುಗೆ ಎಣ್ಣೆ ಆಮದು ಜನವರಿಯಲ್ಲಿ ಶೇ 28ರಷ್ಟು ಕುಸಿತವಾಗಿದೆ ಎಂದು ಭಾರತೀಯ ಎಣ್ಣೆ ಗಿರಣಿ ಮಾಲೀಕರ ಸಂಘ (ಎಸ್‌ಇಎ) ತಿಳಿಸಿದೆ.

2023ರ ಜನವರಿಯಲ್ಲಿ 16.62 ಲಕ್ಷ ಟನ್ ಅಡುಗೆ ಎಣ್ಣೆ ಆಮದಾಗಿದ್ದರೆ, ಈ ಜನವರಿಯಲ್ಲಿ 12 ಲಕ್ಷ ಟನ್‌ಗೆ ಇಳಿಕೆಯಾಗಿದೆ ಎಂದು ಸೋಮವಾರ ತಿಳಿಸಿದೆ.

2023-24ರ ತೈಲ ವರ್ಷದ ಮೊದಲ ತ್ರೈಮಾಸಿಕದಲ್ಲಿ (ನವೆಂಬರ್–ಜನವರಿ) ತೈಲ ಆಮದು 47.73 ಲಕ್ಷ ಟನ್‌ನಿಂದ 36.73 ಲಕ್ಷ ಟನ್‌ಗೆ ಇಳಿಕೆಯಾಗಿದೆ. ಒಟ್ಟು ಶೇ 23ರಷ್ಟು ಕಡಿಮೆ ಆಗಿದೆ.

ಎಸ್‌ಇಎ ಪ್ರಕಾರ ಜನವರಿಯಲ್ಲಿ



7,82,983 ಟನ್ ತಾಳೆ ಎಣ್ಣೆ ಮತ್ತು 4,08,938 ಟನ್ ಇತರೆ ಅಡುಗೆ ಎಣ್ಣೆ ಆಮದು ಮಾಡಿಕೊಳ್ಳಲಾಗಿದೆ. ಫೆಬ್ರುವರಿ 1ರ ವೇಳೆಗೆ, ಒಟ್ಟು ಅಡುಗೆ ಎಣ್ಣೆ ಸಂಗ್ರಹವು 26.49 ಲಕ್ಷ ಟನ್ ಆಗಿದ್ದು, ಹಿಂದಿನ ಅವಧಿಗೆ ಹೋಲಿಸಿದರೆ ಇದು ಶೇ 7.64ರಷ್ಟು ಕಡಿಮೆ ಆಗಿದೆ ಎಂದು ತಿಳಿಸಿದೆ.

ಕಡಿಮೆ ಉತ್ಪಾದನೆ, ಜಾಗತಿಕ ಆರ್ಥಿಕ ಸಮಸ್ಯೆಗಳು ಮತ್ತು ಪೂರೈಕೆ ನಿರ್ಬಂಧಗಳಿಂದಾಗಿ ಅಡುಗೆ ಎಣ್ಣೆ ದರವು ಈ ವರ್ಷ ಹೆಚ್ಚಾಗಬಹುದು. ಪ್ರಮುಖ ತೈಲ ಉತ್ಪಾದಕ ರಾಷ್ಟ್ರಗಳಾದ ಮಲೇಷ್ಯಾ ಮತ್ತು ಇಂಡೊನೇಷ್ಯಾ ಜೈವಿಕ- ಡೀಸೆಲ್ ಉತ್ಪಾದನೆಗೆ ಬಳಸುತ್ತಿರುವುದರಿಂದ ತಾಳೆ ಎಣ್ಣೆಯ ಲಭ್ಯತೆ ಕಡಿಮೆಯಾಗಿದೆ ಎಂದು ಎಸ್‌ಇಎ ಹೇಳಿದೆ.

ಭಾರತವು, ಇಂಡೊನೇಷ್ಯಾ ಮತ್ತು ಮಲೇಷ್ಯಾದಿಂದ ತಾಳೆ ಎಣ್ಣೆ, ಅರ್ಜೆಂಟೀನಾದಿಂದ ಸೋಯಾಬಿನ್, ರಷ್ಯಾ ಮತ್ತು ಉಕ್ರೇನ್‌ನಿಂದ ಸೂರ್ಯಕಾಂತಿ ಎಣ್ಣೆ ಆಮದು ಮಾಡಿಕೊಳ್ಳುತ್ತಿದೆ.

ಜೆಇಎಂ ಪೋರ್ಟಲ್: ಖರೀದಿ ₹4 ಲಕ್ಷ ಕೋಟಿ ದಾಟುವ ನಿರೀಕ್ಷೆ

ನವದೆಹಲಿ (ಪಿಟಿಐ): ಸರ್ಕಾರದ ಇ-ಮಾರುಕಟ್ಟೆ ಪೋರ್ಟಲ್ ಜೆಇಎಂನಿಂದ ಸರಕು ಮತ್ತು ಸೇವೆಗಳ ಖರೀದಿಯು 2023–24ರ ಹಣಕಾಸು ವರ್ಷದ ಅಂತ್ಯದ ವೇಳೆಗೆ ₹4 ಲಕ್ಷ ಕೋಟಿ ದಾಟಲಿದೆ ಎಂದು ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

ಸರ್ಕಾರದ ವಿವಿಧ ಸಚಿವಾಲಯಗಳು ಮತ್ತು ಇಲಾಖೆಗಳ ಹೆಚ್ಚಿನ ಖರೀದಿ ಚಟುವಟಿಕೆಗಳಿಂದಾಗಿ ಈ ಏರಿಕೆ ಆಗಿದೆ.

ಇಂದಿನ ಮಾಹಿತಿ ಪ್ರಕಾರ ಖರೀದಿಯ ಮೌಲ್ಯವು ₹3 ಲಕ್ಷ ಕೋಟಿ ದಾಟಿದ್ದು, ಇದೇ ರೀತಿ ಖರೀದಿ ಪ್ರವೃತ್ತಿ ಮುಂದುವರಿದರೆ ಪ್ರಸಕ್ತ ಹಣಕಾಸು ವರ್ಷದ ಕೊನೆಗೆ ₹4 ಲಕ್ಷ ಕೋಟಿ ದಾಟಬಹುದು ಎಂದು ಜೆಇಎಂನ ಸಿಇಒ ಪಿ.ಕೆ.ಸಿಂಗ್ ಹೇಳಿದ್ದಾರೆ.

2021–22ರಲ್ಲಿ ₹1.06 ಲಕ್ಷ ಕೋಟಿ ಮತ್ತು 2022–23ರಲ್ಲಿ ₹2 ಲಕ್ಷ ಕೋಟಿ ಆನ್‌ಲೈನ್ ಖರೀದಿ ನಡೆದಿತ್ತು. ಕೋಲ್ ಇಂಡಿಯಾ, ಸೈಲ್, ಎನ್‌ಟಿಪಿಸಿ, ಎಸ್‌ಬಿಐ ಸೇರಿದಂತೆ 245ಕ್ಕೂ ಹೆಚ್ಚು ಕೇಂದ್ರೋದ್ಯಮಗಳು (ಸಿಪಿಎಸ್‌ಇ) ಈ ಖರೀದಿಯಲ್ಲಿ ಭಾಗವಹಿಸಿವೆ ಎಂದು ಹೇಳಿದ್ದಾರೆ.

ಈ ಆನ್‌ಲೈನ್ ಪೋರ್ಟಲ್‌ನಲ್ಲಿ ವಾಹನಗಳು, ಕಂಪ್ಯೂಟರ್‌ಗಳು, ಕಚೇರಿ ಪಿಠೋಪಕರಣಗಳು ಸೇರಿದಂತೆ ವಿವಿಧ ಬಗೆಯ ಸರಕುಗಳು ಲಭ್ಯ ಇವೆ. ಸಾಗಣೆ, ಸರಕು ಸಾಗಣೆ, ತ್ಯಾಜ್ಯ ನಿರ್ವಹಣೆ ಸೇರಿದಂತೆ ಹಲವು ಸೇವೆಗಳೂ ಇಲ್ಲಿ ದೊರೆಯುತ್ತವೆ.

ಇ-ಮಾರುಕಟ್ಟೆ ಪೋರ್ಟಲ್‌ನಲ್ಲಿ ಭಾರತ ಜಗತ್ತಿನಲ್ಲಿ ಮೂರನೇ ಸ್ಥಾನದಲ್ಲಿದ್ದರೆ, ದಕ್ಷಿಣ ಕೊರಿಯಾ ಪ್ರಥಮ, ಸಿಂಗಪುರ ದ್ವಿತೀಯ ಸ್ಥಾನದಲ್ಲಿದೆ. ಉತ್ತರಪ್ರದೇಶ, ಗುಜರಾತ್, ಮಹಾರಾಷ್ಟ್ರ, ದೆಹಲಿ, ಮಧ್ಯಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಒರಿಸ್ಸಾ, ಬಿಹಾರ, ಅಸ್ಸಾಂ ಮತ್ತು ಉತ್ತರಾಖಂಡ ಪ್ರಸಕ್ತ ಹಣಕಾಸು ವರ್ಷದ ಖರೀದಿಯಲ್ಲಿ ಮುಂಚೂಣಿಯಲ್ಲಿವೆ.

2016ರ ಆಗಸ್ಟ್ 9ರಂದು ಸರ್ಕಾರಿ ಇ-ಮಾರುಕಟ್ಟೆ ಪೋರ್ಟಲ್ ಅನ್ನು ಆರಂಭಿಸಲಾಯಿತು. ಕೇಂದ್ರ ಸರ್ಕಾರದ ಎಲ್ಲ ಸಚಿವಾಲಯಗಳು ಮತ್ತು ಇಲಾಖೆಗಳು ತಮಗೆ ಬೇಕಾದ ಸರಕು ಮತ್ತು ಸೇವೆಗಳನ್ನು ಈ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಖರೀದಿಸಬೇಕಾಗಿದೆ.

ಶ್ರೀಲಂಕಾ, ಮಾರಿಷಸ್‌ನಲ್ಲಿ ಯುಪಿಐ ಸೇವೆಗೆ ಚಾಲನೆ

ನವದೆಹಲಿ(ಪಿಟಿಐ): ಶ್ರೀಲಂಕಾ ಮತ್ತು ಮಾರಿಷಸ್ ದೇಶಗಳಲ್ಲಿ ಭಾರತದ ಡಿಜಿಟಲ್ ಪಾವತಿ ಸೇವೆಗೆ (ಯುಪಿಐ) ಸೋಮವಾರ ಚಾಲನೆ ನೀಡಲಾಯಿತು. ಇದೇ ವೇಳೆ ಮಾರಿಷಸ್‌ನಲ್ಲಿ ಭಾರತ ರುಪೇ ಕಾರ್ಡ್ ಸೇವೆಯನ್ನೂ ಲೋಕಾರ್ಪಣೆಗೊಳಿಸಲಾಯಿತು.

ವರ್ಚುವಲ್ ವೇದಿಕೆ ಮೂಲಕ ನಡೆದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಪ್ರಧಾನಿ ನರೇಂದ್ರ ಮೋದಿ, 'ಮೂರು ದೇಶಗಳಿಗೆ ಈ ದಿನ ವಿಶೇಷವಾಗಿದ್ದು, ಆಧುನಿಕ ಡಿಜಿಟಲ್ ತಂತ್ರಜ್ಞಾನದ ಮೂಲಕ ನಮ್ಮ ನಡುವೆ ಐತಿಹಾಸಿಕ ಸಂಬಂಧ ಏರ್ಪಟ್ಟಿದೆ' ಎಂದರು.

ಶ್ರೀಲಂಕಾ ಮತ್ತು ಮಾರಿಷಸ್ ದೇಶಗಳಿಗೆ ಯುಪಿಐ ವ್ಯವಸ್ಥೆ ತುಂಬಾ ಪ್ರಯೋಜನಕಾರಿಯಾಗಲಿದೆ. ಇನ್ನು ಮುಂದೆ ಶ್ರೀಲಂಕಾ ಮತ್ತು ಮಾರಿಷಸ್‌ಗೆ ಹೋಗುವ ಭಾರತೀಯರಿಗೆ ಮತ್ತು ಭಾರತಕ್ಕೆ ಬರುವ ಮಾರಿಷಸ್ ಪ್ರಜೆಗಳಿಗೆ ಯುಪಿಐ ಸೇವೆ ಲಭ್ಯವಾಗಲಿದೆ. ಮಾರಿಷಸ್ ಪ್ರಧಾನಿ ಪ್ರವಿಂದ್ ಜುಗನ್ನಾತ್ ಮತ್ತು ಶ್ರೀಲಂಕಾದ ಅಧ್ಯಕ್ಷ ರನಿಲ್ ವಿಕ್ರಮಸಿಂಘೆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಇ.ಡಿ ವಿರುದ್ಧ ಸೊರೇನ್ ಅರ್ಜಿ; ಫೆ. 27ಕ್ಕೆ ವಿಚಾರಣೆ

ರಾಂಚಿ (ಪಿಟಿಐ): ಜಾರಿ ನಿರ್ದೇಶನಾಲಯದ (ಇ.ಡಿ) ವಿರುದ್ಧ ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಜಾರ್ಖಂಡ್ ಹೈಕೋರ್ಟ್ ಫೆಬ್ರುವರಿ 27ರವರೆಗೆ ಮುಂದೂಡಿದೆ.

ಹೇಮಂತ್ ಅವರ ಬಂಧನವನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದೆ.

ಚಿಲ್ಲರೆ ಹಣದುಬ್ಬರ 3 ತಿಂಗಳ ಕನಿಷ್ಠ

ನವದೆಹಲಿ (ಪಿಟಿಐ): ಆಹಾರದ ಬೆಲೆ ಇಳಿಕೆಯಿಂದಾಗಿ ಚಿಲ್ಲರೆ ಹಣದುಬ್ಬರವು ಜನವರಿಯಲ್ಲಿ ಮೂರು ತಿಂಗಳ ಕನಿಷ್ಠ ಶೇ 5.1ರಷ್ಟಕ್ಕೆ ಇಳಿದಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಸೋಮವಾರ ತಿಳಿಸಿದೆ.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧರಿಸಿದ ಹಣದುಬ್ಬರವು 2023ರ ಡಿಸೆಂಬರ್‌ನಲ್ಲಿ ಶೇ 5.69 ಮತ್ತು 2024ರ ಜನವರಿಯಲ್ಲಿ ಶೇ 6.52 ಇತ್ತು. ಹಣದುಬ್ಬರವು ಕಳೆದ ವರ್ಷ ಆಗಸ್ಟ್‌ನಲ್ಲಿ ಗರಿಷ್ಠ ಅಂದರೆ ಶೇ 6.83ರಷ್ಟು ದಾಖಲಾಗಿತ್ತು. ಎನ್‌ಎಸ್‌ಒ ಬಿಡುಗಡೆ ಮಾಡಿದ ಅಂಕಿ ಅಂಶಗಳ ಪ್ರಕಾರ, ಆಹಾರ ಪದಾರ್ಥಗಳ ದರದ ಹಣದುಬ್ಬರವು 2024ರ ಜನವರಿಯಲ್ಲಿ ಶೇ 8.3ರಷ್ಟಿತ್ತು. ಅದಕ್ಕೂ ಹಿಂದಿನ ತಿಂಗಳಲ್ಲಿ ಶೇ9.53ರಷ್ಟಿತ್ತು ಎಂದು ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ	
ಕೋಕ	18000-28500
ಹೊಸತು	28500-35000
ಹಳತು	41500-44000
ಕಾರ್ಕಳ	
ಹೊಸತು	25000-35000
ಹಳತು	30000-44500
ಕುಮಟ	
ಚಿಪ್ಪು	28010-31509
ಕೋಕ	15699-26569
ಫ್ಯಾಕ್ಟರಿ	11069-20990
ಹಳೆಚಾಲಿ	35609-37299
ಹೊಸಚಾಲಿ	30169-34509
ಪುತ್ತೂರು	
ಹೊಸತು	26500-35000
ಸಾಗರ	
ಬಿಳಿಗೋಟು	11099-29210
ಚಾಲಿ	24699-35600
ಕೋಕ	11989-27899
ಕೆಂಪುಗೋಟು	20569-34699
ರಾಶಿ	29280-48070
ಸಿಪ್ಪೆಗೋಟು	8899-19415
ಶಿವಮೊಗ್ಗ	
ಬೆಟ್ಟೆ	41100-54699
ಗೊರಬಲು	16399-33903
ರಾಶಿ	32058-48159
ಸರಕು	55500-83200
ಸಿದ್ದಾಪುರ	
ಬಿಳಿಗೋಟು	28299-31576
ಚಾಲಿ	35019-37499
ಕೋಕ	27399-31399
ಹೊಸಚಾಲಿ	31179-35179
ಕೆಂಪುಗೋಟು	30089-35899
ರಾಶಿ	42419-47139
ತಟ್ಟಿಬೆಟ್ಟೆ	39899-43819
ಶಿರಸಿ	
ಬೆಟ್ಟೆ	38561-44608
ಬಿಳಿಗೋಟು	25109-35099
ಚಾಲಿ	34039-38399
ಕೆಂಪುಗೋಟು	31618-35699
ರಾಶಿ	43208-47639
ಯಲ್ಲಾಪುರ	
ಅಪಿ	54779-65509
ಬಿಳಿಗೋಟು	21899-30199
ಚಾಲಿ	32299-38709
ಕೋಕ	16899-28899
ಕೆಂಪುಗೋಟು	26019-36799
ರಾಶಿ	46009-53869
ತಟ್ಟಿಬೆಟ್ಟೆ	37040-45600

ಮುಂಬೈ ಧಾರಣೆ

ಶೇಂಗಾ

12-02-2024

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1460 (1470)
ಒಂದು ವಾರದ ಡೆಲಿವರಿ	1455 (1465)
ಸೋಯಾ ಕಚ್ಚಾ	855 (860)
ಪಾಮ್ ವಾರದ ಡೆಲಿವರಿ	854 (855)
ಸೂರ್ಯಕಾಂತಿ ಎಣ್ಣೆ ಕಚ್ಚಾ	860 (860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹62,150 (62,175)

ಬೆಳ್ಳಿ ಕೆ.ಜಿ ₹71,200 (70,400)

ಆವರಣದಲ್ಲಿ ಶನಿವಾರದ ಧಾರಣೆ

ಸಾವಿರ ಸಿಬ್ಬಂದಿ ಕಡಿತಕ್ಕೆ ಸ್ಪೈಸ್ ಜೆಟ್ ಚಿಂತನೆ

ಮುಂಬೈ (ಪಿಟಿಐ): ಸ್ಪೈಸ್ ಜೆಟ್ ವಿಮಾನಯಾನ ಕಂಪನಿಯು ಮುಂಬರುವ ದಿನಗಳಲ್ಲಿ ಕನಿಷ್ಠ 1,000 ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಲು ಯೋಜಿಸಿದೆ ಎಂದು ಕಂಪನಿಯ ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಹಣಕಾಸಿನ ತೊಂದರೆಗಳ ಜೊತೆಗೆ ಕಾನೂನು ಸಮಸ್ಯೆಗಳನ್ನೂ ಕಂಪನಿ ಎದುರಿಸುತ್ತಿದೆ. ಕಂಪನಿಯಲ್ಲಿ ಈಗ ಇರುವ ವಿಮಾನಗಳ ಸಂಖ್ಯೆಯು ಬಹಳ ಕಡಿಮೆಯಾಗಿದೆ. ವಿಮಾನಗಳ ಸಂಖ್ಯೆಗೆ ಹೋಲಿಸಿದರೆ ಸಿಬ್ಬಂದಿ ಸಂಖ್ಯೆ ಹೆಚ್ಚು ಇದೆ. ಹಾಗಾಗಿ, ವೆಚ್ಚ ಕಡಿತದ ಭಾಗವಾಗಿ ಕೆಲವರನ್ನು ಕೆಲಸದಿಂದ ತೆಗೆಯಲು ಕಂಪನಿಯು ಮುಂದಾಗಿದೆ ಎಂದು ಹೇಳಿದ್ದಾರೆ.

ಪ್ರಸ್ತುತ ವಿಮಾನಯಾನ ಸಂಸ್ಥೆಯು ಸುಮಾರು 9,000 ಉದ್ಯೋಗಿಗಳನ್ನು ಹೊಂದಿದೆ. ಇದರಲ್ಲಿ ಶೇ 15ರಷ್ಟು ಕಡಿತಗೊಳಿಸಿದರೆ ಸುಮಾರು 1,350 ಜನರು ತಮ್ಮ ಉದ್ಯೋಗವನ್ನು ಕಳೆದುಕೊಳ್ಳುತ್ತಾರೆ. ವೆಚ್ಚ ಕಡಿಮೆ ಮಾಡಲು ವಜಾಗೊಳಿಸುವಿಕೆ ಅಗತ್ಯವಾಗಿದ್ದು, ಇದರಿಂದ ವಾರ್ಷಿಕ ₹100 ಕೋಟಿ ಉಳಿತಾಯ ಆಗಲಿದೆ. ಎಂದು ತಿಳಿಸಿದ್ದಾರೆ.

ಆದರೆ, ಉದ್ಯೋಗ ಕಡಿತದ ಕುರಿತು ಸ್ಪೈಸ್‌ಜೆಟ್ ಯಾವುದೇ ಅಧಿಕೃತ ಪ್ರತಿಕ್ರಿಯೆ ನೀಡಿಲ್ಲ.

ಇಂಗ್ಲೆಂಡ್ ವಿರುದ್ಧದ ಮೂರನೇ ಟೆಸ್ಟ್ ಪಂದ್ಯಕ್ಕೆ ಭಾರತ ತಂಡ ಪ್ರಕಟ

ರಾಹುಲ್ ಅಲಭ್ಯ; ಪಡಿಕ್ಕಲ್‌ಗೆ ಅವಕಾಶ

ರಾಜಕೋಟ್ (ಪಿಟಿಐ): ಭಾರತ ತಂಡದ ಪ್ರಮುಖ ಬ್ಯಾಟರ್ ಕೆ.ಎಲ್. ರಾಹುಲ್ ಅವರು ತೊಡೆಯ ನೋವಿನಿಂದ ಸಂಪೂರ್ಣ ಚೇತರಿಸಿಕೊಂಡಿಲ್ಲ. ಹೀಗಾಗಿ ಅವರು ಇಂಗ್ಲೆಂಡ್ ವಿರುದ್ಧ ಕ್ರಿಕೆಟ್ ಟೆಸ್ಟ್ ಸರಣಿಯ ಮೂರನೇ ಪಂದ್ಯದಲ್ಲೂ ಆಡುವುದಿಲ್ಲ ಎಂದು ಸೋಮವಾರ ಪ್ರಕಟಿಸಲಾಗಿದೆ.

ರಣಜಿಯಲ್ಲಿ ರನ್ ಹೊಳೆ ಹರಿಸುತ್ತಿರುವ ಕರ್ನಾಟಕದ ದೇವದತ್ತ ಪಡಿಕ್ಕಲ್ ಅವರು ಮೂರನೇ ಟೆಸ್ಟ್ ಆಡುವ ತಂಡಕ್ಕೆ ಆಯ್ಕೆಯಾಗಿದ್ದಾರೆ.

'ರಾಹುಲ್ ರಾಜಕೋಟ್‌ನಲ್ಲಿ ತಂಡವನ್ನು ಸೇರಿಕೊಂಡಿಲ್ಲ. ಸ್ಥಳೀಯ ಆಟಗಾರ ರವೀಂದ್ರ ಜಡೇಜಾ ಸೇರಿಕೊಂಡಿದ್ದಾರೆ. ಬಿಸಿಸಿಐನ ವೈದ್ಯಕೀಯ ತಂಡ ರಾಹುಲ್ ಅವರು ಆಡಲು ಅರ್ಹ ಎನ್ನುವ ಪ್ರಮಾಣಪತ್ರ ನೀಡಿಲ್ಲ' ಎಂದು ಬಿಸಿಸಿಐ ಮೂಲಗಳು ಪಿಟಿಐಗೆ ತಿಳಿಸಿದೆ.

ತಮಿಳುನಾಡು ವಿರುದ್ಧ ರಣಜಿ ಪಂದ್ಯದಲ್ಲಿ ಪಡಿಕ್ಕಲ್ 151 ರನ್ ಗಳಿಸಿ, ಆಯ್ಕೆ ಸಮಿತಿ ಅಧ್ಯಕ್ಷ ಅಜಿತ್ ಅಗರಕರ್



ದೇವದತ್ತ ಪಡಿಕ್ಕಲ್‌ ಪ್ರಜಾವಾಣಿ ಚಿತ್ರ

ಗಮನ ಸೆಳೆದಿದ್ದರು. ಅವರು ಪಂಜಾಬ್ ವಿರುದ್ಧ 193 ಮತ್ತು ಗೋವಾ ವಿರುದ್ಧ 103 ರನ್ ಗಳಿಸಿದ್ದಾರೆ. ಜೊತೆಗೆ ಇಂಗ್ಲೆಂಡ್ ಲಯನ್ಸ್ ವಿರುದ್ಧ ಭಾರತ 'ಎ' ತಂಡದ ಪರ 'ಟೆಸ್ಟ್' ಪಂದ್ಯ ಗಳ 3 ಇನಿಂಗ್ಸ್‌ಗಳಲ್ಲಿ ಕ್ರಮವಾಗಿ 105, 65 ಮತ್ತು 21 ರನ್ ಗಳಿಸಿದ್ದರು.

ಮೂರನೇ ಟೆಸ್ಟ್‌ಗೆ ತಂಡ ಹೀಗಿದೆ: ರೋಹಿತ್ ಶರ್ಮಾ (ನಾಯಕ), ಜಸ್‌ಪ್ರೀತ್ ಬೂಮ್ರಾ (ಉಪನಾಯಕ), ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್, ರಜತ್ ಪಾಟೀದಾರ್, ಸರ್ಫರಾಜ್ ಖಾನ್, ಧ್ರುವ್ ಜುರೆಲ್ (ವಿಕೆಟ್ ಕೀಪರ್), ಕೆ.ಎಸ್.ಭರತ್ (ವಿಕೆಟ್ ಕೀಪರ್), ರವಿಚಂದ್ರನ್ ಅಶ್ವಿನ್, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್, ಮೊಹಮ್ಮದ್ ಸಿರಾಜ್, ಮುಕೇಶ್ ಕುಮಾರ್ ಮತ್ತು ದೇವದತ್ತ ಪಡಿಕ್ಕಲ್

ರಾಜಕೋಟ್‌ಗೆ ಬಂದಿಳಿದ ಇಂಗ್ಲೆಂಡ್ ತಂಡ

ರಾಜಕೋಟ್ (ಪಿಟಿಐ): ಅಬುಧಾಬಿಯಲ್ಲಿ ಒಂದು ವಾರ ವಿರಾಮ ಪಡೆದ ಬಳಿಕ ಇಂಗ್ಲೆಂಡ್ ಕ್ರಿಕೆಟ್ ತಂಡ ಸೋಮವಾರ ಆತಿಥೇಯರ ವಿರುದ್ಧದ ಐದು ಪಂದ್ಯಗಳ ಸರಣಿಯ ಉಳಿದ ಪಂದ್ಯಕ್ಕಾಗಿ ಭಾರತಕ್ಕೆ ಮರಳಿದೆ. ಉಭಯ ತಂಡಗಳು 1–1 ರಿಂದ ಸಮಬಲ ಸಾಧಿಸಿವೆ.

ಮೂರನೇ ಟೆಸ್ಟ್ ಪಂದ್ಯ ನಡೆಯುವ ಸ್ಥಳಕ್ಕೆ ಇಂಗ್ಲೆಂಡ್ ತಂಡದ ಆಟಗಾರರು ಸೋಮವಾರ ಸಂಜೆ ಬಂದಿಳಿದಿದ್ದಾರೆ. ಫೆಬ್ರುವರಿ 15 ರಿಂದ ಇಲ್ಲಿ ಟೆಸ್ಟ್ ಪಂದ್ಯ ಆರಂಭವಾಗಲಿದೆ. ವಿಶಾಖಪಟ್ಟಣದಲ್ಲಿ 106 ರನ್‌ಗಳ ಸೋಲಿನ ನಂತರ, ಇಂಗ್ಲೆಂಡ್ ಆಟಗಾರರು ಹತ್ತು ದಿನಗಳ ವಿಶ್ರಾಂತಿಗಾಗಿ ಅಬುಧಾಬಿಗೆ ತೆರಳಿದರು. ಅಲ್ಲಿ ಆಟಗಾರರು ಗಾಲ್ಫ್ ಆಟದಲ್ಲಿ ತೊಡಗಿಸಿಕೊಂಡರು.

ಪ್ರವಾಸಿ ತಂಡವು ಮಂಗಳವಾರ ಬೆಳಿಗ್ಗೆಯಿಂದ ಎಸ್‌ಸಿಎ ಕ್ರೀಡಾಂಗಣದಲ್ಲಿ ಅಭ್ಯಾಸ ಪ್ರಾರಂಭಿಸಲಿದ್ದು, ಭಾರತದ ಆಟಗಾರರು ಮಧ್ಯಾಹ್ನ ಅಭ್ಯಾಸ ನಡೆಸಲಿದ್ದಾರೆ. ಭಾರತಕ್ಕೆ ಮರಳುವ ಒಂದು ದಿನ ಮೊದಲು, ಇಂಗ್ಲೆಂಡ್ ತಂಡದ ಮುಂಚೂಣಿ ಸ್ಪಿನ್ನರ್ ಜಾಕ್ ಲೀಚ್ ಮೊಣಕಾಲು ಗಾಯದಿಂದಾಗಿ ಉಳಿದ ಮೂರು ಟೆಸ್ಟ್ ಪಂದ್ಯಗಳಿಂದ ಹೊರಗುಳಿದಿದ್ದಾರೆ. ಲೀಚ್‌ಗೆ ಯಾವುದೇ ಬದಲಿ ಆಟಗಾರನನ್ನು ಆಯ್ಕೆ ಮಾಡಿಲ್ಲ.

ಎಫ್‌ಐಎಚ್ ಪ್ರೊ ಲೀಗ್ ಮಹಿಳಾ ಹಾಕಿ: ಭಾರತಕ್ಕೆ ಸೋಲು

ರೂರ್ಕೆಲಾ (ಪಿಟಿಐ): ಭಾರತದ ಮಹಿಳಾ ಹಾಕಿ ತಂಡವು ಎಫ್‌ಐಎಚ್ ಪ್ರೊ ಲೀಗ್ ಪಂದ್ಯದಲ್ಲಿ ಸೋಮವಾರ 1–2ರಿಂದ ಚೀನಾ ವಿರುದ್ಧ ಪರಾಭವಗೊಂಡಿತು.

ಪಂದ್ಯದ 7ನೇ ನಿಮಿಷದಲ್ಲಿ ಸಂಗೀತ ಕುಮಾರಿ ಅವರು ಭಾರತಕ್ಕೆ ಆರಂಭಿಕ ಮುನ್ನಡೆ ಒದಗಿಸಿದರು. ಆದರೆ, ನಂತರದಲ್ಲಿ ಚೀನಾ ಆಟಗಾರ್ತಿಯರು ಚುರುಕಿನ ಆಟವಾಡಿದರು. 14ನೇ ನಿಮಿಷದಲ್ಲಿ ಪೆನಾಲ್ಟಿ ಕಾರ್ನರ್‌ನಲ್ಲಿ ಸಿಕ್ಕ ಅವಕಾಶವನ್ನು ಗು ಬಿಂಗ್‌ಫೆಂಗ್ ಗೋಲಾಗಿ ಪರಿವರ್ತಿಸಿ ಸಮಬಲ ಸಾಧಿಸಿದರು. 53ನೇ ನಿಮಿಷದಲ್ಲಿ ಬಿಂಗ್‌ಫೆಂಗ್ ಮತ್ತೊಂದು ಗೋಲು ದಾಖಲಿಸಿ ತಂಡಕ್ಕೆ ಗೆಲುವು ತಂದುಕೊಟ್ಟರು.

ಫೆ.3 ರಂದು ಭುವನೇಶ್ವರದಲ್ಲಿ ನಡೆದ ಹಿಂದಿನ ಪಂದ್ಯದಲ್ಲೂ ಭಾರತವು 1-2 ಅಂತರದಿಂದ ಚೀನಾ ವಿರುದ್ಧ ಪರಾಭವಗೊಂಡಿತ್ತು.

ಕೆನ್ಯಾದ ಮ್ಯಾರಥಾನ್ ತಾರೆ ಸಾವು

ಕಾರು ಅಪಘಾತ: ಸ್ಥಳದಲ್ಲೇ ಕೋಚ್ ಕೂಡ ಮೃತ

ನೈರೋಬಿ (ಎಪಿ): ದೀರ್ಘ ಅಂತರದ ಓಟದಲ್ಲಿ ಸೂಪರ್‌ಸ್ಟಾರ್ ಪಟ್ಟಕ್ಕೇರುವ ಹಾದಿಯಲ್ಲಿದ್ದ ಮ್ಯಾರಥಾನ್ ವಿಶ್ವದಾಖಲೆ ವೀರ, ಕೆನ್ಯಾದ ಕೆಲ್ವಿನ್ ಕಿಪ್ಟಮ್ ಭಾನುವಾರ ರಾತ್ರಿ ಕಾರು ಅಪಘಾತದಲ್ಲಿ ದಾರುಣವಾಗಿ ಮೃತಪಟ್ಟಿದ್ದಾರೆ. ಮುಂಬರುವ ಪ್ಯಾರಿಸ್ ಒಲಿಂಪಿಕ್ಸ್ ಸ್ವರ್ಣಪದಕಕ್ಕೆ 24 ವರ್ಷದ ಕಿಪ್ಟಮ್ ನೆಚ್ಚಿನ ಸ್ಪರ್ಧಿಯಾಗಿದ್ದರು.

ಪಶ್ಚಿಮ ಕೆನ್ಯಾದ ರಿಫ್ಟ್ ಕಣಿವೆಯ ಕಿಪ್ಟಾಗತ್– ಎಲ್ಡೊರೆಟ್ ಹಾದಿಯಲ್ಲಿ ಅವರು ಚಲಾಯಿಸುತ್ತಿದ್ದ ಕಾರು ಕಿಪ್ಟಾಬೆಟ್ ಎಂಬಲ್ಲಿ ರಸ್ತೆಯಿಂದ ಜಾರಿ ಮರಕ್ಕೆ ಅಪ್ಪಳಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಅವರ ಕೋಚ್ ರುವಾಂಡದ ಜರ್ವೈಸ್ ಹಕಿಝಿಮನಾ ಕೂಡ ಸ್ಥಳದಲ್ಲೇ ಅಸುನೀಗಿದ್ದಾರೆ. ಕಾರಿನಲ್ಲಿದ್ದ 24 ವರ್ಷದ ಮಹಿಳೆ ಗಂಭೀರವಾಗಿ ಗಾಯಗೊಂಡಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕಾರು ಸಂಪೂರ್ಣ ನಜ್ಜುಗುಜ್ಜಾಗಿದೆ.

ಕಳೆದ ಕೆಲವು ವರ್ಷಗಳಿಂದ



ಕೆಲ್ವಿನ್ ಕಿಪ್ಟಮ್‌ ಎಎಫ್‌ಪಿ ಚಿತ್ರ

ಸತತ ಸಾಧನೆಗಳಿಂದ ಅವರು ಸರ್ವಶ್ರೇಷ್ಠ ಓಟಗಾರನಾಗುವ ಭರವಸೆ ಮೂಡಿಸಿದ್ದರು. ತಮ್ಮ ಮೂರನೇ ಓಟದಲ್ಲೇ ಅವರು ವಿಶ್ವ ದಾಖಲೆ ಸ್ಥಾಪಿಸಿದ್ದರು. ಷಿಕಾಗೊ ಮ್ಯಾರಥಾನ್‌ನಲ್ಲಿ ಅವರು ಸ್ಥಾಪಿಸಿದ್ದ ವಿಶ್ವದಾಖಲೆಯನ್ನು ವಿಶ್ವ ಅಥ್ಲೆಟಿಕ್ಸ್ ಕಳೆದ ವಾರವಷ್ಟೇ ದೃಢೀಕರಿಸಿತ್ತು.

2022 ರಲ್ಲಿ ಸ್ಪೇನ್‌ನ ವಲೆನ್ಸಿಯಾ ಮ್ಯಾರಥಾನ್‌ನಲ್ಲಿ ಅವರು ಪದಾರ್ಪಣೆಯತ್ನದಲ್ಲೇ ಅತಿ ವೇಗವಾಗಿ ಓಡಿದ ಓಟಗಾರ ಎಂಬ ಹಿರಿಮೆ ಪಡೆದಿದ್ದರು. ಕಳೆದ ವರ್ಷ ಪ್ರತಿಷ್ಠಿತ ಮ್ಯಾರಥಾನ್ ಸ್ಪರ್ಧೆಗಳಾದ ಲಂಡನ್ ಮತ್ತು ಷಿಕಾಗೊ ರೇಸ್‌ನಲ್ಲೂ ಅವರು ವಿಜಯಿಯಾಗಿದ್ದರು. ಲಂಡನ್ ಮ್ಯಾರಥಾನ್‌ನಲ್ಲಿ ಅವರು ವಿಶ್ವದಾಖಲೆ ಸ್ಥಾಪಿಸಿದ್ದರು.

ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಕಿಪ್ಟಮ್ ಅವರು ಷಿಕಾಗೊ ಮ್ಯಾರಥಾನ್ ಓಟವನ್ನು 2ಗಂ.00.35 ಸೆಕೆಂಡಗಳಲ್ಲಿ ಕ್ರಮಿಸಿ, ಸ್ವದೇಶದ ಇನ್ನೊಬ್ಬ ಮಹಾನ್ ಓಟಗಾರ ಇಲ್ಯುಡ್ ಕಿಪ್ಚೊಗೆ ಅವರ ದಾಖಲೆಯನ್ನು 34 ಸೆಕೆಂಡುಗಳಿಂದ ಸುಧಾರಿಸಿದ್ದರು.

ಕಠಿಣ ಅಭ್ಯಾಸದ ಹಾದಿಯಲ್ಲಿ ಅವರು ಕೆಲವೊಮ್ಮೆ ವಾರಕ್ಕೆ 300 ಕಿ.ಮೀ. (190 ಮೈಲಿ) ಕೂಡ ಓಡುತ್ತಿದ್ದರು. ಏಪ್ರಿಲ್‌ನಲ್ಲಿ ರೋಟರ್‌ಡ್ಯಾಮ್‌ನಲ್ಲಿ ನಡೆಯಲಿರುವ ಮ್ಯಾರಥಾನ್ ಓಟವನ್ನು ಎರಡು ಗಂಟೆಯೊಳಗೆ ಪೂರೈಸುವ ವಿಶ್ವಾಸವನ್ನು ಇತ್ತೀಚೆಗಷ್ಟೇ ವ್ಯಕ್ತಪಡಿಸಿದ್ದರು.

ಪ್ಯಾಂಥರ್ಸ್‌ಗೆ ಭರ್ಜರಿ ಜಯ

ಕೋಲ್ಕತ್ತ (ಪಿಟಿಐ): ಅರ್ಜುನ್ ದೇಶ್ವಾಲ್ ಅವರ ಭರ್ಜರಿ ರೈಡಿಂಗ್ (20 ಪಾಯಿಂಟ್ಸ್) ಬಲದಿಂದ ಹಾಲಿ ಚಾಂಪಿಯನ್ ಜೈಪುರ್ ಪಿಂಕ್ ಪ್ಯಾಂಥರ್ಸ್ ತಂಡ, ಪ್ರೊ ಕಬಡ್ಡಿ ಲೀಗ್‌ನಲ್ಲಿ ಸೋಮವಾರ ಯು.ಪಿ ಯೋಧಾಸ್ ತಂಡವನ್ನು 67–30 ಪಾಯಿಂಟ್‌ಗಳ ದೊಡ್ಡ ಅಂತರದಿಂದ ಸದೆಬಡಿಯಿತು. ಇದರೊಂದಿಗೆ ಅಗ್ರ ಸ್ಥಾನವನ್ನು ಮರಳಿ ಪಡೆಯಿತು.

ದೇಶ್ವಾಲ್ ಅವರಿಗೆ ಸಬ್‌ಸ್ಟಿಟ್ಯೂಟ್ ರೈಡರ್ ಅಭಿಜಿತ್ ಮಲ್ಲಿಕ್ (9 ಪಾಯಿಂಟ್ಸ್), ರೈಡರ್‌ಗಳಾದ ಆಕಾಶ್ (7) ಮತ್ತು ಸುನೀಲ್ (5) ಬೆಂಬಲ ನೀಡಿದರು. ನೇತಾಜಿ ಒಳಾಂಗಣ ಕ್ರೀಡಾಂಗಣದಲ್ಲಿ ಪ್ರಮುಖ ಆಟಗಾರರಿಲ್ಲದೇ ಕೋಲ್ಕತ್ತ ಲೆಗ್‌ನ ಕೊನೆಯ ಪಂದ್ಯ ಆಡಿದ ಯೋಧಾಸ್ ಪರ ದೊಡ್ಡ ಸೋಲನ್ನು ಕಂಡಿತು. ರೈಡರ್ ಗಗನ ಗೌಡ 10 ಪಾಯಿಂಟ್ಸ್ ಗಳಿಸಿದರು.

ಬೆಂಗಾಲ್ ವಾರಿಯರ್ಸ್ ದಿನದ ಎರಡನೇ ಪಂದ್ಯದಲ್ಲಿ ಯು ಮುಂಬಾ ತಂಡವನ್ನು 46–34 ಪಾಯಿಂಟ್‌ಗಳಿಂದ ಸೋಲಿಸಿತು.

ಇಂದ್ರಜಿತ್–ವಿಜಯ್ ದಿಟ್ಟ ಆಟ

ರಣಜಿ ಟ್ರೋಫಿ: ರೋಚಕ ‘ಡ್ರಾ’ ಕಂಡ ಕರ್ನಾಟಕ–ತಮಿಳುನಾಡು ಪಂದ್ಯ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡು ತಂಡದ ಪ್ರಮುಖ ಬ್ಯಾಟರ್‌ಗಳಾದ ಬಾಬಾ ಇಂದ್ರಜಿತ್ ಮತ್ತು ವಿಜಯ್ ಶಂಕರ್ ಅವರು ಕರ್ನಾಟಕ ವಿರುದ್ಧ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯಕ್ಕೆ ರೋಚಕ ಅಂತ್ಯ ತಂದುಕೊಟ್ಟರು. ಅಂತಿಮವಾಗಿ, ನಾಲ್ಕನೇ ದಿನವಾದ ಸೋಮವಾರ ಪಂದ್ಯ ‘ಡ್ರಾ’ದಲ್ಲಿ ಕೊನೆಗೊಂಡು ಕರ್ನಾಟಕ ಮೊದಲ ಇನಿಂಗ್ಸ್ ಮುನ್ನಡೆಗಾಗಿ ಮೂರು ಪಾಯಿಂಟ್ ಪಡೆದು ನಿಟ್ಟುಸಿರುಬಿಟ್ಟಿತು. ಗೆಲುವಿನ ದಾರಿಯಲ್ಲಿ ಸಾಗಿದ್ದ ಆತಿಥೇಯ ತಂಡ ಅಂತಿಮವಾಗಿ ಒಂದು ಪಾಯಿಂಟ್ ಪಡೆಯಿತು.

ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ 355 ರನ್‌ಗಳ ದೊಡ್ಡ ಗುರಿಯ ಬೆನ್ನತ್ತಿದ್ದ ತಮಿಳುನಾಡು ನಿರೀಕ್ಷೆಗೆ ಮಿಗಿಲಾದ ಹೋರಾಟ ನಡೆಸಿತು. ಮೊದಲ ಇನಿಂಗ್ಸ್‌ನಲ್ಲಿ 155ಕ್ಕೆ ಉರುಳಿದ್ದ ತಮಿಳುನಾಡು ಒಂದು ಹಂತದಲ್ಲಿ ಗೆಲುವಿಗೆ 21 ಎಸೆತಗಳಲ್ಲಿ 31 ರನ್ ಗಳಿಸುವ ಸ್ಥಿತಿಗೆ ತಲುಪಿತ್ತು.

ಕ್ರೀಸ್‌ನಲ್ಲಿ ಬೇರೂರಿದ್ದ ಅನುಭವಿಗಳಾದ ಬಾಬಾ ಇಂದ್ರಜಿತ್ (98, 194 ಎಸೆತ) ಮತ್ತು ವಿಜಯ್ ಶಂಕರ್ (60, 107ಎ, 4x4, 6x1) ಅವರು ಗೆಲುವಿಗೆ ಯತ್ನಿಸುವಂತೆ ಕಂಡಿತ್ತು. ಆದರೆ 5 ವಿಕೆಟ್‌ಗೆ 324 ರನ್‌ಗಳಾಗಿದ್ದ ಈ ವೇಳೆ ನಾನ್ ಸ್ಟ್ರೈಕರ್‌ನಲ್ಲಿದ್ದ ಇಂದ್ರಜಿತ್, ವಿದ್ವತ್ ಕಾವೇರಪ್ಪ ಬೌಲಿಂಗ್‌ನಲ್ಲಿ ದುರದೃಷ್ಟಕರ ರೀತಿ ರನೌಟ್ ಆದರು.

ಐದು ರನ್‌ಗಳ ತರುವಾಯ ವಿಜಯ್ ಶಂಕರ್, ವೈಶಾಖ್ ಬೌಲಿಂಗ್‌ನಲ್ಲಿ ದೊಡ್ಡ ಹೊಡೆತಕ್ಕೆ ಯತ್ನಿಸಿ ಲಾಂಗ್‌ಆನ್‌ನಲ್ಲಿದ್ದ ಮಯಂಕ್ ಅಗರವಾಲ್‌ಗೆ ಕ್ಯಾಚಿತ್ತರು. ಮರು ಓವರ್‌ನಲ್ಲಿ ಲೋಕೇಶ್ವರ್ ನಿರ್ಗಮಿಸಿದಾಗ ಪಂದ್ಯದಲ್ಲಿ ಕರ್ನಾಟಕಕ್ಕೂ ಪೂರ್ಣ ಪಾಯಿಂಟ್ ಪಡೆಯುವ ಆಸೆ ಚಿಗುರಿತು. ಅಂತಿಮವಾಗಿ ಕೊನೆಯ ‘ಕಡ್ಡಾಯ ಓವರ್’ ಮುಗಿದಾಗ ಆತಿಥೇಯ ತಂಡ 8 ವಿಕೆಟ್‌ಗೆ 338 ರನ್ ಹೊಡೆಯಿತು. ಗುರಿಗಿಂತ 17 ರನ್ ಹಿಂದೆ ಬಿದ್ದಿತ್ತು.

ಕರ್ನಾಟಕ ಈ ಪಂದ್ಯದ ಮೂರು ಪಾಯಿಂಟ್‌ಗಳೊಡನೆ ಒಟ್ಟು 24 ಪಾಯಿಂಟ್ಸ್ ಕಲೆಹಾಕಿ ‘ಸಿ’ ಗುಂಪಿನ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು. ತಮಿಳುನಾಡು 22 ಪಾಯಿಂಟ್‌ಗಳೊಂದಿಗೆ ಎರಡನೇ ಸ್ಥಾನಕ್ಕೆ ಸರಿಯಿತು. ಈ ಪಂದ್ಯಕ್ಕೆ ಮೊದಲು ಎರಡೂ ತಂಡಗಳು ತಲಾ 21 ಪಾಯಿಂಟ್ಸ್ ಗಳಿಸಿದ್ದವು. ಗುಜರಾತ್ (19 ಪಾಯಿಂಟ್ಸ್) ಮೂರನೇ ಸ್ಥಾನಕ್ಕೇರಿತು.

ಕರ್ನಾಟಕ ಗುಂಪಿನ ಕೊನೆ ಪಂದ್ಯವನ್ನು ಫೆ.16ರಿಂದ ಹುಬ್ಬಳ್ಳಿಯಲ್ಲಿ ಚಂಡೀಗಢ ವಿರುದ್ಧ ಆಡಲಿದೆ

1 ವಿಕೆಟ್‌ಗೆ 36 ರನ್‌ಗಳೊಡನೆ ಅಂತಿಮ ದಿನದಾಟ ಮುಂದುವರಿಸಿದ ತಮಿಳುನಾಡು, ಇನ್ನೊಬ್ಬ ಆರಂಭ ಆಟಗಾರ ವಿಮಲ್ ಕುಮಾರ್ ಅವರನ್ನು ಕಳೆದುಕೊಂಡಾಗ ಮೊತ್ತ 75. ಈ ಹಂತದಲ್ಲಿ ಪ್ರದೋಷ್ ರಂಜನ್ ಪಾಲ್ (74) ಮತ್ತು ಇಂದ್ರಜಿತ್ ಮೂರನೇ ವಿಕೆಟ್‌ಗೆ 67 ರನ್ ಸೇರಿಸಿ ತಂಡ ಕುಸಿಯದಂತೆ ನೋಡಿಕೊಂಡರು. ಭೂಪತಿ ಕುಮಾರ್ ಮತ್ತು ಮೊಹಮ್ಮದ್ ನಿರ್ಗಮಿಸಿದಾಗ ತಂಡದ ಮೊತ್ತ 199. ಈ ಹಂತದಲ್ಲಿ ಇಂದ್ರಜಿತ್ ಜೊತೆಗೂಡಿದ ವಿಜಯ್ ಶಂಕರ್ ತಂಡವನ್ನು ಆತ್ಮವಿಶ್ವಾಸದಿಂದ ಆಡಿ ಮೊತ್ತ ಹೆಚ್ಚಿಸಿದರಲ್ಲದೇ ತಂಡವನ್ನು ಸೋಲಿನಿಂದ ಪಾರು ಮಾಡುವಂತೆ ಕಂಡಿತು. ಮಾತ್ರವಲ್ಲ, ಆರನೇ ವಿಕೆಟ್‌ಗೆ 125 ರನ್ ಸೇರಿಸಿ ಗೆಲುವಿನ ಆಸೆ ಚಿಗುರಿಸಿದರು.

ಈ ಜೊತೆಯಾಟದಿಂದ ಆತಂಕಗೊಂಡಿದ್ದ ಕರ್ನಾಟಕ ಕೆಲ ನಕಾರಾತ್ಮಕ ತಂತ್ರಗಳಿಗೆ ಮೊರೆಹೋಯಿತು. ಏಳು ಫೀಲ್ಡರ್‌ಗಳನ್ನು ಬೌಂಡರಿ ರೇಖೆ ಬಳಿ ನಿಯೋಜಿಸಿತು. ಹೊಸ ಚೆಂಡಿನಲ್ಲಿ ಹೆಚ್ಚಿನ ರನ್ ಬರಬಹುದೆಂಬ ಲೆಕ್ಕಾಚಾರದಲ್ಲಿ ಅದನ್ನು ಪಡೆಯಲು ಹೋಗಲಿಲ್ಲ. ಓವರುಗಳನ್ನು ವೇಗವಾಗಿ ಮಾಡಲಿಲ್ಲ. ಆಗಾಗ ಆಟಗಾರರ ನಡುವೆ ಚರ್ಚೆ ನಡೆಯಿತು. ಕರ್ನಾಟಕ ಕಡೆ ವೇಗದ ಬೌಲರ್ ವೈಶಾಖ ವಿಜಯಕುಮಾರ್ ಮೂರು ವಿಕೆಟ್ ಪಡೆದರು.



ತಮಿಳುನಾಡಿನ ಬಾಬಾ ಇಂದ್ರಜಿತ್ ಮತ್ತು ವಿಜಯ್ ಶಂಕರ್ ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಕರ್ನಾಟಕ 366
ತಮಿಳುನಾಡು 151
ಎರಡನೇ ಇನಿಂಗ್ಸ್:
ಕರ್ನಾಟಕ: 139 (56.4 ಓವರ್‌ಗಳಲ್ಲಿ)
ತಮಿಳುನಾಡು: 8 ವಿಕೆಟ್‌ಗೆ 338 (105 ಓವರುಗಳಲ್ಲಿ)
(ಭಾನುವಾರ: 1 ವಿಕೆಟ್‌ಗೆ 36)

ವಿಮಲ್ ಸಿ ಪಡಿಕ್ಕಲ್ ಬಿ ಶಶಿಕುಮಾರ್ 31 (107ಎ, 4x2)
ಪ್ರದೋಷ್ ಸಿ ಪಡಿಕ್ಕಲ್ ಬಿ ವೈಶಾಖ 74 (116ಎ, 4x0)
ಬಾಬಾ ಇಂದ್ರಜಿತ್ ರನ್‌ಔಟ್ (ವಿದ್ವತ್) 98 (194ಎ, 4x3)
ಭೂಪತಿ ಎಲ್‌ಬಿಡಬ್ಲ್ಯು ಬಿ ಹಾರ್ದಿಕ್ 19 (107ಎ, 4x2)
ಮೊಹಮ್ಮದ್ ಸಿ ಪಾಂಡೆ ಬಿ ಹಾರ್ದಿಕ್ 15 (13ಎ, 4x2, 6x1)
ವಿಜಯ್ ಶಂಕರ್ ಸಿ ಮಯಂಕ್ ಬಿ ವೈಶಾಖ 60 (107ಎ, 4x4, 6x1)
ಸಾಯಿಕಿಶೋರ್ ಔಟಾಗದೇ 7 (9ಎ)
ಲೋಕೇಶ್ವರ್ ಸಿ ಪಾಂಡೆ ಬಿ ವಿದ್ವತ್ 1 (3ಎ)
ಅಜಿತ್ ರಾಮ್ ಔಟಾಗದೇ 5 (5ಎ)

ಇತರೆ: 20 (ಬೈ 7, ಲೆಗ್‌ಬೈ 9, ವೈಡ್ 4)

ವಿಕೆಟ್ ಪತನ: 1–14 (ನಾರಾಯಣ್ ಜಗದೀಶನ್; 5.1), 2–75 (ವಿಮಲ್ ಕುಮಾರ್, 31.6), 3–142 (ಪ್ರದೋಷ್ ರಂಜನ್ ಪಾಲ್, 48.4), 4–177 (ಭೂಪತಿ ಕುಮಾರ್, 67.2), 5–199 (ಮೊಹಮ್ಮದ್, 71.2), 6– 324 (ಬಾಬಾ ಇಂದ್ರಜಿತ್, 101.4), 7–329 (ವಿಜಯ್ ಶಂಕರ್, 102.4), 8–330 (ಎಸ್.ಲೋಕೇಶ್ವರ್, 103.1)

ಬೌಲಿಂಗ್: ವಿದ್ವತ್ ಕಾವೇರಪ್ಪ 15–1–62–1, ವೈಶಾಖ ವಿಜಯಕುಮಾರ್ 22–2–71–3, ಶಶಿಕುಮಾರ್ 36–7–89–1, ರವಿಕುಮಾರ್ ಸಮರ್ಥ್ 8–0–14–0, ಹಾರ್ದಿಕ್ ರಾಜ್ 24–0–86–2.

ಪಂದ್ಯದ ಆಟಗಾರ: ದೇವದತ್ತ ಪಡಿಕ್ಕಲ್

ಫಲಿತಾಂಶ: ಪಂದ್ಯ ಡ್ರಾ– ಪಾಯಿಂಟ್ಸ್: ಕರ್ನಾಟಕ 3, ತಮಿಳುನಾಡು 1

ಫುಟ್‌ಬಾಲ್: ಒಲಿಂಪಿಕ್ಸ್‌ಗೆ ಅರ್ಹತೆ ಪಡೆದ ಅರ್ಜೆಂಟೀನಾ

ಕ್ಯಾರಾಕಸ್ (ವೆನೆಜುವೇಲಾ), (ಎಪಿ): ಟೋಕಿಯೊ ಒಲಿಂಪಿಕ್ಸ್ ಫುಟ್‌ಬಾಲ್ ಚಾಂಪಿಯನ್ ಬ್ರೆಜಿಲ್ ತಂಡ, ಪ್ಯಾರಿಸ್‌ನಲ್ಲಿ ನಡೆಯಲಿರುವ ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಅರ್ಹತೆ ಪಡೆಯಲು ವಿಫಲವಾಗಿದೆ. ಅರ್ಜೆಂಟೀನಾ ತನ್ನ ಪ್ರಬಲ ಪ್ರಾದೇಶಿಕ ಎದುರಾಳಿ ಬ್ರೆಜಿಲ್ ತಂಡವನ್ನು ಭಾನುವಾರ ನಡೆದ ಫುಟ್‌ಬಾಲ್ ಅರ್ಹತಾ ಟೂರ್ನಿಯ ಪಂದ್ಯದಲ್ಲಿ 1–0 ಗೋಲಿನಿಂದ ಸೋಲಿಸಿ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಿತು.

2004ರ ನಂತರ ಇದೇ ಮೊದಲ ಬಾರಿ ಬ್ರೆಜಿಲ್ ತಂಡ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲು ವಿಫಲವಾಗಿದೆ. ಇಲ್ಲಿನ ಬ್ರಜಿಜಿಡೊ ಇರಿಯಾರ್ಟೆ ಕ್ರೀಡಾಂಗಣದಲ್ಲಿ ನಡೆದ 23 ವರ್ಷದೊಳಗಿನವರ ತಂಡಗಳ ನಡುವಣ ಪಂದ್ಯದಲ್ಲಿ ಲೂಸಿಯಾನೊ ಗೊಂಡೌ ಅರ್ಜೆಂಟೀನಾ ಪರ ನಿರ್ಣಾಯಕ ಗೋಲು ಗಳಿಸಿದರು.

ಪಂದ್ಯದ 73ನೇ ನಿಮಿಷ ವಲೆಂಟಿನ್ ಬಾರ್ಕೊ ಅವರಿಂದ ಬಂದ ಅಡ್ಡಪಾಸ್‌ನಲ್ಲಿ ಲೂಸಿಯಾನೊ ಅವರು ಬ್ರೆಜಿಲ್ ಗೋಲ್‌ಕೀಪರ್ ಮೈಕೆಲ್ ಅವರನ್ನು ವಂಚಿಸಿ ಚೆಂಡನ್ನು ಗೋಲಿನೊಳಗೆ ಹೆಡ್ ಮಾಡಿದರು.

ಬ್ರೆಜಿಲ್ ತಂಡ 2016ರ ರಿಯೊ ಡಿ ಜನ್ಯೆರೊ ಮತ್ತು 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪುರುಷರ ವಿಭಾಗದಲ್ಲಿ ಚಾಂಪಿಯನ್ ಆಗಿತ್ತು.

ಬೆಂಗಳೂರು ಓಪನ್ ಟೆನಿಸ್ ಟೂರ್ನಿ: ಸುಮಿತ್ ಕಣಕ್ಕೆ ಇಂದು

ಎರಡನೇ ಸುತ್ತಿಗೆ ರಾಮಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ಭಾರತದ ರಾಮಕುಮಾರ್ ರಾಮನಾಥನ್ ಅವರು ಸೋಮವಾರ ಆರಂಭವಾದ ಬೆಂಗಳೂರು ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ಎರಡನೇ ಸುತ್ತಿಗೆ ಮುನ್ನಡೆದರು.

ನಗರದ ಕೆಎಸ್‌ಎಲ್‌ಟಿಎ ಕ್ರೀಡಾಂಗಣದಲ್ಲಿ ನಡೆದ ಆರಂಭಿಕ ಸುತ್ತಿನ ಪಂದ್ಯದಲ್ಲಿ ರಾಮಕುಮಾರ್ ಅವರು 6-7(4), 7-5, 6-4 ಸೆಟ್‌ಗಳಿಂದ ಫ್ರಾನ್ಸ್‌ನ ಮ್ಯಾಕ್ಸಿಮ್ ಜಾನ್ವಿಯರ್ ಅವರನ್ನು ಹಿಮ್ಮೆಟ್ಟಿಸಿದರು.

ಟೂರ್ನಿಗೆ ವೈಲ್ಡ್ ಕಾರ್ಡ್ ಪ್ರವೇಶ ಪಡೆದಿದ್ದ 29 ವರ್ಷ ವಯಸ್ಸಿನ ಭಾರತದ ಆಟಗಾರ, ತೀವ್ರ ಹೋರಾಟದ ನಡುವೆಯೂ ಟೈಬ್ರೇಕರ್‌ನಲ್ಲಿ ಮೊದಲ ಸೆಟ್ ಕಳೆದುಕೊಂಡರು.

ನಂತರ ಪುಟಿದೆದ್ದ ಅವರು ವೇಗದ ಸರ್ವ್, ನಿಖರ ರಿಟರ್ನ್‌ಗಳ ಮೂಲಕ ಹಿಡಿತ ಸಾಧಿಸಿದರು.

ಎರಡು ಗಂಟೆ 26 ನಿಮಿಷ ನಡೆದ ಸೆಣಸಾಟದಲ್ಲಿ ತವರಿನ ಪ್ರೇಕ್ಷಕರ ಎದುರು ರಾಮಕುಮಾರ್ ಗೆದ್ದು ಬೀಗಿದರು.

ಈ ಗೆಲುವಿನೊಂದಿಗೆ ರಾಮಕುಮಾರ್ ಅವರು ಮ್ಯಾಕ್ಸಿಮ್ ಅವರೊಂದಿಗೆ ಗೆಲುವಿನ ದಾಖಲೆಯನ್ನು 2–1ಕ್ಕೆ ಹೆಚ್ಚಿಸಿಕೊಂಡರು. ಅವರು ಮುಂದಿನ ಸುತ್ತಿನಲ್ಲಿ ಅಗ್ರ ಶ್ರೇಯಾಂಕದ ಇಟಲಿಯ ಲುಕಾ ನಾರ್ಡಿ ಮತ್ತು ಫ್ರಾನ್ಸ್‌ನ ಲಕ್ಕಿ ಲೂಸರ್ ಡಾನ್ ಆಡೆಡ್ ನಡುವಿನ ಪಂದ್ಯದ ವಿಜೇತರನ್ನು ಎದುರಿಸಲಿದ್ದಾರೆ.

ಮತ್ತೊಂದು ಪಂದ್ಯದಲ್ಲಿ ಶ್ರೇಯಾಂಕರಹಿತ ಆಟಗಾರ, ಟುನೀಶಿಯಾದ ಮೊಯೆಜ್ ಎಚಾರ್ಗುಯಿ ಅವರು ಮೂರನೇ ಶ್ರೇಯಾಂಕದ ಡುಜೆ ಅಜ್‌ಡುಕೋವಿಕ್ (ಕ್ರೊವೇಷಿಯಾ) ಅವರಿಗೆ ಆಘಾತ ನೀಡಿದರು. ಒಂದೂವರೆ ಗಂಟೆಗಳ ಹೋರಾಟದಲ್ಲಿ ಟುನೀಶಿಯಾದ ಆಟಗಾರ 6-2, 6-4 ರಿಂದ ಕ್ರೊವೇಷಿಯಾ ಆಟಗಾರನನ್ನು ನೇರ ಸೆಟ್‌ಗಳಿಂದ ಸೋಲಿಸಿದರು.

ಭಾರತದ ಅಗ್ರಗಣ್ಯ ಆಟಗಾರ ಸುಮಿತ್ ನಗಾಲ್ ಅವರು ಮಂಗಳವಾರ ಫ್ರೆಂಚ್ ಆಟಗಾರ ಜೆಫ್ರಿ ಬ್ಲಾಂಕಾನಿಯಾಕ್ಸ್ ವಿರುದ್ಧ ಅಭಿಯಾನ ಆರಂಭಿಸುವರು.

ಫಲಿತಾಂಶಗಳು: ಪ್ರಧಾನ ಸುತ್ತು: ರಾಮಕುಮಾರ್ ರಾಮನಾಥನ್ (ಭಾರತ) 6-7 (4), 7-5, 6-4ರಿಂದ ಮ್ಯಾಕ್ಸಿಮ್ ಜಾನ್ವಿಯರ್ (ಫ್ರಾನ್ಸ್) ವಿರುದ್ಧ, ಮೊಯೆಜ್ ಎಚಾರ್ಗುಯಿ (ಟುನೀಶಿಯಾ) 6-2, 6-4ರಿಂದ ಡುಜೆ ಅಜ್‌ಡುಕೋವಿಕ್ (ಕ್ರೊವೇಷಿಯಾ) ವಿರುದ್ಧ; ಗೌಥಿಯರ್ ಆನ್ಕ್ಲಿನ್ (ಬೆಲ್ಜಿಯಂ) 6-4, 1-6, 7-6 (5)ರಿಂದ ಜಿಯೋವಾನಿ ಫೋನಿಯೊ (ಇಟಲಿ) ವಿರುದ್ಧ ಜಯ ಗಳಿಸಿದರು.

ಅರ್ಹತಾ ಸುತ್ತು: ಬರ್ನಾಡ್ ಟಾಮಿಕ್ 6-4, 6-2ರಿಂದ ಜೊನಾಸ್ ಫೊರೆಜ್ಟೆಕ್ ಎದುರು; ಚುನ್–ಹ್ಸಿನ್ ತ್ಸೆಂಗ್ 7-5, 4-6, 6-2ರಿಂದ ಯುನ್ ಸಿಯೋಂಗ್ ಚುಂಗ್ ಎದುರು; ವಿನ್ಸೆಂಟ್ ರುಗ್ಗೇರಿ 6-0, 6-2ರಿಂದ ವ್ಯಾನ್ ವೈಕ್ ಎದುರು ಗೆಲುವು ಪಡೆದರು.



ಭಾರತದ ರಾಮಕುಮಾರ್ ರಾಮನಾಥನ್ –ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್



ಚೆನ್ನೈ ಓಪನ್ ಚಾಲೆಂಜರ್ ಪ್ರಶಸ್ತಿ ಗೆದ್ದ ಸುಮಿತ್ ನಗಾಲ್ ಪಿಟಿಐ ಚಿತ್ರ

ರ‍್ಯಾಂಕಿಂಗ್: 98ನೇ ಸ್ಥಾನಕ್ಕೆ ಜಿಗಿದ ನಗಾಲ್

ನವದೆಹಲಿ (ಪಿಟಿಐ): ಭಾರತದ ಅಗ್ರಗಣ್ಯ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ಸೋಮವಾರ ಪ್ರಕಟಗೊಂಡ ಎಟಿಪಿ ಸಿಂಗಲ್ಸ್ ರ‍್ಯಾಂಕಿಂಗ್‌ನಲ್ಲಿ 23 ಸ್ಥಾನ ಬಡ್ತಿಪಡೆದು, ವೃತ್ತಿಜೀವನದಲ್ಲಿ ಮೊದಲ ಬಾರಿ ಅಗ್ರ 100ರೊಳಗೆ ಸ್ಥಾನ ಪಡೆದಿದ್ದಾರೆ.

ಭಾನುವಾರ ಮುಕ್ತಾಯಗೊಂಡ ಚೆನ್ನೈ ಓಪನ್ ಚಾಲೆಂಜರ್ ಟೂರ್ನಿಯಲ್ಲಿ ಚಾಂಪಿಯನ್ ಕಿರೀಟ ಧರಿಸಿದ ನಗಾಲ್ 121ರಿಂದ 98ನೇ ಸ್ಥಾನಕ್ಕೆ ಜಿಗಿದಿದ್ದಾರೆ. ಈ ಮಧ್ಯೆ ಸರ್ಬಿಯಾದ ನೊವಾಕ್ ಜೊಕೊವಿಕ್ ಅವರು ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಕಳೆದ ತಿಂಗಳು ನಡೆದ ಆಸ್ಟ್ರೇಲಿಯಾ ಓಪನ್‌ನ ಮೊದಲ ಸುತ್ತಿನಲ್ಲಿ ವಿಶ್ವದ 27ನೇ ಕ್ರಮಾಂಕದ ಅಲೆಕ್ಸಾಂಡರ್ ಬುಬ್ಲಿಕ್ (ಕಝಾಕಿಸ್ತಾನ) ಅವರನ್ನು ಸೋಲಿಸುವ ಮೂಲಕ ನಗಾಲ್ ಐತಿಹಾಸಿಕ ಸಾಧನೆ ಮಾಡಿದ್ದರು.

2019ರಲ್ಲಿ ಪ್ರಜ್ಞೇಶ್ ಗುಣೇಶ್ವರನ್ 75ನೇ ರ‍್ಯಾಂಕ್ ಪಡೆದಿದ್ದರು. ಅದಾದ ಬಳಿಕ ಅಗ್ರ 100ರಲ್ಲಿ ಸ್ಥಾನ ಪಡೆದ ಮೊದಲ ಭಾರತೀಯ ಎಂಬ ಹಿರಿಮೆಗೆ ನಗಾಲ್ ಪಾತ್ರವಾದರು.

‘ಪ್ರತಿಯೊಬ್ಬ ಟೆನಿಸ್ ಆಟಗಾರನಿಗೆ ಅಗ್ರ 100ರಲ್ಲಿ ಸ್ಥಾನ ಪಡೆಯುವುದು ದೊಡ್ಡ ಕನಸು. ಅದು ನನಸಾಗಿದ್ದರಿಂದ ತುಂಬಾ ಭಾವುಕನಾಗಿದ್ದೇನೆ. ಸಾಧನೆಯ ಹಾದಿಯಲ್ಲಿ ಏರಿಳಿತಗಳನ್ನು ಕಂಡರೂ ಈಗಿನ ಸಾಧನೆ ಖುಷಿ ತಂದಿದೆ’ ಎಂದು ಚೆನ್ನೈನಲ್ಲಿ ಪ್ರಶಸ್ತಿ ಸ್ವೀಕರಿಸಿ ನಗಾಲ್ ಪ್ರತಿಕ್ರಿಯಿಸಿದರು.



ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯು (ಕೆಎಸ್‌ಎಲ್‌ಟಿಎ) ಬೆಂಗಳೂರಿನಲ್ಲಿ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಆಸ್ಟ್ರೇಲಿಯಾ ಓಪನ್ ಪುರುಷರ ಡಬಲ್ಸ್ ಚಾಂಪಿಯನ್ ಹಾಗೂ ಎಟಿಪಿ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ (ಡಬಲ್ಸ್) ಪಡೆದ ಕನ್ನಡಿಗ ರೋಹನ್ ಬೋಪಣ್ಣ ಅವರನ್ನು ಸನ್ಮಾನಿಸಲಾಯಿತು.
–ಪ್ರಜಾವಾಣಿ ಚಿತ್ರ

ಆಕಾಶ್ ಪಾಂಡೆಗೆ 9 ವಿಕೆಟ್

ಸೂರತ್ (ಪಿಟಿಐ): ರೈಲ್ವೇಸ್ ಎಡಗೈ ಸ್ಪಿನ್ನರ್ ಆಕಾಶ್ ಪಾಂಡೆ ಒಂದೇ ಇನಿಂಗ್ಸ್‌ನಲ್ಲಿ 9 ವಿಕೆಟ್ ಪಡೆದು ವಿರಳ ಸಾಧನೆ ಪ್ರದರ್ಶಿಸಿದರು. ಅವರ ಅಮೋಘ ಬೌಲಿಂಗ್ (71ಕ್ಕೆ9) ನೆರವಿನಿಂದ ರೈಲ್ವೇಸ್ ರಣಜಿ ಟ್ರೋಫಿ ‘ಸಿ’ ಗುಂಪಿನ ಪಂದ್ಯದಲ್ಲಿ ಸೋಮವಾರ ಗೋವಾ ತಂಡದ ಮೇಲೆ 63 ರನ್‌ಗಳ ಜಯಪಡೆಯಿತು.

ರಣಜಿ ಟ್ರೋಫಿಯಲ್ಲಿ ಇಬ್ಬರು ಬೌಲರ್‌ಗಳು ಮಾತ್ರ ಇನಿಂಗ್ಸ್ ಒಂದರಲ್ಲಿ ಎಲ್ಲ ಹತ್ತು ವಿಕೆಟ್‌ಗಳನ್ನು ಪಡೆದಿದ್ದಾರೆ. ಬಂಗಾಳದ ಪ್ರೇಮಾಂಗ್ಶು ಚಟರ್ಜಿ (1957ರಲ್ಲಿ ಅಸ್ಸಾಂ ವಿರುದ್ಧ) ಮತ್ತು ರಾಜಸ್ತಾನದ ಪ್ರದೀಪ್ ಸುಂದರಂ ಈ ಇಬ್ಬರು. ಚಟರ್ಜಿ, ಅಸ್ಸಾಂ ವಿರುದ್ಧ 1957ರಲ್ಲಿ, ಸುಂದರಂ, ವಿದರ್ಭ ವಿರುದ್ಧ 1985ರಲ್ಲಿ ಈ ಸಾಧನೆ ಪ್ರದರ್ಶಿಸಿದ್ದರು. ಗೆಲುವಿಗೆ 306 ರನ್ ಗಳಿಸಬೇಕಿದ್ದ ಗೋವಾ 242 ರನ್‌ಗಳಿಗೆ ಆಲೌಟಾಯಿತು.